

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ


ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಏಪ್ರಿಲ್ 8 ಸೋಮವಾರ 2024

ಸಂಪುಟ: 44 | ಸಂಚಿಕೆ: 350 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಎ.14ಕ್ಕೆ ರಾಜ್ಯಕ್ಕೆ ಪ್ರಧಾನಿ ಮೋದಿ

ಚಿಕ್ಕಬಳ್ಳಾಪುರದಲ್ಲಿ ಬೃಹತ್ ಸಮಾವೇಶ, ಬೆಂಗಳೂರು ಉತ್ತರದಲ್ಲಿ ರೋಡ್ ಶೋ

ಬೆಂಗಳೂರು, ಏ.7–ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ದೇಶಾದ್ಯಂತ ಪ್ರಚಾರದ ಅಬ್ಬರ ಆರಂಭವಾಗಿದೆ. ಎಲ್ಲೆಡೆ ಸಭೆಗಳು, ರ್‍ಯಾಲಿ ಹಾಗೂ ರೋಡ್ ಶೋಗಳನ್ನು ಆಯೋಜನೆ ಮಾಡಲಾಗಿದೆ. ಪ್ರಧಾನಿ ನರೇಂದ್ರ ಮೋದಿಯವರು ಏ.14ರಂದು ಕರ್ನಾಟಕಕ್ಕೆ ಆಗಮಿಸಲಿದ್ದು, ಅಂದು ಬೆಂಗಳೂರು ಉತ್ತರ ಮತ್ತು ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಲ್ಲಿ ಪ್ರಚಾರ ನಡೆಸಲಿದ್ದಾರೆ.



ಅಂದು ಬೆಂಗಳೂರಿಗೆ ಆಗಮಿಸುವ ಮೋದಿ, ಮಧ್ಯಾಹ್ನ 3 ಗಂಟೆಗೆ ಮಾಜಿ ಸಚಿವ ಡಾ. ಕೆ.ಸುಧಾಕರ್ ಸ್ಪರ್ಧಿಸುತ್ತಿರುವ ಚಿಕ್ಕಬಳ್ಳಾಪುರ ಕ್ಷೇತ್ರಕ್ಕೆ ಭೇಟಿ ನೀಡಲಿದ್ದಾರೆ. ಚಿಕ್ಕಬಳ್ಳಾಪುರದಲ್ಲಿ ಬೃಹತ್ ಚುನಾವಣಾ ಪ್ರಚಾರ ಸಮಾವೇಶದಲ್ಲಿ ಭಾಗವಹಿಸಿದ ನಂತರ ಬೆಂಗಳೂರಿಗೆ ಆಗಮಿಸುವ ಅವರು, ಸಂಜೆ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಸ್ಪರ್ಧಿಸುತ್ತಿರುವ ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದಲ್ಲಿ ರೋಡ್ ಶೋ ನಡೆಸಲಿದ್ದಾರೆ. ಬ್ಯಾಟರಾಯನಪುರ ಮತ್ತು ಹೆಬ್ಬಾಳ ವಿಧಾನಸಭಾ ಕ್ಷೇತ್ರದಲ್ಲಿ ಮೋದಿಯವರ ರೋಡ್ ಶೋವನ್ನು ಆಯೋಜಿಸಲಾಗಿದ್ದು, ಈ ಸಂಬಂಧ ರಾಜ್ಯ ● 8ನೇ ಪುಟಕ್ಕೆ

ರಾಜ್ಯದಲ್ಲಿ ಇನ್ನೂ ಮೂರು ದಿನ ಬಿಸಿಗಾಳಿ

ಹವಾಮಾನ ಇಲಾಖೆ ಮಾಹಿತಿ

ಬೆಂಗಳೂರು, ಏ.7– ಬೀದರ್, ಬಾಗಲಕೋಟೆ, ಗದಗ, ಕಲಬುರಗಿ, ಕೊಪ್ಪಳ, ರಾಯಚೂರು, ಯಾದಗಿರಿ, ವಿಜಯಪುರ, ಹಾವೇರಿ, ಬಳ್ಳಾರಿ, ವಿಜಯನಗರ, ಚಿತ್ರದುರ್ಗ, ದಾವಣಗೆರೆ ಮತ್ತು ತುಮಕೂರು ಸೇರಿ ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಮುಂದಿನ ಮೂರು ದಿನಗಳ ಕಾಲ ಬಿಸಿಗಾಳಿ ಬೀಸಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.



ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಕನಿಷ್ಠ ಮತ್ತು ಗರಿಷ್ಠ ತಾಪಮಾನದಲ್ಲಿ 2 ರಿಂದ 3 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಏರಿಕೆಯಾಗಿದೆ. ಭಾನುವಾರ ರಾಜ್ಯದಲ್ಲಿ ಅತಿ ಹೆಚ್ಚು ತಾಪಮಾನ ಯಾದಗಿರಿ ಜಿಲ್ಲೆಯಲ್ಲಿ 44.6 ಡಿಗ್ರಿ ದಾಖಲಾಗಿದೆ. ಉಳಿದಂತೆ, ಕಲಬುರಗಿ ಜಿಲ್ಲೆಯಲ್ಲಿ 43.1 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ ಎಂದು ಮಾಹಿತಿ ನೀಡಿದೆ.

ಮಧ್ಯಾಹ್ನ 12ರಿಂದ ಮಧ್ಯಾಹ್ನ 3 ಗಂಟೆವರೆಗೆ ಬಿಸಿಲಿನಲ್ಲಿ ಓಡಾಡಬಾರದು. ಸಾಕಷ್ಟು ನೀರು ಕುಡಿಯಬೇಕು. ಹತ್ತಿ ಬಟ್ಟೆ ಧರಿಸಬೇಕು. ಬಿಸಿಲಿನಲ್ಲಿ ಓಡಾಡುವಾಗ ಛತ್ರಿ, ಕನ್ನಡಕ, ಟೋಪಿ, ಶೂ, ಚಪ್ಪಲಿ ಧರಿಸಬೇಕು. ಮದ್ಯಪಾನ ತ್ಯಜಿಸಿ ದ್ರವರೂಪದ ಪಾನೀಯ ಸೇವಿಸಬೇಕು. ಅಧಿಕ ಪೋಷಕಾಂಶ ಆಹಾರ ತಿನ್ನಬಾರದು. ವಾಹನ ನಿಲುಗಡೆ ಸ್ಥಳಗಳಲ್ಲಿ ಮಕ್ಕಳು, ಸಾಕುಪ್ರಾಣಿಗಳನ್ನು ಬಿಡಬಾರದು ಎಂದು ಸಲಹೆ ನೀಡಿದೆ.

ಇದೇ ಮೊದಲ ಬಾರಿಗೆ ರಾಜಧಾನಿಯಲ್ಲಿ ಅಧಿಕ ಉಷ್ಣಾಂಶ ದಾಖಲಾಗುತ್ತಿದೆ. ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಭಾನುವಾರ 37.8 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ವರದಿಯಾಗಿದೆ. 30 ವರ್ಷ ಬಳಿಕ ದಾಖಲೆ ಉಷ್ಣಾಂಶ ಕಂಡುಬರುತ್ತಿದೆ. 1996ರ ಮಾ.29ರಂದು 37.3 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು. ಮಾರ್ಚ್ ಮತ್ತು ಏಪ್ರಿಲ್ ತಿಂಗಳಲ್ಲಿ ಗರಿಷ್ಟ ಮತ್ತು ಕನಿಷ್ಠ ತಾಪಮಾನದಲ್ಲಿ ವಾಡಿಕೆಗಿಂತ 2 ರಿಂದ 3 ಡಿಗ್ರಿ ಸೆಲ್ಸಿಯಸ್ ಹೆಚ್ಚು ತಾಪಮಾನ ದಾಖಲಾಗುತ್ತಿದೆ. ರಾಜ್ಯದಲ್ಲಿ ತಾಪಮಾನ ಅಧಿಕವಾಗುತ್ತಿದ್ದು, ● 8ನೇ ಪುಟಕ್ಕೆ

ರಾಜ್ಯದಲ್ಲಿ 10 ಮಂದಿಗೆ ಕಾಲರಾ ದೃಢ

ಬೆಂಗಳೂರು, ಏ.7– ರಾಜ್ಯದಲ್ಲಿ ಕಾಲರಾ ಸೋಂಕು ದಿನೇ ದಿನೆ ಏರಿಕೆಯಾಗುತ್ತಿದೆ. ಬೆಂಗಳೂರು, ನಗರ ಜಿಲ್ಲೆ ಹಾಗೂ ರಾಮನಗರದಲ್ಲಿ ಸಾಂಕ್ರಾಮಿಕ ರೋಗದ ಪ್ರಮಾಣ ಏರಿಕೆಯಾಗುತ್ತಿದ್ದು, ಬಿಬಿಎಂಪಿ ವ್ಯಾಪ್ತಿಯಲ್ಲಿ 3 ಮಂದಿಗೆ ಕಾಲರಾ ಇರುವುದು ಪತ್ತೆಯಾಗುತ್ತಿದ್ದಂತೆ ನಗರ ಜಿಲ್ಲೆಯಲ್ಲಿ ಆರು ಹಾಗೂ ರಾಮನಗರದಲ್ಲಿ ಒಬ್ಬರಿಗೆ ಸೋಂಕು ತಗುಲಿರುವುದು ದೃಢಪಟ್ಟಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಬೆಂಗಳೂರು ವೈದ್ಯಕೀಯ ಕಾಲೇಜಿನಲ್ಲಿ ಒಟ್ಟು 49 ವೈದ್ಯಕೀಯ ವಿದ್ಯಾರ್ಥಿಗಳಿಗೆ ಕಾಲರಾ ಇರುವ ಶಂಕೆ ವ್ಯಕ್ತವಾಗಿದ್ದು ಮೂವರಿಗೆ ಕಾಲರಾ ಇರುವುದು ದೃಢಪಟ್ಟಿದೆ. ಸದ್ಯ ಚಿಕಿತ್ಸೆ ಪಡೆಯುತ್ತಿರುವ ವಿದ್ಯಾರ್ಥಿಗಳ ಆರೋಗ್ಯ ಸ್ಥಿರವಾಗಿದೆ. ವೈದ್ಯಕೀಯ ವಿದ್ಯಾರ್ಥಿಗಳಿಗೆ ● 8ನೇ ಪುಟಕ್ಕೆ

ಕಾಂಗ್ರೆಸ್‌ಗೆ ಬೆಂಬಲ ಘೋಷಿಸಿದ್ದ ಸೋಮಶೇಖರ್‌ಗೆ ಬಿಜೆಪಿ ನೋಟಿಸ್

ಬೆಂಗಳೂರು, ಏ.7– ಲೋಕಸಭಾ ಚುನಾವಣೆ 2024ರಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಬೆಂಬಲಿಸುತ್ತಿದ್ದಾರೆ ಎಂಬ ಕಾರಣಕ್ಕೆ ಶಾಸಕ ಎಸ್.ಟಿ.ಸೋಮಶೇಖರ್‌ಗೆ ಬಿಜೆಪಿ ನೋಟಿಸ್ ಜಾರಿ ಮಾಡಿದೆ. ಪಕ್ಷದ ವಿರುದ್ಧ ಕೆಲಸ ಮಾಡುತ್ತಿರುವ ಬಿಜೆಪಿ ರೆಬೆಲ್ ಶಾಸಕ ಎಸ್.ಟಿ. ಸೋಮಶೇಖರ್ ಅವರಿಗೆ ನೋಟಿಸ್ ಕೊಡಲಾಗಿದೆ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಹೇಳಿದ್ದಾರೆ. ಸುದ್ದಿಗಾರರ ಜತೆ ಮಾತನಾಡಿದ ಅವರು, ಬಿಜೆಪಿ ಪರ ಕೆಲಸ ಮಾಡುವ ಬದಲು ಕಾಂಗ್ರೆಸ್ ಪರ ಕೆಲಸ ಮಾಡುತ್ತಿರುವುದು ಗೊತ್ತಾಗಿದೆ ಈ ಬಗ್ಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದೆ. ಅಲ್ಲದೇ, ಸಭಾಧ್ಯಕ್ಷರಿಗೂ ಸಹ ದೂರು ಕೊಡಲಾಗಿದೆ ಎಂದು ಹೇಳಿದ್ದಾರೆ. ಅಂತೆಯೇ ಎಸ್ ಟಿ ಸೋಮಶೇಖರ್ ಮಾಡುತ್ತಿರುವುದು ತಪ್ಪು. ಶೀಘ್ರದಲ್ಲೇ ಅವರಿಗೆ ತಮ್ಮ ತಪ್ಪಿನ ಅರಿವಾಗಲಿದೆ. ಅವರು ತಮ್ಮ ತಪ್ಪಿಗೆ ಪಶ್ಚಾತ್ತಾಪ ಪಡಬೇಕಾಗುತ್ತದೆ. ಬಿಜೆಪಿಯಲ್ಲಿರುವ ಸೋಮಶೇಖರ್ ಅವರು ಬಿಜೆಪಿ ಅಭ್ಯರ್ಥಿಯ ಪರ ಕೆಲಸ ಮಾಡಬೇಕು. ಈಗಲೂ ಬಿಜೆಪಿ ಪರವಾಗಿ ಕೆಲಸ ಮಾಡಲು ಸೋಮಶೇಖರ್ ಅವರಿಗೆ ಅವಕಾಶವಿದೆ ಎಂದು ಹೇಳಿದರು.



ಬಿಜೆಪಿಗೆ 300ಕ್ಕೂ ಅಧಿಕ ಸ್ಥಾನ ಸಾಧ್ಯತೆ

ಚುನಾವಣಾ ಕಾರ್ಯತಂತ್ರ ನಿಪುಣ ಪ್ರಶಾಂತ್ ಕಿಶೋರ್ ಅಭಿಮತ

ನವದೆಹಲಿ, ಏ.7– ಮುಂಬರುವ ಲೋಕಸಭಾ ಚುನಾವಣೆಯಲ್ಲಿ ದಕ್ಷಿಣ ಮತ್ತು ಪೂರ್ವದ ರಾಜ್ಯಗಳಲ್ಲಿ ಕಳೆದ ಬಾರಿಗಿಂತ ಹೆಚ್ಚು ಸೀಟುಗಳನ್ನು ಗೆಲ್ಲುವ ಮೂಲಕ ಬಿಜೆಪಿಯು 300 ಸ್ಥಾನಗಳ ಗಡಿ ದಾಟುವ ಸಾಧ್ಯತೆಯಿದೆ ಎಂದು ಚುನಾವಣಾ ಕಾರ್ಯತಂತ್ರ ನಿಪುಣ ಪ್ರಶಾಂತ್ ಕಿಶೋರ್ ಹೇಳಿದರು.




ಸಂಪಾದಕರ ಜೊತೆ ನಡೆದ ಸಂವಾದದಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿಯನ್ನು ಕಟ್ಟಿಹಾಕಲು ತಮಗೆ ಲಭಿಸಿದ ಕೆಲವೊಂದು ಅತ್ಯುತ್ತಮ ಅವಕಾಶಗಳನ್ನು ವಿರೋಧ ಪಕ್ಷಗಳು 'ಸೋಮಾರಿತನ' ಮತ್ತು ತಪ್ಪು ತಂತ್ರಗಾರಿಕೆಯಿಂದ ಹಾಳುಮಾಡಿಕೊಂಡಿವೆ ಎಂದು ಅಭಿಪ್ರಾಯಪಟ್ಟರು.

ಬಿಜೆಪಿಯು ತೆಲಂಗಾಣದಲ್ಲಿ ಅತಿ ದೊಡ್ಡ ಅಥವಾ ಎರಡನೇ ಅತಿದೊಡ್ಡ ಪಕ್ಷ ಆಗಬಹುದು. ಒಡಿಶಾದಲ್ಲಿ ಅವರು ಅತ್ಯಧಿಕ ಸ್ಥಾನಗಳನ್ನು ಗೆಲ್ಲುವುದರಲ್ಲಿ ಯಾವುದೇ ಅನುಮಾನವಿಲ್ಲ. ಬಿಜೆಪಿಯು ಪಶ್ಚಿಮ ಬಂಗಾಳದಲ್ಲೂ ನಂ.1 ಪಕ್ಷ ಎನಿಸಿಕೊಳ್ಳಲಿದೆ. ತಮಿಳುನಾಡಿನಲ್ಲಿ ಅವರ ಮತಗಳಿಕೆ ಪ್ರಮಾಣ ಎರಡಂಕಿ ದಾಟಲಿದೆ ಎಂದು ಭವಿಷ್ಯ ನುಡಿದರು. ಆದರೆ ಬಿಜೆಪಿಯವರು ಹೇಳುತ್ತಿರುವಂತೆ 370 ಸ್ಥಾನಗಳನ್ನು ಗೆಲ್ಲುವ ಸಾಧ್ಯತೆ ಕಡಿಮೆ ಎಂದರು.

ಬಿಜೆಪಿ ಭದ್ರಕೋಟೆ ಎನಿಸಿರುವ ಉತ್ತರ ಭಾರತ ಮತ್ತು ಪಶ್ಚಿಮ ಭಾರತದಲ್ಲಿ ಕಳೆದ ಬಾರಿ ಗೆದ್ದ ಸೀಟುಗಳಲ್ಲಿ ಕನಿಷ್ಠ 100 ಸೀಟುಗಳನ್ನು ಕಾಂಗ್ರೆಸ್ ತನ್ನತ್ತ ಸೆಳೆಯಲು ಯಶಸ್ವಿಯಾದರಷ್ಟೇ ಎನ್‌ಡಿಎಗೆ ಒತ್ತಡ ಎದುರಾಗಲಿದೆ. ಆದರೆ ಅಂತಹ ಸಾಧ್ಯತೆ ತೀರಾ ಕಡಿಮೆ ಎಂದು ಹೇಳಿದರು. ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರು ಮೇಲಿಂದ ಮೇಲೆ ದಕ್ಷಿಣ ಭಾರತ ಪ್ರವಾಸ ಮಾಡಿ, ಜನರ ಮನಗೆಲ್ಲುವ ಪ್ರಯತ್ನ ಮಾಡಿದ್ದಾರೆ ● 8ನೇ ಪುಟಕ್ಕೆ

ಮಾಜಿ ಸ್ಪೀಕರ್ ರಮೇಶ್ ಕುಮಾರ್ ರಾಜಕೀಯ ನಿವೃತ್ತಿ

ಶ್ರೀನಿವಾಸಪುರ, ಏ.7– ಮುಂಬರುವ ವಿಧಾನಸಭಾ ಚುನಾವಣೆಗೆ ನಿಲ್ಲುವುದಿಲ್ಲ. ಗೌರವಯುತವಾಗಿ ಸಕ್ರಿಯ ರಾಜಕಾರಣದಿಂದ ನಿವೃತ್ತಿಯಾಗುತ್ತೇನೆ ಎಂದು ಮಾಜಿ ಸ್ಪೀಕರ್ ರಮೇಶ್ ಕುಮಾರ್ ಘೋಷಿಸಿದರು.



ಹುಟ್ಟೂರು ಶ್ರೀನಿವಾಸಪುರ ತಾಲೂಕು ಅಡ್ಡಗಲ್ ಗ್ರಾಮದಲ್ಲಿ ಭಾನುವಾರ ನಡೆದ ಕೋಲಾರ ಮೀಸಲು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಕೆ.ವಿ.ಗೌತಮ್ ಪರ ಪ್ರಚಾರ ಸಭೆ ಯಲ್ಲಿ ಮಾತನಾಡಿದರು. ರಾಜ್ಯದಲ್ಲಿ ರಾಜಕೀಯ ವ್ಯವಸ್ಥೆಯೇ ಕಲುಷಿತಗೊಂಡಿದೆ. ರಾಜಕಾರಣದಲ್ಲಿ ಮೌಲ್ಯಗಳು ಉಳಿದಿಲ್ಲ. ರಾಜಕೀಯ ಜೀವನದಲ್ಲಿ ಇಷ್ಟು ವರ್ಷ ನ್ಯಾಯಯುತವಾಗಿ ಬದುಕಿದ್ದೇನೆ ಎಂದು ತಿಳಿಸಿದರು.

ಹಣ ಪಡೆದು ರಾಜಕೀಯ ಮಾಡಿಲ್ಲ. ಪಕ್ಷದ ಕೆಲವರು ಹಣಕ್ಕೆ ತಲೆ ಮಾರಿಕೊಂಡು ನನಗೆ ಮೋಸ ಮಾಡಿ ಸೋಲಿಸಿದರು. ತಾಯಿಯಂತಿರುವ ಪಕ್ಷಕ್ಕೆ ದ್ರೋಹ ಮಾಡಿದರು. ಅಧಿಕಾರದಾಸೆಗೆ ಅನೈತಿಕ ರಾಜಕಾರಣ ಮಾಡುತ್ತಿದ್ದಾರೆ. ಅವರು ಸರ್ವನಾಶವಾಗುತ್ತಾರೆ. ಆದರೆ ತಾನು ಮುಂಬರುವ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸುವುದಿಲ್ಲ. ಗೌರವಯುತವಾಗಿ ಸಕ್ರಿಯ ರಾಜಕಾರಣದಿಂದ ನಿವೃತ್ತನಾಗುತ್ತೇನೆ ಎಂದು ಘೋಷಿಸಿದರು. ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಯಾವುದೇ ● 8ನೇ ಪುಟಕ್ಕೆ

5.60 ಕೋಟಿ ನಗದು, 3 ಕೆಜಿ ಚಿನ್ನ, 103 ಕೆಜಿ ಬೆಳ್ಳಿ ವಶ

ಬಳ್ಳಾರಿ, ಏ.7– ಇಲ್ಲಿನ ಬ್ರೂಸ್ ಪೇಟೆ ಪೊಲೀಸರು ನಡೆಸಿದ ಭರ್ಜರಿ ಕಾರ್ಯಾಚರಣೆಯಲ್ಲಿ ದಾಖಲೆ ಇಲ್ಲದ 5.60 ಕೋಟಿ ರೂ. ನಗದು ಮತ್ತು ಅಪಾರ ಪ್ರಮಾಣದ ಚಿನ್ನ, ಬೆಳ್ಳಿ ಆಭರಣಗಳನ್ನು ವಶಪಡಿಸಿಕೊಂಡಿದ್ದಾರೆ.

ಬಳ್ಳಾರಿಯ ಬ್ರೂಸ್ ಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ಕಂಬಳಿ ಬಜಾರ್‌ನಲ್ಲಿರುವ ಹೇಮಾ ಜ್ಯೂವೆಲರಿ ಶಾಪ್ ಮಾಲೀಕರ ಮನೆಯಲ್ಲಿ ಹಣ, ಆಭರಣಗಳನ್ನು ಜಪ್ತಿ ಮಾಡಲಾಗಿದೆ. ಒಟ್ಟು 5.60 ಕೋಟಿ ರೂ. ನಗದು, 3 ಕೆಜಿ ಬಂಗಾರ, 103 ಕೆಜಿ ಬೆಳ್ಳಿ ಆಭರಣ, 21 ಕೆಜಿ ಕಚ್ಚಾ ಬೆಳ್ಳಿಯನ್ನು ಪೊಲೀಸರು ಜಪ್ತಿ ಮಾಡಿದ್ದಾರೆ. ಜಪ್ತಿ ಮಾಡಿದ ನಗದು ಹವಾಲಾಕ್ಕೆ ಸಂಬಂಧಿಸಿದ ಹಣ ಎನ್ನಲಾಗಿದೆ.


ಪೊಲೀಸರ ಹೆಸರಲ್ಲಿ ಫ್ಲೈಯಿಂಗ್ ಸ್ಕ್ವಾಡ್ ಅಧಿಕಾರಿಗಳ ಸುಲಿಗೆಗೆ ಯತ್ನ!

ಮೂವರು ಐನಾತಿ ಖದೀಮರ ಬಂಧನ

ಮೈಸೂರು, ಏ.7–ಪೊಲೀಸರ ಹೆಸರಿನಲ್ಲಿ ಫ್ಲೈಯಿಂಗ್ ಸ್ಕ್ವಾಡ್ ಅಧಿಕಾರಿಗಳ ಬಳಿಯೇ ಸುಲಿಗೆ ಮಾಡಲು ಪ್ರಯತ್ನಿಸಿದ ಮೂವರು ಐನಾತಿ ಖದೀಮರನ್ನು ಪೊಲೀಸರು ಬಂಧಿಸಿದ್ದಾರೆ.

ಯರಗನಹಳ್ಳಿಯ ಮಾದೇಗೌಡ ಅಲಿಯಾಸ್ ಮಧು, ಯೋಗೇಶ್ ಅಲಿಯಾಸ್ ಅಭಿಷೇಕ್ ಮತ್ತು ವಿದ್ಯಾಶಂಕರ ಬಡಾವಣೆಯ ಕಾರ್ತಿಕ್ ಬಂಧಿತರಾಗಿದ್ದು, ಸುಲಿಗೆ ಪ್ರಯತ್ನದ ವೇಳೆಯೇ ಮಧು ಫ್ಲೈಯಿಂಗ್ ಸ್ಕ್ವಾಡ್‌ನಲ್ಲಿದ್ದ ಕಾನ್ಸ್‌ಟೇಬಲ್ ಹಿಡಿದಿದ್ದು, ಪರಾರಿಯಾಗಿದ್ದ ಇನ್ನಿಬ್ಬರನ್ನು ಆಲನಹಳ್ಳಿ ಠಾಣೆ ಪೊಲೀಸರು ನಂತರ ಬಂಧಿಸಿದ್ದಾರೆ.

ವಿವರ: ಲೋಕಸಭಾ ಚುನಾವಣೆಯ ವೇಳೆ ಅಕ್ರಮಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಫ್ಲೈಯಿಂಗ್ ಸ್ಕ್ವಾಡ್ ಅಧಿಕಾರಿಗಳು ದಿನದ 24 ಗಂಟೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಅದರಂತೆ ಏ.4ರಂದು ಮಧ್ಯರಾತ್ರಿ 1.30ರ ಸುಮಾರಿನಲ್ಲಿ ಫ್ಲೈಯಿಂಗ್ ಸ್ಕ್ವಾಡ್–3ರ ಅಧಿಕಾರಿ ಲೋಕೋಪಯೋಗಿ ಇಲಾಖೆ ಕೆ.ಇ.ಕಾರ್ಯಪ್ಪ, ಎಸ್‌ಡಿಎ ಮಹದೇವ, ಮೇಟಗಳ್ಳಿ ಠಾಣೆ ಕಾನ್ಸ್‌ಟೇಬಲ್ ಎಲ್.ಎಸ್.ಶಶಿಕುಮಾರ್ ಮತ್ತು ಕಾರು ಚಾಲಕ ಲಿಕಿನ್ ಖಾಸಗಿ ಎರ್ಟಿಗಾ (ಕೆಎ 09 ಎಎ 4747)ನಲ್ಲಿ ಸಾತಗಳ್ಳಿ ಬಸ್ ಡಿಪೋ ರಿಂಗ್ ರಸ್ತೆ ಕಡೆಯಿಂದ ದೇವೇಗೌಡ ಸರ್ಕಲ್ ಕಡೆಗೆ ಹೋಗುತ್ತಿದ್ದಾಗ ರಿಂಗ್ ರಸ್ತೆಯ ಹರಿಗೋವಿಂದ ದಾಸ್ ಹೋಟೆಲ್ ಮುಂಭಾಗ ಅಳವಡಿಸಿದ್ದ ಪೊಲೀಸ್ ಬ್ಯಾರಿಕೇಡ್ ಬಳಿ ಬಜಾಜ್ ಪ್ಲಾಟಿನ ಬೈಕ್ (ಕೆಎ 09 ಹೆಚ್‌ಎಕ್ಸ್ 0439) ಸಮೇತ ಮೂವರು ಯುವಕರು ನಿಂತಿದ್ದರು.



ಫ್ಲೈಯಿಂಗ್ ಸ್ಕ್ವಾಡ್ ವಾಹನ ಬರುತ್ತಿದ್ದಂತೆಯೇ ಅದನ್ನು ಅಡ್ಡಗಟ್ಟಿ ನಿಲ್ಲಿಸಿದ ಯುವಕರು, ಕಾರಿನ ಡ್ರೈವಿಂಗ್ ಸೀಟ್ ಹತ್ತಿರ ಬಂದು ಚಾಲಕನೊಂದಿಗೆ 'ಎಲೆಕ್ಷನ್ ಸಮಯವಾಗಿರುವುದರಿಂದ ಕಾರಿನಲ್ಲಿ ಹಣ ಇಟ್ಟುಕೊಂಡು ಓಡಾಡುತ್ತಿರುವವರ ಬಗ್ಗೆ ಪರಿಶೀಲನೆ ನಡೆಸಲು ಪೊಲೀಸರು ನಮ್ಮನ್ನು ಕಳುಹಿಸಿದ್ದಾರೆ. ಅದಕ್ಕಾಗಿ ನಾವು ಎಲ್ಲಾ ವಾಹನಗಳನ್ನೂ ಚೆಕ್ ಮಾಡುತ್ತಿದ್ದೇವೆ. ನಿಮ್ಮ ಬಳಿ ಇರುವ ಹಣ ಕೊಟ್ಟುಬಿಡಿ' ಎಂದು ಕೇಳಿದ್ದಾರೆ. ಈ ಯುವಕರನ್ನು ಪೊಲೀಸರೆಂದೇ ನಂಬಿದ ಎಸ್‌ಡಿಎ ಮಹದೇವ ಅವರು, ನಾವೂ ಸಹ ಎಲೆಕ್ಷನ್ ಡ್ಯೂಟಿಯಲ್ಲಿದ್ದೇವೆ ಎಂದು ಹೇಳಿದಾಗ, 'ನೀವು ಯಾರಾದರೆ ನಮಗೇನು? ಕಾರನ್ನು ಚೆಕ್ ಮಾಡುತ್ತೇವೆ. ನಿಮ್ಮ ಹತ್ತಿರವಿರುವ ಹಣ ಕೊಟ್ಟರೆ ಸರಿ, ಇಲ್ಲವಾದರೆ ನಿಮ್ಮನ್ನು ಜೀವ ಸಹಿತ ಮುಂದೆ ಹೋಗಲು ಬಿಡುವುದಿಲ್ಲ' ಎಂದು ಯುವಕರು ಧಮ್ಕಿ ಹಾಕಿದ್ದಾರೆ. ● 8ನೇ ಪುಟಕ್ಕೆ

ಇಂದು ನಾಮಪತ್ರ ಹಿಂಪಡೆಯಲು ಕೊನೆ ದಿನ

ಮೈಸೂರು, ಏ.7(ಎಸ್‌ಬಿಡಿ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ ಸೇರಿದಂತೆ ರಾಜ್ಯದಲ್ಲಿ ಮೊದಲ ಹಂತದಲ್ಲಿ ಚುನಾವಣೆ ನಡೆಯುತ್ತಿರುವ 14 ಕ್ಷೇತ್ರಗಳಲ್ಲಿ ನಾಮಪತ್ರ ಹಿಂಪಡೆಯಲು ಸೋಮವಾರ(ಏ.8) ಕಡೇ ದಿನವಾಗಿದೆ.

ಮೈಸೂರು–ಕೊಡಗು ಕ್ಷೇತ್ರದಲ್ಲಿ ನಾಮಪತ್ರ ಸಲ್ಲಿಸಿದ್ದ 28 ಅಭ್ಯರ್ಥಿಗಳಲ್ಲಿ ನಾಲ್ವರ ಉಮೇದುವಾರಿಕೆ ತಿರಸ್ಕೃತಗೊಂಡಿದ್ದವು. ಉಳಿದ 24 ಅಭ್ಯರ್ಥಿಗಳ ನಾಮಪತ್ರಗಳು ಸಿಂಧುವಾಗಿದ್ದು, ಈವರೆಗೆ ಯಾರೊಬ್ಬರೂ ನಾಮಪತ್ರ ಹಿಂಪಡೆದಿಲ್ಲ. ಮೈಸೂರು–ಕೊಡಗು ಕ್ಷೇತ್ರ ಸೇರಿ ರಾಜ್ಯದ 14 ಕ್ಷೇತ್ರಗಳಲ್ಲಿ 300 ಅಭ್ಯರ್ಥಿಗಳ ನಾಮಪತ್ರ ಕ್ರಮಬದ್ಧವಾಗಿದ್ದು, ನಾಮಪತ್ರ ಹಿಂಪಡೆಯಲು ಒಂದೇ ದಿನ ಬಾಕಿ ಉಳಿದಿದೆ.

ಪ್ರಬಲ ಅಭ್ಯರ್ಥಿಗಳು ತಮ್ಮ ಪಾಲಿನ ಮತಗಳನ್ನು ಸೆಳೆಯಬಲ್ಲ ಅಭ್ಯರ್ಥಿಗಳನ್ನು ನಾಮಪತ್ರ ಹಿಂಪಡೆಯುವಂತೆ ಮನವೊಲಿಸುವ ಅಂತಿಮ ಕಸರತ್ತು ನಡೆಸಿದ್ದಾರೆ. ಸೋಮವಾರ ಸಂಜೆ 5.30ರ ನಂತರ ಅಂತಿಮವಾಗಿ ಯಾವ ಅಭ್ಯರ್ಥಿಗಳು ಕಣದಲ್ಲಿ ಉಳಿಯಲಿದ್ದಾರೆಂದು ತಿಳಿಯಲಿದೆ.

ಏ.26ಕ್ಕೆ ಮತದಾನ: ಮೈಸೂರು–ಕೊಡಗು, ಚಾಮರಾಜನಗರ, ಮಂಡ್ಯ, ಉಡುಪಿ ಚಿಕ್ಕಮಗಳೂರು, ಹಾಸನ, ದಕ್ಷಿಣ ಕನ್ನಡ, ಚಿತ್ರದುರ್ಗ, ತುಮಕೂರು, ಬೆಂಗಳೂರು ಗ್ರಾಮಾಂತರ, ಬೆಂಗಳೂರು ಉತ್ತರ, ಬೆಂಗಳೂರು ಕೇಂದ್ರ, ಬೆಂಗಳೂರು ದಕ್ಷಿಣ, ಚಿಕ್ಕಬಳ್ಳಾಪುರ ಹಾಗೂ ಕೋಲಾರ ಲೋಕಸಭಾ ಕ್ಷೇತ್ರಗಳಲ್ಲಿ ಏ.26ರಂದು ಮತದಾನ ನಡೆಯಲಿದೆ.

ಮೈಸೂರು–ಕೊಡಗು ಲೋಕಸಭಾ ಚುನಾವಣಾ ಪ್ರಕ್ರಿಯೆಗಳು ಚುರುಕು

ಮತ ಎಣಿಕೆಗೆ ಜಿಲ್ಲಾಡಳಿತದಿಂದ ಪೂರ್ವ ತಯಾರಿ

- 11 ವಿಧಾನಸಭಾ ಕ್ಷೇತ್ರಕ್ಕೆ 11 ಸ್ಟ್ರಾಂಗ್ ರೂಂ
- ಆಯಾ ವಿಧಾನಸಭಾ ಕ್ಷೇತ್ರದಲ್ಲಿ ಮಸ್ಟರಿಂಗ್
- ಮಹಾರಾಣಿ ಮಹಿಳಾ ಕಾಲೇಜಿನಲ್ಲಿ ಮತ ಎಣಿಕೆ
- ಮತ ಎಣಿಕೆಗೆ ರೂಪುರೇಷೆ ಸಿದ್ಧ





ಮತ ಎಣಿಕೆ ನಡೆಯುವ ಮೈಸೂರಿನ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು. ಮತ್ತೊಂದು ಚಿತ್ರದಲ್ಲಿ ಮೈಸೂರಿನ ಬೇಡನ್ ಪೊವೆಲ್ ಸ್ಕೂಲ್‌ನಲ್ಲಿ ಸ್ಥಾಪಿಸಿರುವ ಚಾಮರಾಜ ವಿಧಾನಸಭಾ ಕ್ಷೇತ್ರದ ಸ್ಟ್ರಾಂಗ್ ರೂಂ (ಮಸ್ಟರಿಂಗ್ ಸೆಂಟರ್) ಮುಂದೆ ನಿಯೋಜನೆಗೊಂಡಿರುವ ಪೊಲೀಸರನ್ನು ಕಾಣಬಹುದು.

ಮೈಸೂರು, ಏ.7(ಬಿಎಲ್‌ಯು)– ಮೈಸೂರು–ಕೊಡಗು ಲೋಕಸಭಾ ಚುನಾವಣೆಗೆ ಇನ್ನು ಕೇವಲ 19 ದಿನ ಬಾಕಿ ಇದ್ದು, ಜೂನ್ 4 ರಂದು ನಡೆಯುವ ಮತ ಎಣಿಕೆಗೆ ಜಿಲ್ಲಾಡಳಿತ ಪೂರ್ವ ತಯಾರಿ ಆರಂಭಿಸಿದೆ.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ಮತದಾನ ಮಾಡಿದ ಮತಯಂತ್ರಗಳನ್ನು ಭದ್ರವಾಗಿಡುವ ಸ್ಟ್ರಾಂಗ್ ರೂಂ ಹಾಗೂ ಮತ ಎಣಿಕೆಗಾಗಿ ಮೈಸೂರಿನ ವಿನಾಯಕನಗರ (ಪಡುವಾರಹಳ್ಳಿ) ದ ಮಹಾರಾಣಿ ವಾಣಿಜ್ಯ ಮತ್ತು ನಿರ್ವಹಣಾ ಮಹಿಳಾ ಕಾಲೇಜನ್ನು ಗುರುತಿಸಲಾಗಿದೆ. ಈ ಸಂಬಂಧ ಕೇಂದ್ರ ಚುನಾವಣಾ ಆಯೋಗದ ಮಾರ್ಗದರ್ಶನದಂತೆ ಸಿದ್ಧತಾ ಪ್ರಕ್ರಿಯೆ ಆರಂಭಿಸಲಾಗಿದೆ. ಮೈಸೂರಿನ 11 ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 11 ಸ್ಟ್ರಾಂಗ್ ರೂಂ (ಮಸ್ಟರಿಂಗ್ ಸೆಂಟರ್) ಗಳನ್ನು ತೆರೆಯಲಾಗಿದೆ. ಸಿದ್ಧಾರ್ಥನಗರದ ಉಗ್ರಾಣದಿಂದ ಎಲೆಕ್ಟ್ರಾನಿಕ್ ಓಟಿಂಗ್ ಮೆಷಿನ್ (ಇವಿಎಂ) ಹಾಗೂ ಓಟರ್ ವೆರಿಫಿಕೇಷನ್ ಪೇಪರ್ ಆಡಿಟ್ ಟ್ರಯಲ್(ವಿವಿಪ್ಯಾಟ್) ತಂದು ಮಸ್ಟರಿಂಗ್ ಸೆಂಟರ್‌ನ ಸ್ಟ್ರಾಂಗ್ ರೂಂನಲ್ಲಿ ಈಗಾಗಲೇ ಇಡಲಾಗಿದೆ.

ಮೈಸೂರು ಹಳೆ ಜಿಲ್ಲಾಧಿಕಾರಿ ಕಚೇರಿ ಹಿಂಭಾಗದ ಬೇಡನ್ ಪೋವಲ್ ಸ್ಕೂಲ್‌ನಲ್ಲಿ ಚಾಮರಾಜ ಕ್ಷೇತ್ರದ ಸ್ಟ್ರಾಂಗ್ ರೂಂ, ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಕೃಷ್ಣರಾಜ ಕ್ಷೇತ್ರದ ಸ್ಟ್ರಾಂಗ್ ರೂಂ, ಊಟಿ ರಸ್ತೆಯ ಜೆಎಸ್‌ಎಸ್ ಕಾಲೇಜಿನಲ್ಲಿ ನರಸಿಂಹರಾಜ ಕ್ಷೇತ್ರದ ಸ್ಟ್ರಾಂಗ್ ರೂಂ ಹಾಗೂ ಜೆಎಲ್‌ಬಿ ರಸ್ತೆಯ ಮಹಾರಾಣಿ ಆರ್ಟ್ಸ್ ಕಾಲೇಜಿನಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಸ್ಟ್ರಾಂಗ್ ರೂಂ(ಮಸ್ಟರಿಂಗ್) ತೆರೆಯಲಾಗಿದೆ.


ಮತದಾನದ ಹಿಂದಿನ ದಿನ ಮಸ್ಟರಿಂಗ್ ಕಾರ್ಯ ಕೈಗೊಳ್ಳಲಾಗುವುದು. ಮತದಾನ ಮುಗಿದ ನಂತರ ಡಿ ಮಸ್ಟರಿಂಗ್‌ನಲ್ಲಿ ಮತಯಂತ್ರ ಮತ್ತು ವಿವಿ ಪ್ಯಾಟ್‌ಗಳನ್ನು ● 8ನೇ ಪುಟಕ್ಕೆ

ಚುನಾವಣಾ ಏಜೆಂಟ್‌ಗಳಿಗೆ ಪ್ರತ್ಯೇಕ ಬಣ್ಣದ ಗುರುತಿನ ಚೀಟಿ

ಮತದಾನದ ವೇಳೆ ರಾಜಕೀಯ ಪಕ್ಷಗಳಿಂದ ನಿಯೋಜಿತರಾಗುವ ಅಧಿಕೃತ ಚುನಾವಣಾ ಏಜೆಂಟ್‌ಗಳಿಗೆ ಒಂದು ವಿಧಾನಸಭಾ ಕ್ಷೇತ್ರಕ್ಕೆ ಸೀಮಿತವಾಗಿ ಪ್ರತ್ಯೇಕವಾದ ಬಣ್ಣದ ಗುರುತಿನ ಚೀಟಿಗಳನ್ನು ಈ ಬಾರಿ ನೀಡಲಾಗುತ್ತಿದೆ.

ಹೀಗೆ ನೀಡುವ ಗುರುತಿನ ಚೀಟಿಗಳು ಆಯಾ ವಿಧಾನಸಭಾ ಕ್ಷೇತ್ರಕ್ಕೆ ಮಾತ್ರ ಸೀಮಿತಗೊಂಡಿರುತ್ತದೆ. ಈ ಮೂಲಕ ಒಂದು ಕ್ಷೇತ್ರದ ಚುನಾವಣಾ ಏಜೆಂಟ್ ಮತ್ತೊಂದು ಕ್ಷೇತ್ರದ ಮತದಾನ ಕೇಂದ್ರಕ್ಕೆ ಪ್ರವೇಶಿಸುವುದನ್ನು ನಿರ್ಬಂಧಿಸಲಾಗಿದೆ. ಈ ಮೊದಲು ಚುನಾವಣಾ ಏಜೆಂಟ್ ಪ್ರತಿಯೊಂದು ಮತದಾನ ಕೇಂದ್ರಕ್ಕೂ ಭೇಟಿ ನೀಡುತ್ತಿದ್ದರು. ಇದರಿಂದ ಹಲವು ರೀತಿಯ ಗೊಂದಲ, ಗದ್ದಲಗಳು ನಡೆಯುತ್ತಿತ್ತು. ಈ ಹಿನ್ನೆಲೆ ಇದನ್ನು ನಿಯಂತ್ರಿಸಲು ಚುನಾವಣಾ ಆಯೋಗ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ. ಚುನಾವಣಾ ಏಜೆಂಟ್‌ಗೆ ಒಂದು ವಿಧಾನಸಭಾ ಕ್ಷೇತ್ರಕ್ಕೆ ಸೀಮಿತವಾಗಿ ಪ್ರತ್ಯೇಕ ಬಣ್ಣದ ಗುರುತಿನ ಚೀಟಿ ನೀಡಲಾಗುತ್ತಿದ್ದು, ಆತ ಆ ಕ್ಷೇತ್ರ ಬಿಟ್ಟು ಬೇರೆ ಕ್ಷೇತ್ರಕ್ಕೆ ಪ್ರವೇಶ ನೀಡುವಂತಿಲ್ಲ.

ಇಂದಿನಿಂದ ಏಳುಮಲೆ ಮಹದೇಶ್ವರ ಸ್ವಾಮಿ ಪೂಜಾ ಕಾರ್ಯಕ್ರಮ



ಮೈಸೂರು, ಏ.7(ಜಿಎ)–ಮೈಸೂರಿನ ಕೆ.ಜಿ.ಕೊಪ್ಪಲಿನಲ್ಲಿರುವ ಶ್ರೀ ಏಳುಮಲೆ ಮಹದೇಶ್ವರ ಸ್ವಾಮಿ ಕನ್ನಡ ಕಲಾವಿದರ ಸಂಘದ ವತಿಯಿಂದ ಯುಗಾದಿ ಹಬ್ಬದ ಅಂಗವಾಗಿ ಏ.8ರಿಂದ 11ರವರೆಗೆ ಶ್ರೀ ಏಳುಮಲೆ ಮಹದೇಶ್ವರ ಸ್ವಾಮಿ ಪೂಜಾ ಕಾರ್ಯಕ್ರಮ ಏರ್ಪಡಿಸಲಾಗಿದೆ. ಏ.8ರಂದು ಯುಗಾದಿ ಅಮಾವಾಸ್ಯೆ ಅಂಗವಾಗಿ ಬೆಳಗ್ಗೆ 8 ಗಂಟೆಯಿಂದ 11.30ರವರೆಗೆ ವಿಶೇಷ ಹೋಮ ನಡೆಸಲಾಗುತ್ತಿದ್ದು, ಅದೇ ದಿನ ಸಂಜೆ 6 ಗಂಟೆಗೆ ಶ್ರೀ ಏಳುಮಲೆ ಮಹದೇಶ್ವರ ಸ್ವಾಮಿಯ ಹುಲಿವಾಹನ ಮೆರವಣಿಗೆ ಏರ್ಪಡಿಸಿದ್ದು, ವಿದ್ಯುತ್ ದೀಪಗಳಿಂದ ಅಲಂಕೃತವಾದ ರಥದಲ್ಲಿ ಮೇಗಳ ಬೀದಿಯ ಶ್ರೀ ಸಿದ್ದಪ್ಪಾಜಿ ದೇವಸ್ಥಾನದಿಂದ ಹೊರಟು ಗ್ರಾಮದ ರಸ್ತೆಗಳಲ್ಲಿ ಜಯನಗರ ಹಾಗೂ ಪೈಬಸವಯ್ಯನಗರ, ಚಿನ್ನಿಗಿರಿಕೊಪ್ಪಲು ಪ್ರಮುಖ ರಸ್ತೆಗಳ ಮುಖಾಂತರ ವಾದ್ಯಗೋಷ್ಠಿ, ಬ್ಯಾಂಡ್‌ಸೆಟ್ ಸೇರಿದಂತೆ ವಿವಿಧ ಕಲಾತಂಡಗಳೊಡನೆ ಸಾಗಲಿದೆ. ಏ.9ರಂದು ಸಂಜೆ 7 ಗಂಟೆಗೆ ಸಿಂಧುವಳ್ಳಿ ಕಂಸಾಳೆ ತಂಡದವರಿಂದ ಶ್ರೀ ಏಳುಮಲೆ ಮಹದೇಶ್ವರ ಸ್ವಾಮಿಯ ಹರಿಕಥೆಯನ್ನು ಕಂಸಾಳೆ ರೂಪದಲ್ಲಿ ಪ್ರಸ್ತುತಪಡಿಸಲಿದ್ದಾರೆ. ಏ.10ರಂದು ಸಂಜೆ 7 ಗಂಟೆಗೆ ಮೈಸೂರು ಮಿಮಿಕ್ರಿ ಕುಮಾರ್ ಮತ್ತು ತಂಡದವರಿಂದ ಭಕ್ತಿ, ಭಾವಗೀತೆ ಕಾರ್ಯಕ್ರಮ ಆಯೋಜಿಸಿದ್ದು, ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಸಂಘದ ಪ್ರಕಟಣೆಯಲ್ಲಿ ತಿಳಿಸಿದೆ.

ಸಿಗ್ಮಾ ಆಸ್ಪತ್ರೆಯಲ್ಲಿ ಕಿಡ್ನಿ ಆರೋಗ್ಯ ತಪಾಸಣಾ ಶಿಬಿರ



ಸಿಗ್ಮಾ ಆಸ್ಪತ್ರೆಯಲ್ಲಿ ಉಚಿತ ಕಿಡ್ನಿ ಆರೋಗ್ಯ ತಪಾಸಣಾ ಶಿಬಿರ ನಡೆಸಲಾಯಿತು.

ಮೈಸೂರು,ಏ.7(ಜಿಎ)–ವಿಶ್ವ ಆರೋಗ್ಯ ದಿನ ಮತ್ತು ವಿಶ್ವ ಕಿಡ್ನಿ ದಿನದ ಅಂಗವಾಗಿ ಮೈಸೂರಿನ ಸಿಗ್ಮಾ ಆಸ್ಪತ್ರೆಯಲ್ಲಿ ಭಾನುವಾರ ಏರ್ಪಡಿಸಿದ್ದ ಉಚಿತ ಕಿಡ್ನಿ ಆರೋಗ್ಯ ತಪಾಸಣಾ ಶಿಬಿರಕ್ಕೆ ಆಶಾ ಕಿರಣ ಟ್ರಸ್ಟ್‌ನ ಚೇರ್ಮನ್ ಮತ್ತು ರಾಜ್ಯ ಐಎಪಿ ಅಧ್ಯಕ್ಷ ಡಾ.ಎಸ್.ಎನ್.ಮೋತಿ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಕಾಲ ಕಾಲಕ್ಕೆ ಸರಿಯಾಗಿ ಕಿಡ್ನಿ ಸಂಬಂಧಿತ ತಪಾಸಣೆ ಪರೀಕ್ಷೆಗಳನ್ನು ಮಾಡಿಸಿಕೊಂಡರೆ, ಶಸ್ತ್ರಚಿಕಿತ್ಸೆಯಿಂದ ತಪ್ಪಿಸಿಕೊಳ್ಳಬಹುದು ಎಂದರು.

ಡಾ. ಮಾದಪ್ಪ ಅವರನ್ನು ಸುಮಾರು ವರ್ಷಗಳಿಂದ ನೋಡಿದ್ದೇನೆ. ಮೈಸೂರಿನಲ್ಲಿ ಮೊದಲ ಬಾರಿಗೆ ಕಿಡ್ನಿ ಕಸಿ ಚಿಕಿತ್ಸೆಯನ್ನು ಮಾಡಿದವರು ಇವರೇ. ಸುಮಾರು 32 ವರ್ಷಗಳಿಂದ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಚಿಕಿತ್ಸೆಗಳನ್ನು ಮಾಡಿಕೊಂಡು ಬಂದಿದ್ದಾರೆ, ಮುಂದೆಯೂ ಈ ತರಹದ ಸೇವೆಯನ್ನು ಹೆಚ್ಚು ಹೆಚ್ಚು ಮಾಡಲಿ ಎಂದರು.

ಡಾ.ಕೆ.ಎಂ.ಮಾದಪ್ಪ ಮಾತನಾಡಿ, ಪ್ರತಿ ವರ್ಷ ಕಿಡ್ನಿ ತಪಾಸಣಾ ಶಿಬಿರವನ್ನು ಮಾಡಿಕೊಂಡು ಬಂದಿದ್ದೇವೆ. ಇದರಿಂದ ಆರಂಭದಲ್ಲೇ ತಪಾಸಣೆ ಮಾಡಿ ರೋಗ ಪತ್ತೆ ಮಾಡಿ ಸೂಕ್ತ ಚಿಕಿತ್ಸೆ ಒದಗಿಸಿದರೆ ಕಿಡ್ನಿ ವೈಫಲ್ಯವಾಗುವಂತದ್ದನ್ನು ತಪ್ಪಿಸಬಹುದು. ನಾವು ಸೂಕ್ಷ್ಮ ರಂಧ್ರ ಲ್ಯಾಪ್ರೋಸ್ಕೋಪಿಕ್ ಮೂಲಕ ಶಸ್ತ್ರಚಿಕಿತ್ಸೆಗಳನ್ನು ಮಾಡುತ್ತಿದ್ದೇವೆ. ಈಗ ಅತೀ ಹೆಚ್ಚು ಕಿಡ್ನಿ ಸ್ಟೋನ್ ಆಗುವಂಥದ್ದು, ಡಯಾಲಿಸಿಸ್, ಕಿಡ್ನಿ ಕಸಿ ಚಿಕಿತ್ಸೆಗಳು ಹೆಚ್ಚು ನಮ್ಮ ಆಸ್ಪತ್ರೆಯಲ್ಲಿ ಆಯುಷ್ಮಾನ್ ಯೋಜನೆಯಿಂದ ಉಚಿತವಾಗಿ ಮಾಡುತ್ತಿದ್ದೇವೆ. ಇದರಿಂದ ಬಡವರಿಗೆ ಅನುಕೂಲವಾಗುತ್ತದೆ, ಈವರೆಗೆ ಸರಿಸುಮಾರು 30 ಸಾವಿರಕ್ಕೂ ಹೆಚ್ಚು ಶಸ್ತ್ರಚಿಕಿತ್ಸೆಗಳನ್ನು ಮತ್ತು ಈವರೆಗೆ 50 ಹೆಚ್ಚು ಕಿಡ್ನಿ ಕಸಿ ಶಸ್ತ್ರಚಿಕಿತ್ಸೆಗಳನ್ನು ನಮ್ಮ ವಿಭಾಗದಿಂದ ಮಾಡಿದ್ದೇವೆ ಎಂದರು.

ಕಾರ್ಯಕ್ರಮದಲ್ಲಿ ಸಿಗ್ಮಾ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಎಸ್.ಜ್ಞಾನಶಂಕರ, ನಿರ್ದೇಶಕಿ ಡಾ.ರಾಜೇಶ್ವರಿ ಮಾದಪ್ಪ, ನೆಫ್ರೋಲಜಿಸ್ಟ್ ಡಾ.ಅನಿಕೇತ್ ಪ್ರಭಾಕರ್, ಮೂತ್ರಶಾಸ್ತ್ರಜ್ಞ ಡಾ.ಕೆ.ಎನ್. ಸೋಮಣ್ಣ ಉಪಸ್ಥಿತರಿದ್ದರು.

ಅಧಿಕ ಔಷಧಿಗಳ ಸೇವನೆಯಿಂದಲೇ ಅನಾರೋಗ್ಯ

ವಿಶ್ವ ಆರೋಗ್ಯ ದಿನಾಚರಣೆಯಲ್ಲಿ ಡಾ.ನಿರಂಜನ್ ಕಳವಳ

ಮೈಸೂರು, ಏ.7(ಜಿಎ)– ಅಧಿಕ ಔಷಧಗಳನ್ನು ಸೇವಿಸುವುದರಿಂದಲೇ ಮನುಷ್ಯ ಇಂದು ಹೆಚ್ಚು ಅನಾರೋಗ್ಯ ಪೀಡಿತನಾಗುತ್ತಿದ್ದಾನೆ ಎಂದು ಕರ್ನಾಟಕ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಡಾ.ಪ್ರೊ.ಎಸ್.ಆರ್.ನಿರಂಜನ್ ಕಳವಳ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆ ಮತ್ತು ಸುಯೋಗ್ ಶಿಕ್ಷಣ ಸಮೂಹ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಆಸ್ಪತ್ರೆಯಲ್ಲಿ ಆಯೋಜಿಸಿದ್ದ ವಿಶ್ವ ಆರೋಗ್ಯ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ಇಂದು ವ್ಯವಸಾಯಕ್ಕೆ ಉಪಯೋಗಿಸುತ್ತಿರುವ ಕೀಟನಾಶಕಗಳು ಆಹಾರ ಪದಾರ್ಥಗಳನ್ನು ಸೇರಿ ಮನುಷ್ಯನ ಸ್ವಾಯತ್ತ ಕ್ರಿಯೆಗೆ ಧಕ್ಕೆಯನ್ನುಂಟುಮಾಡಿ ಅನಾರೋಗ್ಯಕ್ಕೆ ನಾಂದಿಯಾಗುತ್ತಿರುವುದರಿಂದ ಆಹಾರ ಉತ್ಪಾದನೆಯಲ್ಲಿ ರೋಗ ನಿರೋಧಕ ವಂಶವಾಹಿ ತಂತ್ರಜ್ಞಾನದ ತಳಿಗಳನ್ನು ಅಭಿವೃದ್ಧಿಪಡಿಸುವುದರಿಂದ ಕೀಟನಾಶಕಗಳ ಉಪಯೋಗವನ್ನು ಕಡಿಮೆ ಮಾಡಬಹುದೆಂದು ಸಲಹೆ ನೀಡಿದರು.

ಈಗಾಗಲೇ ಈ ದಿಕ್ಕಿನಲ್ಲಿ ಸಂಶೋಧನೆಗಳು ನಡೆಯುತ್ತಿದ್ದು, ಹಲವಾರು ದೇಶಗಳು ರೋಗ ನಿರೋಧಕ ವಂಶವಾಹಿ ಆಹಾರ ಪದಾರ್ಥಗಳ ಉತ್ಪಾದನೆಯ ತಂತ್ರಜ್ಞಾನವನ್ನು ಅಳವಡಿಸಿಕೊಂಡಿದ್ದು, ನಮ್ಮ ದೇಶವೂ ಈ ದಿಕ್ಕಿನಲ್ಲಿ ಕಾರ್ಯೋನ್ಮುಖವಾಗಬೇಕೆಂದು ಅವರು ಹೇಳಿದರು.



ಮೈಸೂರಿನ ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆ ಮತ್ತು ಸುಯೋಗ್ ಶಿಕ್ಷಣ ಸಮೂಹ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಆಸ್ಪತ್ರೆಯಲ್ಲಿ ಆಯೋಜಿಸಿದ್ದ ವಿಶ್ವ ಆರೋಗ್ಯ ದಿನಾಚರಣೆ ಕಾರ್ಯಕ್ರಮವನ್ನು ಕರ್ನಾಟಕ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಡಾ.ಪ್ರೊ.ಎಸ್.ಆರ್.ನಿರಂಜನ್ ಭಾನುವಾರ ಉದ್ಘಾಟಿಸಿದರು.

ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ. ಯೋಗಣ್ಣ ಮಾತನಾಡಿ, ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಆರೋಗ್ಯವೆಂದರೆ ಕೇವಲ ಕಾಯಿಲೆರಹಿತ ಸ್ಥಿತಿಯಾಗಿರದೆ, ಅದು ದೈಹಿಕ, ಮಾನಸಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕಗಳ ಸುಸ್ಥಿತಿ ಎಂದು ತಿಳಿಸಿದರಲ್ಲದೆ, ಈ ಎಲ್ಲಾ ಆರೋಗ್ಯದ ಪ್ರಕಾರಗಳನ್ನು ನಿಯಂತ್ರಿಸುವ ಆಹಾರ, ವ್ಯಾಯಾಮ, ದುಶ್ಚಟಗಳ ರಹಿತ ಬದುಕು, ನೆಮ್ಮದಿಯ ಜೀವನ ಶೈಲಿ ಇವೆಲ್ಲವುಗಳ ಬಗ್ಗೆ ಬೆಳಕು ಚೆಲ್ಲಿ ಸಭಿಕರಿಗೆ ಆರೋಗ್ಯ ವೃದ್ಧಿಸುವ ಜೀವನಶೈಲಿ ಪಾಲಿಸುವ ಪ್ರಮಾಣ ವಚನ ಬೋಧಿಸಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ವಿಶ್ರಾಂತ ಕುಲಪತಿ ಡಾ.ಎನ್.ಎಸ್.ರಾಮೇಗೌಡ ಅವರು ಮಾತನಾಡಿ, ವಿಶ್ವ ಆರೋಗ್ಯ ಸಂಸ್ಥೆ ಪ್ರಾರಂಭವಾದ ಏ.7 ಅನ್ನು ವಿಶ್ವ ಆರೋಗ್ಯ ದಿನವನ್ನಾಗಿ ಆಚರಿಸುತ್ತಿದ್ದು, ಈ ವರ್ಷದ ಘೋಷಣೆ ನನ್ನ ಆರೋಗ್ಯ ನನ್ನ ಹಕ್ಕು ಎಂಬುದಾಗಿದ್ದು, ಪ್ರತಿಯೊಬ್ಬರೂ ಅವರವರ ಆರೋಗ್ಯದ ಬಗ್ಗೆ ಜಾಗೃತರಾದರೆ ಮಾತ್ರ ಆರೋಗ್ಯ ವೃದ್ಧಿ ಸಾಧ್ಯ ಎಂದರು.

ಕಾರ್ಯಕ್ರಮದಲ್ಲಿ ಡಾ.ಪ್ರೊ.ಎಸ್.ಆರ್. ನಿರಂಜನ್ ಅವರನ್ನು ಅಭಿನಂದಿಸಲಾಯಿತು. ಸುಯೋಗ್ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕರಾದ ಡಾ.ಆರ್. ರಾಜೇಂದ್ರ ಪ್ರಸಾದ್ ಸ್ವಾಗತಿಸಿದರು. ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ.ಸುಯೋಗ್ ಯೋಗಣ್ಣ, ಟ್ರಸ್ಟಿಗಳಾದ ಶ್ರೀಮತಿ ಸುಧಾ ಯೋಗಣ್ಣ, ನಿರ್ದೇಶಕರಾದ ಡಾ.ಯಶಿತಾ ರಾಜ್ ಉಪಸ್ಥಿತರಿದ್ದರು.

ಸಮಾಜದಲ್ಲಿ ಭಿನ್ನತೆ ಹೊಡೆದೋಡಿಸಿದವರು ಅಲ್ಲಮ ಪ್ರಭು

ಕುಂಚದಲ್ಲಿ ಅರಳಿದ ಅರಿವಿನ ಮಹಾಗುರು ಅಲ್ಲಮ ಪ್ರಭು ಕಲಾಕೃತಿ ಲೋಕಾರ್ಪಣೆ



ಮೈಸೂರು ಆರ್ಟ್ ಗ್ಯಾಲರಿಯಲ್ಲಿ ಭಾನುವಾರ ಆಯೋಜಿಸಿದ್ದ ಹಿರಿಯ ಕಲಾವಿದ ಎಲ್.ಶಿವಲಿಂಗಪ್ಪ ಅವರ ಕುಂಚದಲ್ಲಿ ಅರಳಿದ ಅರಿವಿನ ಮಹಾಗುರು ಅಲ್ಲಮಪ್ರಭು ಕಲಾಕೃತಿ ಲೋಕಾರ್ಪಣೆ ಹಾಗೂ ಜಯಂತಿ ಆಚರಿಸಲಾಯಿತು.


ಮೈಸೂರು, ಏ.7(ಜಿಎ)–ಅಲ್ಲಮ ಪ್ರಭು ಸಮಾಜದಲ್ಲಿನ ಭಿನ್ನತೆ ಹೊಡೆದೋಡಿಸಿ ಸಮಾನತೆಯ ತಳಹದಿ ಮೇಲೆ ಸಮಾಜ ನಿರ್ಮಾಣಕ್ಕೆ ಶ್ರಮಿಸಿದ ಶ್ರೇಷ್ಠ ಶರಣ, ಆಧ್ಯಾತ್ಮಿಕ ಲೋಕದ ಚಿಂತಕ ಎಂದು ಶರಣ ಸಾಹಿತ್ಯ ಪರಿಷತ್ತಿನ ನಗರ ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ ತಿಳಿಸಿದರು.

ಮೈಸೂರಿನ ರಾಮಾನುಜ ರಸ್ತೆಯ 12ನೇ ತಿರುವಿನಲ್ಲಿರುವ ಮೈಸೂರು ಆರ್ಟ್ ಗ್ಯಾಲರಿಯಲ್ಲಿ ಕನ್ನಡ ಸಾಹಿತ್ಯ ಕಲಾಕೂಟದ ಸಹಯೋಗದಲ್ಲಿ ಭಾನುವಾರ ಆಯೋಜಿಸಿದ್ದ ಹಿರಿಯ ಕಲಾವಿದ ಎಲ್.ಶಿವಲಿಂಗಪ್ಪ ಅವರ ಕುಂಚದಲ್ಲಿ ಅರಳಿದ ಅರಿವಿನ ಮಹಾಗುರು ಅಲ್ಲಮಪ್ರಭು ಕಲಾಕೃತಿ ಲೋಕಾರ್ಪಣೆ ಹಾಗೂ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜಗತ್ತಿಗೆ ಮಾತಿನ ಮೌಲ್ಯವನ್ನು ತಿಳಿಸಿಕೊಟ್ಟವರು 12ನೇ ಶತಮಾನದ ಶಿವಶರಣ ಅಲ್ಲಮ ಪ್ರಭು. ಅವರನ್ನು ಅರ್ಥ ಮಾಡಿಕೊಳ್ಳುವುದು ಕಷ್ಟದ ಕೆಲಸ. ಮಾತು ಸೋಲದಂತೆ ನೋಡಿಕೊಳ್ಳಬೇಕು ಎಂದು ಜಗತ್ತಿಗೆ ತಿಳಿಸಿಕೊಟ್ಟವರು ಅಲ್ಲಮಪ್ರಭು. ವಿಶ್ವದ ಎಲ್ಲ ಜ್ಞಾನವು ಅಲ್ಲಮನಲ್ಲಿ ಅಂತರ್ಗತವಾಗಿತ್ತು. ಅಲ್ಲಮಪ್ರಭುವನ್ನು ಮರೆತವರು ಜಡ ಜೀವಿಗಳಾಗುತ್ತಾರೆ. ಕೇವಲ ಜಯಂತಿ ಆಚರಿಸದರೆ ಸಾಲದು, ದಿನಕ್ಕೊಂದು ಅಲ್ಲಮಪ್ರಭುವಿನ ವಚನವನ್ನು ಅಭ್ಯಾಸ ಮಾಡಬೇಕು ಎಂದರು. ಹಿರಿಯ ಕಲಾವಿದ ಎಲ್.ಶಿವಲಿಂಗಪ್ಪ ಅವರ ಕುಂಚದಲ್ಲಿ ಅರಳಿದ ಅಲ್ಲಮಪ್ರಭು ಕಲಾಕೃತಿಯನ್ನು ಗಣ್ಯರು ಲೋಕಾರ್ಪಣೆ ಮಾಡಿದರು. ಹಿರಿಯ ಕಲಾವಿದ ಹಾಗೂ ಸಾಹಿತಿ ಎಲ್.ಶಿವಲಿಂಗಪ್ಪ, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶಾರದಾ ಶಿವಲಿಂಗಸ್ವಾಮಿ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಹೆಳವರಹುಂಡಿ ಸಿದ್ದಪ್ಪ, ಡಾ.ಜಮುನರಾಣಿ ಮಿರ್ಲೆ, ಶ್ರೀಕಂಠಮೂರ್ತಿ, ಸಮಾಜ ಸೇವಕ ಡಾ.ರಘುರಾಂ ವಾಜಪೇಯಿ ಮತ್ತಿತರರು ಉಪಸ್ಥಿತರಿದ್ದರು.

ಕಾಂಗ್ರೆಸ್ ಮುಖಂಡ ಹೆಚ್.ವಿ.ರಾಜೀವ್ ನಿವಾಸಕ್ಕೆ ಶೃಂಗೇರಿ ಶ್ರೀಗಳ ಭೇಟಿ

ಮೈಸೂರು,ಏ.7–ಮೈಸೂರು ಅಭಿನವ ಶಂಕರಾಲಯದ ಶತಮಾನೋತ್ಸವ ಹಾಗೂ ಮೈಸೂರಿನ ವಿವಿಧ ಧಾರ್ಮಿಕ ಕಾರ್ಯಕ್ರಮಕ್ಕೆ ಆಗಮಿಸಿರುವ ಶೃಂಗೇರಿ ಅನಂತ ಶ್ರೀವಿಭೂಷಿತ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳು ಕಾಂಗ್ರೆಸ್ ಮುಖಂಡರೂ ಆದ ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್ ನಿವಾಸಕ್ಕೆ ಭೇಟಿ ನೀಡಿದ್ದರು.



ಪೂರ್ಣಕುಂಭ ಸ್ವಾಗತ ನೀಡಿದ ಹೆಚ್.ವಿ. ರಾಜೀವ್ ಕುಟುಂಬ ಸದಸ್ಯರು, ಅಪಾರ ಗೌರವಗಳಿಂದ ಅವರನ್ನು ಬರಮಾಡಿಕೊಂಡರು. ಈ ಸಂದರ್ಭದಲ್ಲಿ ಪಾದಪೂಜೆ ನೆರವೇರಿಸಿ, ಆಶೀರ್ವಾದ ಪಡೆದುಕೊಂಡರು. ಈ ವೇಳೆ ಹೊಯ್ಸಳ ಕರ್ನಾಟಕದ ನಿರ್ದೇಶಕರಾದ ಎಸ್.ರಂಗನಾಥ್, ಸತ್ಯಪ್ರಕಾಶ್, ಪ್ರೊ.ಸುಂದರೇಶ್, ವಿಶ್ವನಾಥ್ ಜಯರಾಮ್ ಭಟ್, ಯು.ಎಸ್.ಶೇಖರ್ ಮತ್ತಿತರರು ಉಪಸ್ಥಿತರಿದ್ದರು.

ಕಿರಣ್‌ಗೆ ಪಿಹೆಚ್.ಡಿ ಪದವಿ



ಮೈಸೂರು: ಡಾ. ಕೆ.ಎ. ರವೀಶ ಅವರ ಮಾರ್ಗದರ್ಶನದಲ್ಲಿ ಬಿ.ಎಲ್.ಕಿರಣ್ ಅವರು ಸಸ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಧ್ಯಾನದಿಂದಲೇ ಆರೋಗ್ಯ, ಮನಃಶಾಂತಿ ಸಾಧ್ಯ

ಮೈಸೂರು, ಏ.7– ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಹಿರಿಯ ನಾಗರಿಕರ ಮಂಡಳಿ ವತಿಯಿಂದ ಮಾಸಿಕ ಉಪನ್ಯಾಸದ ಸರಣಿಯಲ್ಲಿ ಇತ್ತೀಚೆಗೆ ಧ್ಯಾನ ಮತ್ತು ಆರೋಗ್ಯದ ಬಗ್ಗೆ ಉಪನ್ಯಾಸ, ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯದ ಸದಸ್ಯರಾದ ಕುಮಾರಿ ಬಿ.ಕೆ.ಸಂಧ್ಯಾ ಅವರಿಂದ ಏರ್ಪಡಿಸಲಾಗಿತ್ತು.

ಕು.ಬಿ.ಕೆ.ಸಂಧ್ಯಾ ಅವರು ಯೋಗ, ಪ್ರಾಣಾಯಾಮ ಹಾಗೂ ಧ್ಯಾನವನ್ನು ಪ್ರತಿದಿನ ಅಭ್ಯಾಸ ಮಾಡಿ ದೇಹದ ಆರೋಗ್ಯ ಮತ್ತು ಮಾನಸಿಕ ಆರೋಗ್ಯವನ್ನು ಅಭಿವೃದ್ಧಿಪಡಿಸಬಹುದೆಂದು ಕಿವಿಮಾತು ಹೇಳಿದರು. ಓಂ ಶಾಂತಿ ಎನ್ನುವ ಉಚ್ಚಾರಣೆಯಿಂದ ಇತರರನ್ನು ಸ್ವಾಗತಿಸುವ ಮೂಲಕ ನಮ್ಮ ಸಕಾರಾತ್ಮಕ ಆರೋಗ್ಯ, ಮಾನಸಿಕ ಆರೋಗ್ಯವನ್ನು ಪರಿಪೂರ್ಣತೆಯಿಂದ ಪಡೆಯಬಹುದೆಂದು ಹೇಳಿದರು.

ಇಚ್ಛಾಶಕ್ತಿಯೊಂದಿಗೆ ಧ್ಯಾನ ಅಭ್ಯಾಸ ಮಾಡುವುದರಿಂದ ಶಾರೀರಕ ಹಾಗೂ ಮಾನಸಿಕ ಆರೋಗ್ಯವನ್ನು ವೃದ್ಧಿಪಡಿಸಬಹುದು ಎಂದ ಅವರು, ಒತ್ತಡ, ಉದ್ವೇಗವನ್ನು ಕಡಿಮೆ ಮಾಡುವ ಶಕ್ತಿಯನ್ನು ಪಡೆಯಬಹುದು ಎಂದರು.

ಧ್ಯಾನ ಮಾಡುವಾಗ ನಾವು ಅನುಭವಿಸುವ ವಿವಿಧ ಆಲೋಚನೆಗಳನ್ನು ಉಲ್ಲೇಖಿಸಿ ಮಾತನಾಡುತ್ತಾ, ಕೆಲವು ಅಗತ್ಯ ಮತ್ತು ಅನಗತ್ಯ ಆಲೋಚನೆಗಳನ್ನು ಹಿಂದಿನ ಘಟನೆಗಳ ಬಗ್ಗೆಯೂ, ಭವಿಷ್ಯದ ಬಗ್ಗೆ ಆಲೋಚನೆಗಳು



ಅಸುರಕ್ಷಿತ ಭಾವನೆಗಳು ಕೆಲವು ವ್ಯರ್ಥ ಆಲೋಚನೆಗಳನ್ನು ಎದುರಿಸುತ್ತಿದ್ದೇವೆ. ಇವುಗಳನ್ನು ವಿಶ್ಲೇಷಿಸಿ, ಉಪಯುಕ್ತ ಆಲೋಚನೆಗಳನ್ನು ಆಯ್ಕೆ ಮಾಡಿ ನಿರ್ಧಾರಗಳನ್ನು ತೆಗೆದುಕೊಳ್ಳುವ ಶಕ್ತಿಯನ್ನು ಧ್ಯಾನದಿಂದ ಪಡೆಯಬಹುದು. ಇದಕ್ಕೆ ತಕ್ಕಂತೆ ಸಮಯ, ನಿರ್ವಹಣೆಯನ್ನು ಸಾಧಿಸಿದರೆ ಅದು ನಮಗೆ ಆಧ್ಯಾತ್ಮಿಕ ಜೀವನವನ್ನು ನಡೆಸಲು ನಿಧಿಯಾಗುತ್ತದೆ ಎಂದು ಹೇಳಿದರು. ಹಿರಿಯ ನಾಗರಿಕರ ಮಂಡಳಿಯ ಅಧ್ಯಕ್ಷ ಡಾ॥ ನಾಗರಾಜ್, ಕಾರ್ಯದರ್ಶಿ ಕೃಷ್ಣ, ಶ್ರೀಧರ್, ಸದಸ್ಯರಾದ ಬಿ.ವಿ.ನರಸಿಂಹನ್, ಮೋಹನ್ ದಾಸ್, ಭೋಜರಾಜಣ್ಣ, ಬಿ.ಕೆ.ರಾಜು, ಬಿ.ಕೆ.ಸುರೇಶ್, ಕೆ.ವಿ.ರಾಮನಾಥ್, ವಿ.ಎಸ್. ವಿಜಯ ಕುಮಾರ್, ಚಿದಾನಂದ, ವಿ.ಎನ್. ಆಚಾರ್, ರಾಮಚಂದ್ರೇಗೌಡ, ಗೀತಾ ಲಕ್ಷಣ, ಟಿ.ಎಂ.ಮಂಜುಳ, ಟಿ.ವಿ.ವಿಜ್ಞರಾವ್, ಎಸ್.ವಿ.ವೆಂಕಟೇಶಯ್ಯ, ಪಾರ್ವತಿ, ವೀಣಾ, ಲತಾ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ವಿಶೇಷ ಅಂಚೆ ಲಕೋಟೆ ಬಿಡುಗಡೆ

ಮೈಸೂರಿನ ಶೃಂಗೇರಿ ಶ್ರೀ ಶಂಕರ ಮಠದ ಅಭಿನವ ಶಂಕರಾಲಯದ ಶತಮಾನೋತ್ಸವ ಸಂಭ್ರಮಾಚರಣೆಯಲ್ಲಿ ಶೃಂಗೇರಿ ಶ್ರೀ ಶಾರದಾಪೀಠದ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂ ಅವರು ವಿಶೇಷ ಅಂಚೆ ಲಕೋಟೆಯನ್ನು ಲೋಕಾರ್ಪಣೆ ಮಾಡಿದರು. ಈ ವೇಳೆ ಶ್ರೀಮಠದ ಆಡಳಿತಾಧಿಕಾರಿ ಪಿ.ಎ.ಮುರಳಿ, ಧರ್ಮಾಧಿಕಾರಿ ಹೆಚ್ ರಾಮಚಂದ್ರ, ಸಪ್ತಮಾತೃಕ ದೇವಸ್ಥಾನದ ಅಧ್ಯಕ್ಷ ಕೆ.ಭಾಸ್ಕರ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಉಪಾಧ್ಯಕ್ಷ ನಂ.ಶ್ರೀಕಂಠಕುಮಾರ್ ಉಪಸ್ಥಿತರಿದ್ದರು.

ಕೊನೆಗೂ ಗೆಲುವಿನ ಖಾತೆ ತೆರೆದ ಮುಂಬೈ

ಮುಂಬೈ, ಏ.7– ಕೊನೆವರೆಗೂ ಜಿದ್ದಾಜಿದ್ದಿಯಿಂದ ಕೂಡಿದ್ದ ಪಂದ್ಯದಲ್ಲಿ ಟ್ರಿಸ್ಟನ್ ಸ್ಟಬ್ಸ್ ಅವರ ಸ್ಫೋಟಕ ಬ್ಯಾಟಿಂಗ್ ಹೊರತಾಗಿಯೂ ಮುಂಬೈ ಇಂಡಿಯನ್ಸ್ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ 29 ರನ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ ಪ್ರಸಕ್ತ ಸಾಲಿನ ಐಪಿಎಲ್‌ನಲ್ಲಿ ಹ್ಯಾಟ್ರಿಕ್ ಸೋಲಿನ ಬಳಿಕ ಕೊನೆಗೂ ಮುಂಬೈ ಇಂಡಿಯನ್ಸ್ ಗೆಲುವಿನ ಖಾತೆ ತೆರೆದಿದೆ.



ಇಲ್ಲಿನ ವಾಂಖೇಡೆ ಮೈದಾನದಲ್ಲಿ ಮುಂಬೈ ನೀಡಿದ 235 ರನ್‌ಗಳ ಬೃಹತ್ ಗುರಿ ಬೆನ್ನತ್ತಿದ ಡೆಲ್ಲಿ ಕ್ಯಾಪಿಟಲ್ಸ್ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 205 ರನ್ ಗಳಿಸಿ ಸೋಲೊಪ್ಪಿಕೊಂಡಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಡೇವಿಡ್ ವಾರ್ನರ್ 10 ರನ್ ಗಳಿಸಿ ಬಹುಬೇಗ ವಿಕೆಟ್ ಒಪ್ಪಿಸಿದರು. ಈ ವೇಳೆ 2 ವಿಕೆಟ್‌ಗೆ ಜೊತೆಯಾದ ಪೃಥ್ವಿ ಶಾ ಹಾಗೂ ಅಭಿಷೇಕ್ ಪೋರೆಲ್ ಜೋಡಿ 88 ರನ್‌ಗಳ ಜತೆಯಾಟವಾಡುವ ಮೂಲಕ ತಂಡಕ್ಕೆ ಆಸರೆಯಾದರು. ಚುರುಕಿನ ಬ್ಯಾಟಿಂಗ್ ನಡೆಸಿದ ಪೃಥ್ವಿ ಶಾ 40 ಎಸೆತಗಳಲ್ಲಿ 8 ಬೌಂಡರಿ ಹಾಗೂ 3 ಸಿಕ್ಸರ್ ಸಹಿತ 66 ರನ್ ಬಾರಿಸಿ ಬುಮ್ರಾ ಬೌಲಿಂಗ್‌ನಲ್ಲಿ ಕ್ಲೀನ್ ಬೌಲ್ಡ್ ಆಗಿ ಪೆವಿಲಿಯನ್ ಸೇರಿದರು. ಇನ್ನು ಅಭಿಷೇಕ್ ಪೋರೆಲ್ 41 ರನ್ ಸಿಡಿಸಿ ಬುಮ್ರಾಗೆ ಎರಡನೇ ಬಲಿಯಾದರು. ನಂತರ ಬಂದ ಟ್ರಿಸ್ಟನ್ ಸ್ಟಬ್ಸ್ ಸಿಡಿಲಬ್ಬರದ ಬ್ಯಾಟಿಂಗ್ ನಡೆಸಿದರಾದರೂ ತಂಡಕ್ಕೆ ಜಯ ತಂದುಕೊಡುವಲ್ಲಿ ವಿಫಲರಾದರು. ಕೇವಲ 19 ಎಸೆತಗಳಲ್ಲಿ ಸ್ಫೋಟಕ ಅರ್ಧಶತಕ ಸಿಡಿಸಿದ ಅವರು 25 ಎಸೆತಗಳಲ್ಲಿ 3 ಬೌಂಡರಿ 7 ಸಿಕ್ಸರ್ ಸಹಿತ ಅಜೇಯ 71 ರನ್ ಗಳಿಸಿದರು. ಉಳಿದಂತೆ ರಿಷಬ್ ಪಂತ್ 1 ಅಕ್ಷರ್ ಪಟೇಲ್ 8, ಲಲಿತ್ ಯಾದವ್ 3, ಜೇ ರಿಚರ್ಡ್‌ಸನ್ 2 ರನ್ ಗಳಿಸಿದರು. ಮುಂಬೈ ಪರ ಜೆರಾಲ್ಡ್ ಕೋಟ್ಜಿ 4, ಜಸ್ಪ್ರೀತ್ ಬುಮ್ರಾ 2, ರೋಮಾರಿಯೋ ಶೆಫರ್ಡ್ 1 ವಿಕೆಟ್ ಉರುಳಿಸಿದರು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ ಇಂಡಿಯನ್ಸ್ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 234 ರನ್ ಗಳಿಸಿತ್ತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ರೋಹಿತ್ ಶರ್ಮಾ ಹಾಗೂ ಇಶಾನ್ ಕಿಶನ್ ಜೋಡಿ ಮೊದಲ ವಿಕೆಟ್‌ಗೆ 80 ರನ್ ಜೊತೆಯಾಟವಾಡುವ ಮೂಲಕ ತಂಡಕ್ಕೆ ಉತ್ತಮ ಆರಂಭ ಒದಗಿಸಿದರು. ಆದರೆ ರೋಹಿತ್ ಶರ್ಮಾ 49 ರನ್ ಔಟಾದರು. ನಂತರ ಬಂದ ಸೂರ್ಯ ಕುಮಾರ್ ಯಾದವ್ ಶೂನ್ಯಕ್ಕೆ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ಅಬ್ಬರಿಸಿದ ಇಶಾನ್ ಕಿಶನ್ 42 ರನ್ ಗಳಿಸಿದರೇ, ಟಿಮ್ ಡೇವಿಡ್ 45, ಹಾರ್ದಿಕ್ ಪಾಂಡ್ಯ 39, ರೊಮಾರಿಯೋ ಶೆಫರ್ಡ್ 39 ರನ್ ಗಳಿಸಿದರು. ಡೆಲ್ಲಿ ಕ್ಯಾಪಿಟಲ್ಸ್ ಪರ ಅಕ್ಷರ್ ಪಟೇಲ್, ಅನ್ರಿಚ್ ನಾರ್ಟ್ಜೆ ತಲಾ 2, ಖಲೀಲ್ ಅಹ್ಮದ್ ಒಂದು ವಿಕೆಟ್ ಪಡೆದರು. ರೊಮಾರಿಯೋ ಶೆಫರ್ಡ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

8.04.2024 ಸೋಮವಾರ, ಮಳೆ ನಕ್ಷತ್ರ: ರೇವತಿ 31.03.2024ರಿಂದ 12.04.2024 ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಪಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ: ಅಮಾವಾಸ್ಯೆ, ನಕ್ಷತ್ರ: ಉತ್ತರ ಬಾದ್ರಾ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಕೊರಗಜ್ಜ ದೈವ ಸನ್ನಿಧಿ:** ಯುಗಾದಿ ಅಮಾವಾಸ್ಯೆ ವಿಶೇಷ ಪೂಜೆ, ಕೊರಗಜ್ಜಗೆ ವಿಶೇಷ ಅಲಂಕಾರ, ಮಹಾಮಂಗಳಾರತಿ, ಅನ್ನಸಂತರ್ಪಣೆ, ಸ್ಥಳ: ದೈವ ಸನ್ನಿಧಿ, ಕೇರ್ಗಳ್ಳಿ, ಬೆಳಗ್ಗೆ 8 ಗಂಟೆಯಿಂದ.


■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಬೆಳಗ್ಗೆ 10ರಿಂದ ಸಂಜೆ 7 ರವರೆಗೆ

■ **ವಾಟಾಳ್ ನಾಗರಾಜ್ ಅಭಿಮಾನಿಗಳ ಸಂಘ:** ನಾಡೋಜ ಸಿಪಿಕೆ ಅವರಿಗೆ 85ನೇ ವರ್ಷದ ಜನ್ಮದಿನಾಚರಣೆ ಅಂಗವಾಗಿ ಗೌರವ ಸಮರ್ಪಣೆ, ಮುಖ್ಯ ಅತಿಥಿಗಳು: ಇತಿಹಾಸ ತಜ್ಞ ಡಾ.ಪಿವಿ.ನಂಜರಾಜ ಅರಸು, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಅಧ್ಯಕ್ಷತೆ: ಕನ್ನಡ ಚಳವಳಿ ನಾಯಕ ವಾಟಾಳ್ ನಾಗರಾಜ್, ಸ್ಥಳ: ಮೈಸೂರು ಜಿಲ್ಲಾ ಪತ್ರಕರ್ತರ ಸಂಘ, ತ್ಯಾಗರಾಜ ರಸ್ತೆ ಬೆಳಗ್ಗೆ 11 ಗಂಟೆಗೆ.

■ **ಶ್ರೀ ಹೊಸಮಠ, ಮೈಸೂರು:** ಅಲ್ಲಮಪ್ರಭು ಜಯಂತಿ ಮತ್ತು ಚರಮೂರ್ತಿ ಆಸ್ಥಾನ ವಿದ್ವಾನ್ ನಿ.ಪ್ರಸ್ವಶ್ರೀ ಬಸವಲಿಂಗ ಮಹಾ ಸ್ವಾಮಿಗಳವರ 73ನೇ ವರ್ಷದ ಪುಣ್ಯಾರಾಧನಾ ಮಹೋತ್ಸವ, ದಿವ್ಯ ಸಾನ್ನಿಧ್ಯ: ಶ್ರೀ ಹೊಸಮಠದ ಅಧ್ಯಕ್ಷ ಶ್ರೀ ಚಿದಾನಂದ ಮಹಾಸ್ವಾಮಿಗಳು, ಉದ್ಘಾಟನೆ: ಮಾದಳ್ಳಿ ಉಕ್ಕಿನಕಂತೆ ಮಠದ ಅಧ್ಯಕ್ಷ ಶ್ರೀ ಸದಾಶಿವ ಮಹಾ ಸ್ವಾಮಿಗಳು, ಅಧ್ಯಕ್ಷತೆ: ಕನಕಪುರ ದೇಗುಲ ಮಠದ ಕಿರಿಯ ಶ್ರೀಗಳಾದ ಶ್ರೀ ಚನ್ನಬಸವ ಮಹಾ ಸ್ವಾಮಿಗಳು, ಪ್ರವಚನ: ಸಂಸ್ಕೃತಿ ಚಿಂತಕರಾದ ಶಂಕರ್ ದೇವನೂರು, ಸ್ಥಳ: ಶ್ರೀ ನಟರಾಜ ಸಭಾ ಭವನ, ಬೆಳಗ್ಗೆ 11 ಗಂಟೆಗೆ.

ಮೈಸೂರು ಆಕಾಶವಾಣಿ

ಬೆಳಗ್ಗೆ: 6.10 ಚಿಂತನ–6.15 ಗೀತಾರಾಧನ, 6.35. 6.10 "ವಿಶ್ವ ವಿಖ್ಯಾತ ವಿಜ್ಞಾನಿಗಳು" ಬಾನುಲಿ ಸರಣಿ, ಪ್ರಸ್ತುತಿ: ಶ್ರೀನಿವಾಸ ಪ್ರಸಾದ್, 6.40 ಪದಸಂಸ್ಕೃತಿ–ಡಾ.ಟಿ.ವಿ. ಸತ್ಯನಾರಾಯಣ, 6.50 ರೈತರಿಗೆ ಸಲಹೆ, 7.15 ಮತ ಹಾಕೋಣ ಬನ್ನಿ–ಮುಂಬರುವ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಮಂಡ್ಯ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಜಿಲ್ಲಾ SVEEP ಅಧ್ಯಕ್ಷ ಶೇಖ್ ತನ್ವೀರ್ ಆಸಿಫ್ ಅವರೊಂದಿಗೆ ಸಂವಾದ ಇವರೊಂದಿಗೆ ಪಾಲ್ಗೊಳ್ಳುತ್ತಾರೆ: ಪ್ರಭುಸ್ವಾಮಿ ಪಿ.ಮಳಿಮಠ್, 9.05–ನೆನಪಿನಂಗಳ (ಧ್ವನಿ ಭಂಡಾರದಿಂದ) Dur–20', ಹಿರಿಯ ಸಂಗೀತ ಶಾಸ್ತ್ರಜ್ಞರಾದ ರಾ.ಚಂದ್ರಶೇಖರಯ್ಯ ಅವರೊಂದಿಗೆ ವಿದ್ವಾನ್ ವಿ.ನಂಜುಂಡಸ್ವಾಮಿ ಅವರು ನಡೆಸಿದ್ದ ಸಂವಾದ, 10.00 ಶಾಸ್ತ್ರೀಯ ಸಂಗೀತ: ಸಿಕ್ಕಿಲ್ ಸಹೋದರಿಯರು–ಕೊಳಲು ವಾದನ, 12.30–ದೇವರನಾಮ, 12.45–ನಮ್ಮ ಆರೋಗ್ಯ–"ಸ್ಥೂಲಕಾಯ ಅಂದರೆ ಒಬೇಸಿಟಿ ಮತ್ತು ಹಾರ್ಮೋನ್ ವ್ಯತ್ಯಯ" ಕುರಿತು ಜೆ.ಎಸ್.ಎಸ್. ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯ ಎಂಡೋಕ್ರೈನಾಲಜಿ ವಿಭಾಗದ ಮುಖ್ಯಸ್ಥರಾದ ಡಾ.ಲಕ್ಷ್ಮೀ ನಾಗೇಂದ್ರ ಅವರೊಂದಿಗೆ ಮಾತುಕತೆ ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 1.00–ಮತ ಹಾಕೋಣ ಬನ್ನಿ–ಮತದಾನ ಜಾಗೃತಿ ಸರಣಿ, ಮಂಡ್ಯಜಿಲ್ಲೆಯ SVEEP ನೋಡಲ್ ಅಧಿಕಾರಿ ಕೆ.ಪಿ.ಸಂಜೀವಪ್ಪ ಅವರೊಂದಿಗೆ ಸಂದರ್ಶನ, ಸಂದರ್ಶನಕರು–ಪ್ರಭುಸ್ವಾಮಿ ಪಿ.ಮಳಿಮಠ್, 1.20–ಭಾವಗೀತೆಗಳು, 3.00 ತಿಟ್ಟೆ ಕೃಷ್ಣ ಅಯ್ಯಂಗಾರ್–ಹಾಡುಗಾರಿಕೆ, 4.00 ಮಹಿಳಾರಂಗ–ಯಶಸ್ವಿನಿ ಮಹಿಳಾ ಸಂಘದ ಸದಸ್ಯರಿಂದ ಯುಗಾದಿಯ ವಿಶೇಷ ಕಾರ್ಯಕ್ರಮ ವೈವಿಧ್ಯ, 4.45 ಹಿಂದಿ ಪಾಠ–ಎಸ್.ಈಶ್ವರ ಭಟ್, 6.50–ಕೃಷಿರಂಗ ಹಣ್ಣು ಹೊನ್ನು, ತೋಟಗಾರಿಕಾ ಬೆಳೆಗಳ ಸಮಗ್ರ ಬೇಸಾಯ ವಿಧಾನ ಕುರಿತ ಬಾನುಲಿ ಸರಣಿ, ದಾಳಿಂಬೆ ಬೇಸಾಯ ತಾಂತ್ರಿಕತೆಗಳು ಈ ಕುರಿತು ಮೈಸೂರು ತಾಲ್ಲೂಕು ಎಲಚನಹಳ್ಳಿಯ ತೋಟಗಾರಿಕಾ ಮಹಾವಿದ್ಯಾಲಯದ ಸಹ ಪ್ರಾಧ್ಯಾಪಕರಾದ ಡಾ.ಜಿ.ಮಂಜುನಾಥ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 10.30 ಸವಿನೆನಪು



ಗುಜರಾತ್ ವಿರುದ್ಧ ಲಕ್ನೋಗೆ ಜಯ

ಲಕ್ನೋ, ಏ.7– ಸ್ಟೊಯಿನಿಸ್ ಆಕರ್ಷಕ ಅರ್ಧಶತಕ, ಯಶ್ ಠಾಕೂರ್ ಹಾಗೂ ಕೃನಾಲ್ ಪಾಂಡ್ಯ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಲಕ್ನೋ ಸೂಪರ್ ಜೈಂಟ್ಸ್, ಗುಜರಾತ್ ಟೈಟಾನ್ಸ್ ವಿರುದ್ಧ 33 ರನ್‌ಗಳ ಜಯ ಸಾಧಿಸಿದೆ.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಲಕ್ನೋ ಸೂಪರ್ ಜೈಂಟ್ಸ್ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 163 ರನ್ ಗಳಿಸಿತು. ತಂಡದ ಪರ ಕ್ವಿಂಟನ್ ಡಿಕಾಕ್ 6, ಕೆ.ಎಲ್.ರಾಹುಲ್ 33, ದೇವದತ್ತ ಪಡಿಕ್ಕಲ್ 7, ಸ್ಟೊಯಿನಿಸ್ 58, ನಿಕೋಲಸ್ ಪೂರನ್ 32, ಆಯುಷ್ ಬದೋನಿ 20, ಕೃನಾಲ್ ಪಾಂಡ್ಯ 2 ರನ್ ಗಳಿಸಿದರು. ಗುಜರಾತ್ ಪರ ಉಮೇಶ್ ಯಾದವ್, ದರ್ಶನ್ ನಲ್ಕಂಡೆ ತಲಾ 2, ರಶೀದ್ ಖಾನ್ 1 ವಿಕೆಟ್ ಉರುಳಿಸಿದರು.

164 ರನ್‌ಗಳ ಗುರಿ ಬೆನ್ನತ್ತಿದ ಗುಜರಾತ್ 18.5 ಓವರ್‌ಗೆ 130 ರನ್‌ಗಳಿಗೆ ಆಲೌಟ್ ಆಗಿ ಸೋಲೊಪ್ಪಿಕೊಂಡಿತು. ತಂಡದ ಪರ ಸಾಯಿ ಸುದರ್ಶನ್ 31, ಶುಭ್‌ಮನ್ ಗಿಲ್ 19, ವಿಜಯ್ ಶಂಕರ್ 17, ದರ್ಶನ್ ನಲ್ಕಂಡೆ 12, ರಾಹುಲ್ ತೆವಾಟಿಯಾ 30ರನ್ ಗಳಿಸಿದರು. ಲಕ್ನೋ ಪರ ಯಶ್ ಠಾಕೂರ್ 5, ಕೃನಾಲ್ ಪಾಂಡ್ಯ 3, ನವೀನ್ ಉಲ್ ಹಕ್ ಹಾಗೂ ರವಿ ಬಿಷ್ಣೋಯಿ ತಲಾ ಒಂದೊಂದು ವಿಕೆಟ್ ಪಡೆದರು. ಯಶ್ ಠಾಕೂರ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.



ಕೆ.ಆರ್.ಪೇಟೆ: ಸ್ಟಾರ್ ಚಂದ್ರು ಭರ್ಜರಿ ಪ್ರಚಾರ



ಕೆ.ಆರ್.ಪೇಟೆ ತಾಲೂಕಿನ ಮಾದಾಪುರದಲ್ಲಿ ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್ ಚಂದ್ರು ಮಾತಯಾಚನೆ ಮಾಡಿದರು. ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್, ಬಿ.ಎಲ್.ದೇವರಾಜು, ವಿಜಯರಾಮೇಗೌಡ ಮತ್ತಿತರರು ಚಿತ್ರದಲ್ಲಿದ್ದಾರೆ

ಕೆಆರ್.ಪೇಟೆ, ಏ.7– ಮಂಡ್ಯ ಲೋಕಸಭಾ ಅಭ್ಯರ್ಥಿ ಸ್ಟಾರ್ ಚಂದ್ರು ಸ್ಥಳೀಯ ಕಾಂಗ್ರೆಸ್ ಮುಖಂಡರೊಂದಿಗೆ ತಾಲ್ಲೂಕಿನ ವಿವಿಧ ಗ್ರಾಮ ಪಂಚಾಯಿತಿ ಕೇಂದ್ರಗಳಲ್ಲಿ ಭರ್ಜರಿ ಚುನಾವಣಾ ಪ್ರಚಾರ ನಡೆಸಿ ಮಾತಯಾಚನೆ ಮಾಡಿದರು.

ಕೆ.ಆರ್.ಪೇಟೆ ತಾಲ್ಲೂಕಿನ ಮಾದಾಪುರ, ಲಕ್ಷ್ಮೀಪುರ, ಐಕನಹಳ್ಳಿ, ಮಾಕವಳ್ಳಿ, ಬಲ್ಲೇನಹಳ್ಳಿ, ಗಂಜಿಗೆರೆ, ಹರಿಹರಪುರ, ಬಂಡಿಹೊಳೆ, ಕಿಕ್ಕೇರಿ, ಬೂಕನಕೆರೆ ಗ್ರಾಮ ಪಂಚಾಯತಿ ಕೇಂದ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್‌ಚಂದ್ರು ಬಿರುಸಿನ ಮತ ಪ್ರಚಾರ ಮಾಡಿ ಭರ್ಜರಿ ರೋಡ್ ಶೋ ನಡೆಸಿ ಕಾಂಗ್ರೆಸ್ ಬೆಂಬಲಿಸಿ ರೈತನ ಮಗನಿಗೆ ವಿಜಯ ಮಾಲೆ ತೊಡಿಸಲು ಸ್ಟಾರ್‌ಚಂದ್ರು ಕೈಮುಗಿದು ಮನವಿ ಮಾಡಿದರು.

ರಾಜ್ಯದ ಮಾಜಿ ಸಿಎಂ ಯಡಿಯೂರಪ್ಪ ಅವರ ತವರು ಬೂಕನಕೆರೆ ಗ್ರಾಮದಲ್ಲಿ ಗ್ರಾಮದೇವತೆ ಶ್ರೀ ಗೋಗಾಲಮ್ಮ ದೇವಿಗೆ ವಿಶೇಷ ಪೂಜೆ ಸಲ್ಲಿಸಿದ ಕಾಂಗ್ರೆಸ್ ಲೋಕಸಭಾ ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್ ಚಂದ್ರು ಮಿಂಚಿನ ಸಂಚಾರ ನಡೆಸಿ ಅಂಗಡಿಮುಂಗಟ್ಟುಗಳ ಬಳಿ ತೆರಳಿ ಜನರ ಯೋಗಕ್ಷೇಮ ವಿಚಾರಿಸಿ ಕುಶಲೋಪರಿ ನಡೆಸಿ ಸಾಮಾನ್ಯ ರೈತನ ಮಗನಾಗಿರುವ ತಮ್ಮನ್ನು ಬೆಂಬಲಿಸಿ ತಮ್ಮ ಸೇವೆ ಮಾಡುವ ಅವಕಾಶವನ್ನು ಕಲ್ಪಿಸಿ ಕೊಡುವಂತೆ ಕೈಮುಗಿದು ಮನವಿ ಮಾಡಿದರು.

ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್, ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎಲ್.ದೇವರಾಜು, ಕಾಂಗ್ರೆಸ್ ಮುಖಂಡರಾದ ವಿಜಯ್‌ರಾಮೇಗೌಡ, ಕಿಕ್ಕೇರಿ ಸುರೇಶ್, ಡಾ.ರಾಮಕೃಷ್ಣೇಗೌಡ, ಎಲ್.ಪಿ. ನಂಜಪ್ಪ, ಎಲ್.ಕೆ.ಮಂಜುನಾಥ್, ಲಕ್ಷ್ಮೀಪುರ ಚಂದ್ರೇಗೌಡ, ವಿಠಲಾಪುರ ಸುಬ್ಬೇಗೌಡ, ಕೋಡಿ ಮಾರನಹಳ್ಳಿ ದೇವರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ನಾಗೇಂದ್ರಕುಮಾರ್, ಹರಳಹಳ್ಳಿ ವಿಶ್ವನಾಥ್, ಕಾಂಗ್ರೆಸ್ ತಾಲೂಕು ಉಸ್ತುವಾರಿ ಸಿ.ಆರ್. ರಮೇಶ್, ಕೆಯುಐಡಿಎಫ್‌ಸಿ ಮಾಜಿ ಅಧ್ಯಕ್ಷ ಮತ್ತಿಘಟ್ಟಕೃಷ್ಣಮೂರ್ತಿ, ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಬೂಕನಕೆರೆ ವೆಂಕಟೇಶ್, ಬಸ್ತಿ, ರಂಗಪ್ಪ , ಶ್ಯಾಮಣ್ಣ ತಾಲ್ಲೂಕು ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಕೆ.ಬಿ.ಪ್ರತಿಮಾ ಮತ್ತಿತರರು ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್‌ಚಂದ್ರು ಪ್ರಚಾರಕ್ಕೆ ಸಾಥ್ ನೀಡಿ ಮಂಡ್ಯ ಜಿಲ್ಲೆಯ ರೈತರ ಸ್ವಾಭಿಮಾನವನ್ನು ಎತ್ತಿಹಿಡಿಯಲು ಕಾಂಗ್ರೆಸ್ ಬೆಂಬಲಿಸುವಂತೆ ಮನವಿ ಮಾಡಿದರು.

ಮಂಡ್ಯ ಜಿಲ್ಲೆ ಮನೆ ಮಗನನ್ನು ಗೆಲ್ಲಿಸಿ: ಮಂಡ್ಯ ಜಿಲ್ಲೆಯ ಸಮಗ್ರವಾದ ಅಭಿವೃದ್ಧಿಗೆ ಹಾಗೂ ರಾಜ್ಯದ ಸುಭದ್ರವಾದ ಸರ್ಕಾರಕ್ಕೆ ಒತ್ತಾಸೆಯಾಗಿ ಜನಸಾಮಾನ್ಯರ ಅನುಕೂಲಕ್ಕಾಗಿ ಪಂಚ ಗ್ಯಾರಂಟಿಗಳನ್ನು ಜಾರಿಗೊಳಿಸಿರುವ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಲು ಸ್ಟಾರ್ ಚಂದ್ರು ಮನವಿ ಮಾಡಿದರಲ್ಲದೇ ನಾನು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಕನ್ನಘಟ್ಟ ಗ್ರಾಮದವನು. ನಾನು ಸಾಮಾನ್ಯ ರೈತನ ಮಗ, ಬಡತನದಿಂದ ಶ್ರಮಪಟ್ಟು ಮೇಲೆ ಬಂದಿದ್ದೇನೆ. ನಾನು ಹಣ, ಆಸ್ತಿ ಅಂತಸ್ತು ಗಳಿಸಲು ರಾಜಕೀಯಕ್ಕೆ ಬಂದಿಲ್ಲ. ಮಂಡ್ಯ ಜಿಲ್ಲೆಯ ಸಮಗ್ರವಾದ ಅಭಿವೃದ್ಧಿಯೇ ನನಗೆ ಮೂಲ ಮಂತ್ರವಾಗಿದೆ. ಬರಗಾಲದ ಸಂಕಷ್ಟದ ಸಮಯದಲ್ಲಿ ಶ್ರೀಸಾಮಾನ್ಯರ ನೆಮ್ಮದಿಯ ಜೀವನಕ್ಕಾಗಿ ಪಂಚ ಗ್ಯಾರಂಟಿ ಯೋಜನೆಗಳನ್ನು ರಾಜ್ಯದ ಜನತೆಗೆ ಕೊಡುಗೆಯಾಗಿ ನೀಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಮಂಡ್ಯ ಜಿಲ್ಲಾ ಉಸ್ತುವಾರಿ ಮಂತ್ರಿಗಳಾದ ಚಲುವರಾಯಸ್ವಾಮಿ ಅವರ ಕೈ ಬಲಪಡಿಸಲು ಕಾಂಗ್ರೆಸ್ ಬೆಂಬಲಿಸುವಂತೆ ಸ್ಟಾರ್ ಚಂದ್ರು ಮನವಿ ಮಾಡಿದರು.

ಭರ್ಜರಿ ಸ್ವಾಗತ: ಮಂಡ್ಯ ಲೋಕಸಭ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡಿರುವ ಸ್ಟಾರ್ ಚಂದ್ರು ಅವರಿಗೆ ಗ್ರಾಮೀಣ ಪ್ರದೇಶದ ಮಹಿಳೆಯರು ಆರತಿ ಎತ್ತಿ ಹಣೆಗೆ ತಿಲಕವನ್ನಿಟ್ಟು ಹೃದಯಸ್ಪರ್ಶಿಯಾಗಿ ಸ್ವಾಗತಿಸಿ ತಮ್ಮ ಗ್ರಾಮಗಳಿಗೆ ಬರಮಾಡಿಕೊಂಡರು. ಕಾಂಗ್ರೆಸ್ ಪಕ್ಷ ಹಾಗೂ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರ ಪರವಾಗಿ ಜಯಘೋಷಗಳು ಮುಗಿಲು ಮುಟ್ಟಿದ್ದವು.



ಗೃಹರಕ್ಷಕ ದಳ ತರಬೇತಿ ಪಡೆದವರಿಗೆ ಪ್ರಮಾಣ ಪತ್ರ ವಿತರಣೆ



ಮೈಸೂರು, ಏ.7(ಎಸ್‌ಪಿಎನ್)–ಮೈಸೂರು ಜ್ಯೋತಿನಗರದ ಡಿಎಆರ್ ಸಮುದಾಯ ಭವನದಲ್ಲಿ ಮೈಸೂರು ಜಿಲ್ಲಾ ಗೃಹ ರಕ್ಷಕದಳದ ವತಿಯಿಂದ ಆಯೋಜಿಸಿದ್ದ ಗೃಹರಕ್ಷಕ ದಳ ಮೂಲ ತರಬೇತಿ ಶಿಬಿರದ 2ನೇ ಬ್ಯಾಂಚ್‌ನ ಸಮಾರೋಪದಲ್ಲಿ 253 ಅಭ್ಯರ್ಥಿಗಳಿಗೆ ತರಬೇತಿ ಪ್ರಮಾಣ ಪತ್ರವನ್ನು ಮೈಸೂರು ಜಿಲ್ಲೆ ಅಪರ ಪೊಲೀಸ್ ಅಧೀಕ್ಷಕ ಎಲ್.ನಾಗೇಶ್ ಭಾನುವಾರ ವಿತರಿಸಿದರು.

ನಂತರ ಮಾತನಾಡಿದ ಅವರು, ಗೃಹರಕ್ಷಕ ದಳದಲ್ಲಿ ಅಭ್ಯರ್ಥಿಗಳು ಸೇವೆ ಸಲ್ಲಿಸುತ್ತಿರುವುದು ಉತ್ತಮ ಅಭಿರುಚಿ. ಇಲ್ಲಿ ಸಾರ್ವಜನಿಕ ಕೆಲಸಗಳಲ್ಲಿ ತೊಡಗಿಸಿಕೊಂಡು ಕೆಲಸ ಮಾಡುವ ಅಭ್ಯರ್ಥಿಗಳಿಗೆ ಉತ್ತಮ ವೇದಿಕೆ ಎಂದರು.

ಗೃಹರಕ್ಷಕ ದಳದಲ್ಲಿ ಹೊಸದಾಗಿ ನೇಮಕಗೊಂಡಿರುವ 344 ಮಂದಿಯಲ್ಲಿ 253 ಮಂದಿಗೆ ತರಬೇತಿ ಪಡೆದಿದ್ದಾರೆ. ಗೃಹ ರಕ್ಷಕದಳದ ಮೂಲ ತರಬೇತಿ ಪಡೆದು, ಪೊಲೀಸ್ ಇಲಾಖೆಯಲ್ಲಿ ಕಾನೂನು ಸುವ್ಯವಸ್ಥೆ, ಸಂಚಾರ ವಿಭಾಗ, ಸಾರ್ವಜನಿಕ ಆಸ್ಪತ್ರೆ ಹಾಗೂ ಉದ್ದಿಮೆಗಳಲ್ಲಿ ಕೆಲಸ ಮಾಡಲು ಅಲ್ಲಿನ ಮಾನದಂಡಗಳಿಗೆ ಅನುಸಾರವಾಗಿ ಕೆಲಸ ನಿರ್ವಹಿಸಬೇಕು ಎಂದು ಕಿವಿ ಮಾತು ಹೇಳಿದರು.

ಗೃಹರಕ್ಷಕ ದಳದಲ್ಲಿ ಕೆಲಸ ಮಾಡುವರು, ಸಾರ್ವಜನಿಕ ಸ್ಥಳಗಳಲ್ಲಿ ಉತ್ತಮ ನಡವಳಿಕೆ, ಮಾತುಗಾರಿಕೆ, ಶಿಸ್ತಿಗೆ ಹೆಚ್ಚಿನ ಆದ್ಯತೆ ನೀಡಬೇಕು. ಯಾವುದೇ ಸಮಯದಲ್ಲಾದರೂ ಸಾರ್ವಜನಿಕರೊಂದಿಗೆ ಸೌಮ್ಯವಾಗಿ ವರ್ತಿಸಿ, ಈ ಇಲಾಖೆಗೆ ಗೌರವ ತರುವ ಕೆಲಸ ಮಾಡಬೇಕು ಎಂದು ಕಿವಿ ಮಾತು ಹೇಳಿದರು.

ಈ ವೇಳೆ ಮೈಸೂರು ಜಿಲ್ಲಾ ಗೃಹರಕ್ಷಕ ದಳದ ಗೌರವ ಸಮಾದೇಷ್ಟರಾದ ಡಾ.ಎಂ.ಕಾಂತರಾಜು, ಬೋದಕರಾದ ಎಂ.ಆರ್.ಚಂದನ್, ಎಸ್.ಮಂಜುನಾಥ್, ಸಹಾಯಕ ಆಡಳಿತಾಧಿಕಾರಿ ಎಂ.ಎನ್.ವಿಶ್ವನಾಥ್ ಸೇರಿದಂತೆ ಇತರರಿದ್ದರು. ಈ ವೇಳೆ ನೂತನ ಗೃಹರಕ್ಷಕದಳದ ಸಿಬ್ಬಂದಿಗೆ ಪ್ರತಿಜ್ಞಾವಿಧಿ ಬೋಧಿಸಲಾಯಿತು.

ನೀತಿ ಸಂಹಿತೆ ಉಲ್ಲಂಘನೆ

ಕೆ.ಎಸ್.ಈಶ್ವರಪ್ಪ ವಿರುದ್ಧ ಎಫ್‌ಐಆರ್ ದಾಖಲು



ಬೆಂಗಳೂರು: ಲೋಕಸಭಾ ಚುನಾವಣೆ ನೀತಿ ಸಂಹಿತೆ ಉಲ್ಲಂಘನೆ ಆರೋಪದ ಮೇಲೆ ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಚುನಾವಣಾಧಿಕಾರಿಯಿಂದ ಅಗತ್ಯ ಅನುಮತಿ ಪಡೆಯದೆ ರಾಜಕೀಯ ಕಾರ್ಯಕ್ರಮ ಆಯೋಜಿಸಿದ ಹಿನ್ನೆಲೆಯಲ್ಲಿ ಎಫ್‌ಐಆರ್ ದಾಖಲಾಗಿದೆ ಎಂದು ತಿಳಿದುಬಂದಿದೆ. ಸ್ವತಂತ್ರ ಅಭ್ಯರ್ಥಿಯಾಗಿ ಕಣಕ್ಕಿಳಿಯಲು ನಿರ್ಧರಿಸಿರುವ ಈಶ್ವರಪ್ಪ, ತೀರ್ಥಹಳ್ಳಿ ತಾಲೂಕಿನ ನೊಣಬೂರು ಗ್ರಾಪಂ ವ್ಯಾಪ್ತಿಯ ಅಂಬುತೀರ್ಥದ ದೇವಸ್ಥಾನದಲ್ಲಿ ಧಾರ್ಮಿಕ ವಿಧಿವಿಧಾನ ನೆರವೇರಿಸಿದರು.

ತರುವಾಯ ಹತ್ತಿರದ ಅರ್ಚಕರ ನಿವಾಸದ ಅಂಗಳದಲ್ಲಿ ಸುಮಾರು 50 ರಿಂದ 60 ವ್ಯಕ್ತಿಗಳೊಂದಿಗೆ ಸಭೆಯನ್ನು ನಡೆಸಿದ್ದಾರೆಂದು ಹೇಳಲಾಗುತ್ತಿದೆ.

ಸಭೆ ಹಿನ್ನೆಲೆಯಲ್ಲಿ ಸ್ಥಳದಲ್ಲಿ ತಾತ್ಕಾಲಿಕ ವೇದಿಕೆಯನ್ನು ನಿರ್ಮಿಸಿ, 50 ಕುರ್ಚಿಗಳು ಮತ್ತು ಹ್ಯಾಂಡ್‌ಹೆಲ್ಡ್ ಮೈಕ್ ವ್ಯವಸ್ಥೆ ಮಾಡಿದ್ದು, ಈಶ್ವರಪ್ಪ ರಾಜಕೀಯ ಉದ್ದೇಶದಿಂದ ಭಾಷಣ ಮಾಡಿದ್ದರು ಎಂದು ತಿಳಿದುಬಂದಿದೆ. ಇದು ಚುನಾವಣಾ ನೀತಿ ಸಂಹಿತೆಯ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ಚುನಾವಣಾ ಆಯೋಗದ ಅಧಿಕೃತ ಪ್ರಕಟಣೆ ತಿಳಿಸಿದೆ. ಸ್ಥಳೀಯ ನ್ಯಾಯಾಲಯದ ಅನುಮತಿ ಮೇರೆಗೆ ಈಶ್ವರಪ್ಪ ವಿರುದ್ಧ ಪ್ರಕರಣ ದಾಖಲಾಗಿದೆ.

ಅರ್ಜಿ ಆಹ್ವಾನ

ಮೈಸೂರು: 2023–24ನೇ ಸಾಲಿಗೆ ಪೋಷಕರ ವಾರ್ಷಿಕ ವರಮಾನ 2.5 ಲಕ್ಷದೊಳಗಿರುವ ಮೈಸೂರು ತಾಲೂಕಿನ ಮೆಟ್ರಿಕ್ ನಂತರದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ವಿದ್ಯಾರ್ಥಿವೇತನಕ್ಕಾಗಿ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ www.ssp.postmatric.karnataka.gov.inನಲ್ಲಿ ಅರ್ಜಿ ಸಲ್ಲಿಸಲು ಏ.15 ಅಂತಿಮ ದಿನ. ಅರ್ಹ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ಬ್ಯಾಂಕಿಗೆ ಭೇಟಿ ನೀಡಿ, ಅವರ ಆಧಾರ್ ಸಂಖ್ಯೆಯನ್ನು NPCI (ನ್ಯಾಷನಲ್ ಪೇಮೆಂಟ್ ಕಾರ್ಪೋರೇಷನ್ ಆಫ್ ಇಂಡಿಯಾ)ರಲ್ಲಿ ಕಡ್ಡಾಯವಾಗಿ ಬ್ಯಾಂಕ್ ಖಾತೆಗೆ ಆಧಾರ್ ಸೀಡಿಂಗ್ ಮಾಡಿಸಬೇಕು. ಮಾಹಿತಿಗೆ ದೂ. ಸಂ.–0821–2520910 ಅನ್ನು ಸಂಪರ್ಕಿಸಬಹುದು.

ನಕ್ಕರೆ ಅದೇ ಸ್ವರ್ಗ

ದೇವರು : ನಿನ್ನ ತಪಸ್ಸಿಗೆ ಮೆಚ್ಚಿದೆ. ಯಾವುದಾದರೂ ಎರಡು ವರ ಬೇಡ್ಕೊ.
ಭಕ್ತ : ಮೊದಲನೆಯ ವರ, ನನಗೆ ನಿದ್ದೆಯಲ್ಲಿ ಸಾವು ಬರಬೇಕು.
ದೇವರು : ಹಾಗೆ ಆಗಲಿ, ಎರಡನೇಯ ವರ?
ಭಕ್ತ : ಎರಡನೆಯದ್ದು ಅಂದ್ರೆ ನನಗೆ ಯಾವತ್ತೂ ನಿದ್ದೇನೆ ಬರಬಾರದು...!

ಮೈಸೂರು ಮಿತ್ರ
ಸೋಮವಾರ, 8 ಏಪ್ರಿಲ್ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

'ಗೆಲ್ಲುತ್ತಾ ಹೋಗುವವನು ಇತಿಹಾಸ ಸೃಷ್ಟಿಸುತ್ತಾನೆ,
ಸೋತು ಗೆಲ್ಲುವವನು ಇತಿಹಾಸವನ್ನು ಬದಲಾಯಿಸುತ್ತಾನೆ' –

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ಬಲ್ಲವರು ಬಲ್ಲರು ಬೆಲ್ಲದ ರುಚಿಯನ್ನು'

ನಿಮ್ಮ ಪತ್ರಗಳು

'ಚುನಾವಣೆ ಪರ್ವ, ದೇಶದ ಗರ್ವ' ಘೋಷವಾಕ್ಯ ಎಷ್ಟರ ಮಟ್ಟಿಗೆ ಸರಿ?

ಮಾನ್ಯರೆ,

'ಚುನಾವಣೆ ಪರ್ವ, ದೇಶದ ಗರ್ವ' ಇದು 2024ರ ಲೋಕಸಭಾ ಚುನಾವಣೆಯ ಘೋಷವಾಕ್ಯ, ಮತದಾರರಲ್ಲಿ ಮತ ಹಾಕಲು ಜಾಗೃತಿ ಮೂಡಿಸಲು ಅದರಲ್ಲೂ ವಿಶೇಷವಾಗಿ ಯುವ ಮತದಾರರು, ತಮ್ಮ ಹಕ್ಕನ್ನು ಚಲಾಯಿಸಲು ಈ ಧ್ಯೇಯವಾಕ್ಯದೊಂದಿಗೆ ಚುನಾವಣಾ ಆಯೋಗದ ಸ್ವೀಪ್ ಸಮಿತಿ ಜನ-ಜಾಗೃತಿ ಮೂಡಿಸುತ್ತಿದೆ.

ಈ ಘೋಷವಾಕ್ಯ ಎಷ್ಟರ ಮಟ್ಟಿಗೆ ಅರ್ಥಗರ್ಭಿತವಾಗಿದೆ? ಗರ್ವ ಎಂದರೆ ಕನ್ನಡದಲ್ಲಿ, ಅಹಂಕಾರ, ದುರಹಂಕಾರ, ಸೊಕ್ಕಿನವ, ಕೂಗಾಡುವವ ಎಂದು ಅರ್ಥ ಕೊಡುತ್ತದೆ. ನಾವು ಮತದಾನ ಮಾಡುವುದು ದೇಶದ ದುರಹಂಕಾರ ಏಕಾಗಬೇಕು? ಈ ಘೋಷವಾಕ್ಯ ಮಾಡಿದವರಿಗೆ ಕನಿಷ್ಠ ಜ್ಞಾನವೂ ಇಲ್ಲವಾಯಿತೆ? ಇದರ ಬದಲು, ಚುನಾವಣಾ ಪರ್ವ, ನಾಗರಿಕರ ಕರ್ತವ್ಯ ಅಥವಾ ಲೋಕ ಚುನಾವಣೆ, ಮತದಾರರ ಹಕ್ಕು ಚಲಾವಣೆ, ಗರ್ವ ಪದವನ್ನು ಬಿಟ್ಟು ಬೇರೆ ವಾಕ್ಯವನ್ನು ಬಳಸಬಹುದಿತ್ತು. ಪ್ರಚಾರಕ್ಕಾಗಿ ಬಳಸುವ ಘೋಷವಾಕ್ಯಗಳು, ಯಾವಾಗಲೂ, ಪ್ರಸ್ತುತತೆ, ಜವಾಬ್ದಾರಿ, ಜನಾಭಿಪ್ರಾಯ, ಅರ್ಥಗರ್ಭಿತ ಮತ್ತು ಆಕರ್ಷಣೆಯಾಗಿರಬೇಕು.

ಚುನಾವಣಾ ಆಯೋಗದ ಸ್ವೀಪ್ ಸಮಿತಿಯು ಈ ಘೋಷವಾಕ್ಯ ಮಾಡುವ ಮುನ್ನ ನಾಲ್ಕಾರು ಜನ ಸಾಹಿತಿಗಳ ಅಭಿಪ್ರಾಯ ಪಡೆಯಬೇಕಿತ್ತು. ಈ ಅಧಿಕಾರಿಗಳ ಮನಸ್ಥಿತಿ ಹೇಗಿದೆ ಎಂದರೆ, ನಾವು ಮಾಡುವುದೇ ಸರಿ ಎನ್ನುವಂತಾಗಿದೆ. ಇವರದು ಯಾವಾಗಲೂ ಏಕಮುಖ ಸಂಚಾರ ತಾನೇ ?

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಬದುಕು-ಬಿಂದು

ಮಾನ್ಯರೆ,

1. **ಆಗ್ರಹ** : ಎಷ್ಟೋ ಕಡೆ ಸ್ಮಶಾನಕ್ಕಾಗಿ ಸರ್ಕಾರಕ್ಕೆ ಆಗ್ರಹವಂತೆ. ಅದರ ಬದಲು, ಅಮೃತತ್ವಕ್ಕಾಗಿ ಯಮನನ್ನು ಆಗ್ರಹಿಸಬಾರದೆ?
2. **ಚರ್ಮ**: ಮಾನವನ, ಅರ್ಥಾತ್ ಮಾನಿನಿಯ ಚರ್ಮ ಇಷ್ಟು ಚೆಲುವಾಗಿರಬಲ್ಲುದೆ? ಶಿವ ಶಿವಾ!
3. **ದ್ವಯ** : ಸರ್ವತ್ರ ಮಾನವ-ಸಮಾಜದ ಅಸಹನೀಯ, ಶೋಚನೀಯ ಸಮಸ್ಯಾ ದ್ವಯ: ಶೌಚ, ಶೌಚಾಲಯ.
4. **ಸ್ಟೆಪ್ನಿ** : ನನ್ನಂಥವರು ಮಾಮೂಲು ಕರ್ತವ್ಯಗಳೊಡನೆ ಒಮ್ಮೊಮ್ಮೆ 'ಸ್ಟೆಪ್ನಿ'ಯ ಕರ್ತವ್ಯವನ್ನೂ ಮಾಡಬೇಕಾಗುತ್ತದೆ! ಅಚ್ಚರಿ.
5. **ಭ್ರಮೆ** : ಕಾಮಿನಿ, ಮಾನಿನಿಯೇನು ಜೇನೆ, ಸಕ್ಕರೆಯೇ, ಬೆಲ್ಲವೆ? ಗಂಡು ಭ್ರಮಾಧೀನ!
6. **ನೇಣು**: ಕೆಲವರು ತಮ್ಮ ಹೆಂಡತಿಯ ಸೀರೆಯಿಂದಲೇ ನೇಣು ಹಾಕಿಕೊಳ್ಳುವುದು ಅರ್ಥಪೂರ್ಣವಲ್ಲವೆ?
7. **ಕಣ್ಣೀರು** : "ಹೊಟ್ಟೆಯ ಕಿಚ್ಚಿಗೆ ಕಣ್ಣೀರ್ ಸುರಿಸು" ಎಂದು ಶಿವನನ್ನು ಬೇಡಿದರು ಕುವೆಂಪು. ಅಂತೆಯೇ ಕನ್ನಡಿಗ ಕೃತಘ್ನತೆಯನ್ನು ನಿವಾರಿಸು ಎಂದೂ ಬೇಡಬೇಕಿತ್ತು!

ಧ(ಹ)ಗೆ
ಏನಂಥ ಪ್ರಚಂಡ ಬೇಸಗೆ!
ಸಹಿಸಿಕೊಳ್ಳಬಹುದು ಹೇಗೊ ಈ ಧಗೆ
ಯನ್ನು; ಆದರೆ ಸೈರಿಸಲಾಗದು ಮಾನವ
ಮನೋಲೋಕದ ಹಗೆತನದ ತಾಪವನ್ನು!
(ಅಂತೆಯೇ ಬದುಕಿನ ತಾಪತ್ರಯಗಳನ್ನು)

–ಸಿಪಿಕೆ, ಹಿರಿಯ ಸಾಹಿತಿಗಳು, ಮೈಸೂರು.

ಸುಮಲತೆಯು ಬಾಡಿತೇಕೇ?

ಮಾನ್ಯರೆ,



ಕನ್ನಡದ ಸುಪ್ರಸಿದ್ಧ ನಾಯಕನಟರಾಗಿದ್ದ ಹಾಗೂ ಮಾಜಿ ಕೇಂದ್ರ ಸಚಿವರಾಗಿದ್ದ ದಿವಂಗತ ಅಂಬರೀಶ್ ಅವರ ಪತ್ನಿ ಹಾಗೂ ಹಾಲಿ ಮಂಡ್ಯ ಲೋಕಸಭಾ ಕ್ಷೇತ್ರದ ಸದಸ್ಯೆ ಶ್ರೀಮತಿ ಸುಮಲತಾ ಅಂಬರೀಶ್, ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸದಿರುವ ಬಗ್ಗೆ ಮಾಧ್ಯಮಗಳಲ್ಲಿ ಪ್ರಕಟವಾಗಿದೆ.

ಕಳೆದ 2019ರ ಲೋಕಸಭಾ ಚುನಾವಣೆಯಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿ ಅತ್ಯಂತ ಕಠಿಣಕರ ಪರಿಸ್ಥಿತಿ ಹಾಗೂ ಸನ್ನಿವೇಶಗಳನ್ನು ಎದುರಿಸಿ ಚುನಾವಣೆಯಲ್ಲಿ ಜಯಭೇರಿ ಬಾರಿಸಿದ ಸುಮಲತಾ ನಂತರ ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ, ಬಿಜೆಪಿಗೆ ಬೆಂಬಲ ಸೂಚಿಸಿದ್ದರು. ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ಪಡೆದು ಚುನಾವಣೆಯಲ್ಲಿ ಸ್ಪರ್ಧಿಸಬೇಕೆಂಬ ತೀವ್ರ ಆಸಕ್ತಿ ಹೊಂದಿದ್ದ ಅವರು ಅದಕ್ಕಾಗಿ ಅಂತಿಮ ಕ್ಷಣದವರೆಗೂ ಪ್ರಯತ್ನಿಸಿದರಾದರೂ ಸಹ, ಅವರ ಆಸೆಗೆ ಮಂಡ್ಯ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಡುವ ಮೂಲಕ ಬಿಜೆಪಿ ತಣ್ಣೀರೆರಚಿದೆ. ಆ ಪಕ್ಷದ ವರಿಷ್ಠರು ಸುಮಲತಾರವರಿಗೆ ಮುಂದೆ ಸೂಕ್ತ ಸ್ಥಾನಮಾನ ನೀಡುವ ಭರವಸೆ ನೀಡಿದ್ದಾರೆ ಎಂದು ಹೇಳಲಾಗುತ್ತಿದೆ.

ಮತ್ತೋರ್ವ ಟಿಕೆಟ್ ವಂಚಿತರಾದ ಹಾಲಿ ಸಂಸದ ಪ್ರತಾಪ ಸಿಂಹ ಹಾಗೂ ಟಿಕೆಟ್ ವಂಚಿತ ಇನ್ನೂ ಅನೇಕರಿಗೂ ಸಹ ಇಂತಹುದೇ ಭರವಸೆ ನೀಡಿರಬಹುದು. ಕಳೆದ ಬಾರಿಯ ಚುನಾವಣೆಯಲ್ಲಿ ಸೆರಗೊಡ್ಡಿ ಮತ ಯಾಚಿಸಿದ ಸುಮಲತಾ ಇದೀಗ ಬಿಜೆಪಿ ಸೇರಿದ್ದಾರೆ. ಜೊತೆಗೆ ಬೆಂಬಲಿತ ಅಭ್ಯರ್ಥಿ ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿಯವರನ್ನು ಬೆಂಬಲಿಸಲಿದ್ದಾರೆ ಎಂಬ ಊಹಾಪೋಹಗಳ ಹಿನ್ನೆಲೆಯಲ್ಲಿ ಸುಮಲತಾರವರ ಮುಂದಿನ ರಾಜಕೀಯ ನಡೆ ಕುತೂಹಲಕಾರಿಯಾಗಿದೆ. ಒಂದು ವೇಳೆ ಸುಮಲತಾ, ಕುಮಾರಸ್ವಾಮಿಯನ್ನು ಬೆಂಬಲಿಸಿದರೆ ಅದಕ್ಕೆ ಪ್ರತಿಫಲವಾಗಿ, ಕೇಂದ್ರ ಸರ್ಕಾರ ಅವರನ್ನು ಯಾವುದಾದರೂ ರಾಜ್ಯದ ರಾಜ್ಯಪಾಲೆಯನ್ನಾಗಿ ನೇಮಿಸಬಹುದು ಅಥವಾ ಮುಂದೆ ಕೇಂದ್ರದಲ್ಲಿ ಎನ್‌ಡಿಎ ಮತ್ತೆ ಅಧಿಕಾರಕ್ಕೆ ಬಂದರೆ, ಸುಮಲತಾ ಅವರನ್ನು ರಾಜ್ಯಸಭೆಗೆ ನಾಮಕರಣ ಮಾಡಿ, ಕೇಂದ್ರ ಸಂಪುಟದಲ್ಲಿ ಸ್ಥಾನ ನೀಡಬಹುದು. ಸುಮಲತಾ ಓರ್ವ ದಿಟ್ಟ ಹಾಗೂ ಸ್ವಾಭಿಮಾನಿ ರಾಜಕಾರಣಿ ಎಂಬುದರಲ್ಲಿ ಎರಡನೇ ಮಾತಿಲ್ಲ. ಆದರೆ ....

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.



ಜಿ. ಎಲ್. ತ್ರಿಪುರಾಂತಕ
ಮೊ: 96866-77284

ಬೆರಗು

ಸ್ವಾವಲಂಬಿಯ ಬದುಕು ಸಾರ್ಥಕ... ಸೋಮಾರಿಯ ಬದುಕು ನಿರರ್ಥಕ...!

ಭೂಮಿಯ ಮೇಲೆ ಮನುಷ್ಯನನ್ನು ಹೊರತುಪಡಿಸಿ ಇತರೆ ಜೀವರಾಶಿಗಳ ಬದುಕು ನಿತ್ಯವೂ ಹೋರಾಟದ ಬದುಕು ಎನ್ನಬಹುದು. ಮರಿಯಾಗಿದ್ದಾಗ ಅಮ್ಮನಿಂದ ಆಹಾರ ಪಡೆಯುವುದನ್ನು ಬಿಟ್ಟರೆ ಬೆಳೆದ ಮೇಲೆ ಅವಿರತಶ್ರಮದ ಬದುಕು ಪ್ರತಿಯೊಂದು ಜೀವಿಯದ್ದಾಗಿರುತ್ತದೆ. ತನ್ನ ಆಹಾರವನ್ನು ತಾನೇ ಸಂಪಾದಿಸುವ, ತನ್ನ ಗೂಡನ್ನು ತಾನೇ ಕಟ್ಟುವ ಅವಿಶ್ರಾಂತ ಜೀವಿಗಳಾಗಿ ಅವುಗಳು ಬದುಕುತ್ತವೆ. ಅವುಗಳ ಬದುಕು ಸಾರ್ಥಕ ಬದುಕು ಅನಿಸುತ್ತದೆ. ಆದರೆ ಬಹುತೇಕ ಮನುಷ್ಯರ ಬದುಕು ಸುಭದ್ರತೆಯಿಂದ ಕೂಡಿದೆ. ಸಾಮಾಜಿಕ ವ್ಯವಸ್ಥೆಯು ಮನುಷ್ಯರ ಬದುಕನ್ನು ಅಷ್ಟು ಸುಲಭವಾಗಿ ಅನಿಶ್ಚಿತತೆಯಾಗಿ ಇರಲು ಬಿಡುವುದಿಲ್ಲ. ಅಪ್ಪ-ಅಮ್ಮನ ದುಡಿಮೆಯಿಂದಲೇ ಸಾಯುವವರೆವಿಗೆ ಜೀವ ಸವೆಸಿಬಿಡುವ ಬಿಡಾಡಿ ಸೋಮಾರಿಗಳು ಇದ್ದಾರೆ ಎಂದರೆ ಮನುಷ್ಯ ಜಾತಿಯಲ್ಲಿ ಮಾತ್ರ ಎನ್ನಬಹುದು. ಶ್ರಮವೇ ಇಲ್ಲದೆ ಇಡೀ ಜೀವಮಾನ ಕಳೆದ ಮಹಾನುಭಾವರು ಅನೇಕರು ನಮ್ಮ ನಿಮ್ಮ ನಡುವೆ ಇರುವುದನ್ನು ಕಾಣಬಹುದು.

ಮನುಷ್ಯ ಗ್ರೇಟ್ ಎನಿಸಿಕೊಂಡು ಬದುಕಬೇಕು ಅಂತೇನಿಲ್ಲ. ಹುಟ್ಟಿದ ಪ್ರತಿಯೊಬ್ಬರು ಯಾವುದಾದರೂ ಕ್ಷೇತ್ರದಲ್ಲಿ ಸಾಧನೆ ಮಾಡಿ ಪ್ರಶಸ್ತಿ ಪುರಸ್ಕಾರ ಪಡೆಯಬೇಕು ಅಂತಲ್ಲ. ಹೆತ್ತವರಿಗೆ ಭಾರವಾಗದೆ, ದೇಶಕ್ಕೆ ಹೊರೆಯಾಗದೆ ಕನಿಷ್ಠ ಪಕ್ಷ ತನ್ನ ಬದುಕಿನ ಖರ್ಚನ್ನು ದುಡಿಯುವ ಮಟ್ಟಿಗಾದರೂ ಕ್ರಿಯಾಶೀಲವಾಗಿರಬೇಕು ಎಂಬುದು ಆಶಯ. ಸ್ವಾವಲಂಬಿಯಾಗಿ ಬದುಕುವುದು ಸಾರ್ಥಕ ಬದುಕಿನ ಲಕ್ಷಣ. ಕತ್ತೆಗಾಗುವಷ್ಟು ವಯಸ್ಸಾಗಿದ್ದರೂ ಕೆಲವರು ತಮ್ಮ ಕೆಲಸವನ್ನು ತಾವು ಮಾಡಿಕೊಳ್ಳಲು ಆಗದಷ್ಟು ಸೋಮಾರಿಗಳಾಗಿರುತ್ತಾರೆ, ಅಷ್ಟೇ ಅಲ್ಲ ಅಪ್ಪ ಅಮ್ಮನ ಮುಂದೆ ಖರ್ಚಿಗೆ ಕೈ ಚಾಚುತ್ತಾರೆ. ತಾವೇ ಹೆತ್ತವರನ್ನು ಸಾಕಬೇಕಾದ ವಯಸ್ಸಾಗಿದ್ದರೂ, ಅವರ ನೆರಳಿನಲ್ಲಿಯೇ ಬದುಕುವ ಅನಿವಾರ್ಯತೆಯನ್ನು ಸೃಷ್ಟಿಸಿಕೊಂಡಿರುತ್ತಾರೆ. ತಮ್ಮ ಕೆಲಸವನ್ನು ಮಾಡಿಕೊಳ್ಳದೆ ಇತರರಿಂದ ಮಾಡಿಸಿಕೊಳ್ಳುವುದು ಪ್ರತಿಷ್ಠೆಯ ಸಂಕೇತ ಎಂದು ಭಾವಿಸುವವರೂ ಕೆಲವರು ಇದ್ದಾರೆ. ಸಣ್ಣ ಬ್ಯಾಗನ್ನು ಕೈಯಲ್ಲಿ ಹಿಡಿದುಕೊಳ್ಳಲಾಗದೆ ಸಹಾಯಕರನ್ನು ಕರೆಯುವ ಜನರು ನಮ್ಮೊಟ್ಟಿಗೆ ಇದ್ದಾರೆ. ಕೈಕಾಲುಗಳು ಉತ್ತಮವಾಗಿದ್ದರೂ ವಿಶೇಷಚೇತನರ ರೀತಿ, ಪ್ರತಿಯೊಂದಕ್ಕೂ ಅನ್ಯರನ್ನು ಅವಲಂಬಿಸುವ ಅಭ್ಯಾಸ ಮಾಡಿಕೊಂಡಿರುತ್ತಾರೆ. ಇಡೀ ಜೀವಮಾನ ಸೋಮಾರಿಗಳಾಗಿ ಕಳೆದು, ನಿರರ್ಥಕ ಬದುಕನ್ನು ಸವೆಸಿ ಕೊನೆಗೆ ಮಣ್ಣಾಗಿಬಿಡುತ್ತಾರೆ.

ಇಂದು ಪತ್ರಿಕೆಯೊಂದರಲ್ಲಿ ಸುದ್ದಿಯೊಂದನ್ನು ಓದಿ ನಿಜಕ್ಕೂ ಖುಷಿಯಾಯಿತು. 'ಆತ್ಮವಿಶ್ವಾಸದ ಕಡಲು' ಎಂಬ ಶೀರ್ಷಿಕೆಯಲ್ಲಿ ಪ್ರಕಟವಾದ ಸುದ್ದಿಯಲ್ಲಿ ವಿಶೇಷಚೇತನರಾದ ವಿಶ್ವಾಸ್ ಎಂಬುವವರ ಯಶೋಗಾಥೆಯನ್ನು ಓದಿ ಆಶ್ಚರ್ಯ ಹಾಗೂ ಆನಂದ ಎರಡೂ ಆಯಿತು. ಎರಡೂ ಕೈಗಳು ಇಲ್ಲದ ವಿಶ್ವಾಸ್ ಶಿಕ್ಷಣ ಮುಗಿಸಿ, ಕೆಲಸ ಅರಸಿ ಸಂದರ್ಶನಕ್ಕೆ ಹಾಜರಾದಾಗ 'ನಿಮಗೆ ಎರಡೂ ಕೈಗಳಿಲ್ಲ ಹೇಗೆ ಕೆಲಸ ಮಾಡುತ್ತೀರಿ?' ಎಂದು ಪ್ರಶ್ನಿಸಿದಾಗ ನಿರುತ್ತರರಾಗಿ ನಿರುತ್ಸಾಹದಿಂದ ವಿಶ್ವಾಸ್ ಅವರು ಅಲ್ಲಿಂದ ಹೊರಬರುತ್ತಾರೆ. ಆದರೆ ಅಷ್ಟು ಸುಲಭವಾಗಿ ಬದುಕಿನಲ್ಲಿ ಸೋಲನ್ನು ಒಪ್ಪಿಕೊಳ್ಳದ ವಿಶ್ವಾಸ್ ಅವರು ಕೈಗಳು ಇಲ್ಲದಿದ್ದರೂ ಏನಾದರೂ ಸಾಧಿಸಲೇಬೇಕು ಎಂಬ ವಿಶ್ವಾಸದಿಂದ ತಮ್ಮ ಬದುಕಿನಲ್ಲಿ ಹೊಸ ಭಾಷ್ಯವನ್ನು ಬರೆಯುತ್ತಾರೆ. ಅವರನ್ನು ಕೈ ಹಿಡಿದದ್ದು ಈಜು ಕಲೆ. ಅಂತಾರಾಷ್ಟ್ರೀಯ ಪ್ಯಾರ ಈಜುಪಟುವಾಗಿ ರೂಪುಗೊಂಡು ಅನೇಕ ವಿಶೇಷಚೇತನರಿಗೆ ಮಾದರಿ ಸಾಧಕರಾಗಿ ಹೊರಹೊಮ್ಮಿದ್ದಾರೆ.

ಸ್ವಾವಲಂಬಿಯಾಗಿ ಬದುಕಲು ನಿರ್ಧರಿಸಿದವನಿಗೆ ಸಾಧಿಸಲು ಸಾವಿರ ಹಾದಿಗಳು ಕಾಣುತ್ತವೆ. ಪರಾವಲಂಬಿಯು ಸ್ವಯಂ ಅಂಧತ್ವದಿಂದ ಬದುಕುವ ದಾರಿಯನ್ನೇ ಕಳೆದುಕೊಂಡುಬಿಡುತ್ತಾನೆ. ಅವನಿಗೆ ಶ್ರಮದ ಹಾದಿಗಳು ಕಾಣುವುದಿಲ್ಲ. ಸದೃಢವಾದ ಕೈಗಳು ಇರುವವರೇ ನೀರಿಗಿಳಿದು ಈಜಲು ಹೆದರುವಾಗ ಎರಡೂ ಕೈಗಳಿಲ್ಲದ ವಿಶ್ವಾಸ್ ಅವರು ಹೇಗೆ ಸಾಧನೆ ಮಾಡಿದರು ಎಂಬುದೇ ಸೋಜಿಗದ ಸಂಗತಿ. ಬದುಕಲೇಬೇಕು ಎಂಬ ಛಲವೊಂದಿದ್ದರೆ, ಗೆದ್ದೇ ಗೆಲ್ಲುತ್ತೇನೆ ಎಂಬ ಆತ್ಮವಿಶ್ವಾಸ ಒಂದಿದ್ದರೆ, ನಿರಂತರ ಪ್ರಯತ್ನವಿದ್ದರೆ ಊಹೆಗೂ ನಿಲುಕದ ಸಾಧನೆ ಮಾಡಿ ತೋರಬಹುದು ಎಂಬುದಕ್ಕೆ ವಿಶ್ವಾಸ್ ಅವರ ಜೀವನ ಸಾಧನೆಯೇ ಸಾಕ್ಷಿ.

ಒಂದು ಕಾಲದಲ್ಲಿ ಮನೆಯಲ್ಲಿ ಟಿ.ವಿ., ಫ್ರಿಡ್ಜ್, ವಾಷಿಂಗ್ ಮೆಷಿನ್ ರೀತಿ ಒಂದು ವಸ್ತುವಾಗಿ ಇದ್ದ ವಿಶ್ವಾಸ್ ಅವರ ಬದುಕಿನಲ್ಲಿ ಅವರ ಹೆತ್ತವರನ್ನು ಕಳೆದುಕೊಂಡ ಮೇಲೆ ಬದುಕಲು ಏನಾದರೂ ಸಾಧಿಸಬೇಕಾದ ಅನಿವಾರ್ಯತೆ ಉಂಟಾಗುತ್ತದೆ. ಇವರು ಈಜುಪಟುವಾಗಲು ನಿರ್ಧರಿಸಿ ಸತತ ಎಂಟು ತಿಂಗಳ ನಿರಂತರ ತರಬೇತಿ ಪಡೆದ ನಂತರ ಸ್ಪರ್ಧೆಗಳಲ್ಲಿ ಭಾಗವಹಿಸಲು ಅಣಿಯಾಗುತ್ತಾರೆ. ಎಸ್.ಆರ್.ಸಿಂಧ್ಯಾ ಅವರು ಇವರಿಗೆ ತರಬೇತಿ ನೀಡಿ, ಇವರ ಕನಸಿಗೆ ನೀರೆರೆಯುತ್ತಾರೆ. ವಿಶ್ವಾಸ್ ಇಂದು ಅಂತರರಾಷ್ಟ್ರೀಯ ಈಜು ಸ್ಪರ್ಧೆಗಳಲ್ಲಿ ಭಾಗವಹಿಸಿ ಒಂಬತ್ತು ಪದಕಗಳನ್ನು ಗೆದ್ದಿದ್ದಾರೆ, ಮಾರ್ಷಲ್ ಆರ್ಟ್ಸ್‌ನಲ್ಲಿ ರೆಡ್ ಬೆಲ್ಟ್ ಪಡೆದಿದ್ದಾರೆ. ರಿಯಾಲಿಟಿ ಶೋಗಳಲ್ಲಿ ಗೆಸ್ಟ್ ಫರ್ಫಾರ್ಮೆನ್ಸ್ ನೀಡಿದ್ದಾರೆ. ಕಾಲಿನಲ್ಲಿಯೇ ಅಡುಗೆ ಮಾಡುವುದು, ಮೊಬೈಲ್ ಬಳಸುವುದು, ಬರೆಯುವುದು. ಹೀಗೆ ಅನೇಕ ಕೆಲಸಗಳನ್ನು ತಾವೇ ಮಾಡಿಕೊಳ್ಳುತ್ತಾರೆ. ಎಲ್ಲಾ ಅಂಗಾಂಗಗಳು ಸರಿಯಿದ್ದರೂ ಸೋಮಾರಿತನದಿಂದ ವಿಶೇಷಚೇತನರ ಹಾಗೆ ಅನ್ಯರ ಮೇಲೆ ಅವಲಂಬಿತರಾಗಿರುವ ಯುವಕರು ವಿಶ್ವಾಸ್ ಅವರ ಬದುಕನ್ನು ನೋಡಿ ಕಲಿಯಲು ನೂರಾರು ಸಂಗತಿಗಳಿವೆ.



> **"ಕೆಲಸ ಚಿಕ್ಕದೇ ಇರಲಿ, ದೊಡ್ಡದೇ ಇರಲಿ ನಾನು ಸ್ವಾವಲಂಬಿಯಾಗಬೇಕು ಎಂಬ ಸಂಕಲ್ಪ ಯುವಕರಲ್ಲಿ ಮೂಡಬೇಕು. ಕೂತು ತಿನ್ನುವವನಿಗೆ ಕುಡಿಕೆ ಹೊನ್ನು ಸಾಲದು ಎಂಬುದನ್ನು ಅರಿಯಬೇಕು. 'ಕುಳಿತು ಕುಳಿತು ಸತ್ತವರುಂಟು, ದುಡಿದು ದುಡಿದು ಸತ್ತವರಿಲ್ಲ' ಎಂಬ ಸತ್ಯವನ್ನು ಅರಿಯಬೇಕು. ಅನೇಕ ವಿಶೇಷಚೇತನರ ಬದುಕನ್ನು ಕಂಡು ಅವರಿಂದ ಪ್ರೇರಣೆ ಪಡೆದು ಕ್ರಿಯಾಶೀಲ ಬದುಕನ್ನು ರೂಢಿಸಿಕೊಳ್ಳಬೇಕು. ದುಡ್ಡಿನಿಂದಲೇ ಎಲ್ಲವನ್ನು ಖರೀದಿಸಬಲ್ಲೆ ಎಂದು ತಪ್ಪಾಗಿ ಭಾವಿಸಬಾರದು. ದಿನವಿಡೀ ದುಡಿದು ರಾತ್ರಿ ಊಟ ಮಾಡಿದಾಗ ಈ ದಿನ ಸಾರ್ಥಕವಾಯಿತು ಎನಿಸಿದಾಗ ಬರುವ ನಿದ್ರೆಗೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಹಗಲಿನಲ್ಲಿಯೇ ತೂಕಡಿಸುವ ಸೋಮಾರಿಗೆ ರಾತ್ರಿ ಸುಖನಿದ್ರೆ ಬರಲು ಸಾಧ್ಯವೇ ಇಲ್ಲ. ಕಣ್ತುಂಬ ನಿದ್ರೆ ಮಾಡಲು ಪುಣ್ಯ ಮಾಡಿರಬೇಕು. ಆ ಪುಣ್ಯವು ಮಾಡುವ ಕೆಲಸದಿಂದ ಮಾತ್ರ ಲಭಿಸಲು ಸಾಧ್ಯ ಎಂಬುದನ್ನು ನಂಬಬೇಕು. ಏನಂತೀರಿ?**

ಅನೇಕ ದಿವ್ಯಾಂಗರು, ವಿಶೇಷಚೇತನರೂ ತಾವು ಹೆತ್ತವರಿಗೆ ಹೊರೆಯಾಗಬಾರದು, ಒಡಹುಟ್ಟಿದವರಿಗೆ ಭಾರ ಎನಿಸಬಾರದು ಎಂದು ನಿಶ್ಚಯಿಸಿ, ತಮ್ಮ ಕೆಲಸಗಳನ್ನು ತಾವು ಮಾಡಿಕೊಳ್ಳುವ, ತಮ್ಮ ಬದುಕಿಗೆ ಬೇಕಾದ ಖರ್ಚನ್ನು ತಾವೇ ದುಡಿಯುವ ದೃಢ ಸಂಕಲ್ಪ ಮಾಡುತ್ತಾರೆ. ತಮ್ಮ ಶಕ್ತಿ ಮೀರಿ ದುಡಿದು ಸಾರ್ಥಕ ಬದುಕಿಗೆ ನಾಂದಿ ಹಾಡುತ್ತಾರೆ. ಪರಾವಲಂಬಿಗಳಾಗುವ ಎಲ್ಲಾ ಲಕ್ಷಣಗಳು, ಅರ್ಹತೆ ಇದ್ದರೂ ತಾವು ಇನ್ನೊಬ್ಬರ ಮೇಲೆ ಅವಲಂಬಿತರಾಗಬಾರದು ಎಂದು ನಿರ್ಧರಿಸಿ, ಸ್ವಲ್ಪ ಕಷ್ಟವಾದರೂ ತಮ್ಮ ಕಾಲ ತಾವೇ ಮೇಲೆ ನಿಲ್ಲುವ ಪ್ರಯತ್ನ ಮಾಡುತ್ತಾರೆ. ಇವರ ಶ್ರಮದ ಬದುಕು ಹಾಗೂ ಜೀವನ ಪ್ರೀತಿಯನ್ನು ಕಂಡು ಸೋಮಾರಿಗಳು ತಲೆತಗ್ಗಿಸಬೇಕಿದೆ.

ಪ್ರತಿಯೊಂದು ಪ್ರಾಣಿಪಕ್ಷಿಯು ಕ್ರಿಯಾಶೀಲವಾಗಿರುತ್ತವೆ. ಹಾಗಾಗಿ ಅವುಗಳಿಗೆ ಸಹಜ ಆರೋಗ್ಯ ಇರುತ್ತದೆ. ಮನುಷ್ಯ ಮಾತ್ರ ತನ್ನ ಸೋಮಾರಿತನದಿಂದ ಇರುವ ಆರೋಗ್ಯವನ್ನು ಕಳೆದು ಕೊಳ್ಳುತ್ತಿದ್ದಾನೆ. ಹಾಗೆಯೇ ಚಟುವಟಿಕೆ ಇಲ್ಲದ ಜೀವನ ಶೈಲಿ, ಮಿತಿಯಿಲ್ಲದ ಆಹಾರ ಪದ್ಧತಿ ಅನುಸರಿಸಿ ಸ್ಥೂಲಕಾಯದಿಂದ ಬಳಲುತ್ತಾನೆ. ಅದರಿಂದ ಅನೇಕ ಪರೋಕ್ಷ ಖಾಯಿಲೆಗಳನ್ನು ಆಹ್ವಾನಿಸುತ್ತಾನೆ. ಮನುಷ್ಯ ಎಷ್ಟೇ ಶ್ರೀಮಂತನಾಗಿದ್ದರೂ ಚಟುವಟಿಕೆಯಿಲ್ಲದ ಜೀವನ ಕ್ರಮ ಅನುಸರಿಸಿದರೆ ಆರೋಗ್ಯವಿಲ್ಲದೆ ಆಯುಷ್ಯವನ್ನು ಕಡಿಮೆ ಮಾಡಿಕೊಳ್ಳುತ್ತಾನೆ.

ಪ್ರಾಣಿಪಕ್ಷಿಗಳು ತಮ್ಮ ಸಂಗಾತಿಯನ್ನು ಆರಿಸಿಕೊಳ್ಳಬೇಕಾದರೆ ತುಂಬಾ ಶ್ರಮಪಡಬೇಕು. ಸಂಗಾತಿಗಾಗಿ ಸಂಗ್ರಾಮವನ್ನೇ ಮಾಡುವ ಪ್ರಾಣಿಗಳಿವೆ, ಹಾಡುವ ಪಕ್ಷಿಗಳಿವೆ, ನರ್ತಿಸುವ ಪಕ್ಷಿಗಳಿವೆ. ತನ್ನ ಸಂಗಾತಿಯನ್ನು ಒಲಿಸಿಕೊಳ್ಳಲು ಇನ್ನಿಲ್ಲದ ಪ್ರಯತ್ನ ಮಾಡುತ್ತವೆ. ಆದರೆ ಅನೇಕ ಸೋಮಾರಿ ಜನರಿಗೆ ಅವರ ಪೂರ್ವಜರ ಆಸ್ತಿ ನೋಡಿ ಮದುವೆಯಾಗಲು ಹೆಣ್ಣು ಕೊಡುವ ಮಂದಿ ಇರಬೇಕಾದರೆ, ಅಲ್ಲಿಯೂ ನಿರಾಯಾಸವಾಗಿ ಸಂಗಾತಿಯನ್ನು ಪಡೆಯುವ ಜಾಯಮಾನ ಹೊಂದಿರುತ್ತಾರೆ. ಎಷ್ಟೋ ಕುಟುಂಬಗಳಲ್ಲಿ ಜವಾಬ್ದಾರಿ ಇಲ್ಲದ, ಅಪ್ಪನ ಆಸ್ತಿಯನ್ನು ಕರಗಿಸಲು ಅವಿರತವಾಗಿ ಯತ್ನಿಸುವ, ಅನೇಕ ದುಶ್ಚಟಗಳ ದಾಸರಾಗಿರುವ ಅಯೋಗ್ಯ ಯುವಕರಿಗೆ ಜವಾಬ್ದಾರಿ ಬರುತ್ತದೆ ಎಂಬ ಕುರುಡು ನಂಬಿಕೆಯಿಂದ ಮದುವೆ ಮಾಡುತ್ತಾರೆ. ಬೀಗರಿಗೆ ಸುಳ್ಳು ಹೇಳಿ ತಮ್ಮ ಮನೆಗೆ ಸೊಸೆ ತಂದು ಸಂಭ್ರಮಿಸುತ್ತಾರೆ. ಆದರೆ ಎಷ್ಟೋ ಜನ ಅಮಾಯಕ ಹೆಣ್ಣು ಮಕ್ಕಳು ತಾವು ಮಾಡದ ತಪ್ಪಿಗೆ ನಿತ್ಯವೂ ಕಣ್ಣೀರಿನಲ್ಲಿ ಕೈತೊಳೆಯುತ್ತಿರುತ್ತಾರೆ. ಸೋಮಾರಿ ಗಂಡ ಕರುಣಿಸಿದ ಮಕ್ಕಳ ಭವಿಷ್ಯಕ್ಕಾಗಿ ತಮಗಿಷ್ಟವಿಲ್ಲದ ಬದುಕನ್ನು ಸವೆಸುತ್ತಿರುತ್ತಾರೆ.

ಕೆಲಸ ಚಿಕ್ಕದೇ ಇರಲಿ, ದೊಡ್ಡದೇ ಇರಲಿ ನಾನು ಸ್ವಾವಲಂಬಿಯಾಗಬೇಕು ಎಂಬ ಸಂಕಲ್ಪ ಯುವಕರಲ್ಲಿ ಮೂಡಬೇಕು. ಕೂತು ತಿನ್ನುವವನಿಗೆ ಕುಡಿಕೆ ಹೊನ್ನು ಸಾಲದು ಎಂಬುದನ್ನು ಅರಿಯಬೇಕು. 'ಕುಳಿತು ಕುಳಿತು ಸತ್ತವರುಂಟು, ದುಡಿದು ದುಡಿದು ಸತ್ತವರಿಲ್ಲ' ಎಂಬ ಸತ್ಯವನ್ನು ಅರಿಯಬೇಕು. ಅನೇಕ ವಿಶೇಷಚೇತನರ ಬದುಕನ್ನು ಕಂಡು ಅವರಿಂದ ಪ್ರೇರಣೆ ಪಡೆದು ಕ್ರಿಯಾಶೀಲ ಬದುಕನ್ನು ರೂಢಿಸಿಕೊಳ್ಳಬೇಕು. ನಿತ್ಯ ಬದುಕಿನಲ್ಲಿ ಅನೇಕ ಹೊಸ ಸಂಗತಿಗಳನ್ನು ಕಲಿಯುವ ಅವಕಾಶವಿರುತ್ತದೆ. ಅವುಗಳನ್ನು ಕುತೂಹಲಕ್ಕಾದರೂ ತಿಳಿಯುವ ಪ್ರಯತ್ನ ಮಾಡಬೇಕು. ದುಡ್ಡಿನಿಂದಲೇ ಎಲ್ಲವನ್ನು ಖರೀದಿಸಬಲ್ಲೆ ಎಂದು ತಪ್ಪಾಗಿ ಭಾವಿಸಬಾರದು. ದಿನವಿಡೀ ದುಡಿದು ರಾತ್ರಿ ಊಟ ಮಾಡಿದಾಗ ಈ ದಿನ ಸಾರ್ಥಕವಾಯಿತು ಎನಿಸಿದಾಗ ಬರುವ ನಿದ್ರೆಗೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಹಗಲಿನಲ್ಲಿಯೇ ತೂಕಡಿಸುವ ಸೋಮಾರಿಗೆ ರಾತ್ರಿ ಸುಖನಿದ್ರೆ ಬರಲು ಸಾಧ್ಯವೇ ಇಲ್ಲ. ಕಣ್ತುಂಬ ನಿದ್ರೆ ಮಾಡಲು ಪುಣ್ಯ ಮಾಡಿರಬೇಕು. ಆ ಪುಣ್ಯವು ಮಾಡುವ ಕೆಲಸದಿಂದ ಮಾತ್ರ ಲಭಿಸಲು ಸಾಧ್ಯ ಎಂಬುದನ್ನು ನಂಬಬೇಕು. ಏನಂತೀರಿ?

ದುಡಿಯುವ ಕೈಗಳಿಗೆ ಅವಕಾಶಗಳ ಕೊರತೆಯಿಲ್ಲ. ತಾನು ತಿನ್ನುವ ಅನ್ನ ಜೀರ್ಣವಾಗಲಿಕ್ಕಾದರೂ ಕೆಲಸ ಮಾಡುವುದು ಅನಿವಾರ್ಯ ಎಂದು ಭಾವಿಸಬೇಕು. ಆಸ್ತಿ, ಅಂತಸ್ತು ವೃದ್ಧಿಸಲು ಅಲ್ಲದಿದ್ದರೂ ಆರೋಗ್ಯವನ್ನು ವೃದ್ಧಿಸಿಕೊಳ್ಳುವುದಕ್ಕಾದರೂ ದುಡಿಯಬೇಕು. ಪ್ರೇರಣೆ ಪಡೆಯುವುದಾದರೆ ಶ್ರಮ ಜೀವಿಗಳಿಂದ ಪಡೆಯಬೇಕು. ಸೋಮಾರಿಗಳಿಂದ ಪ್ರೇರಣೆ ಪಡೆದರೆ ಬದುಕು ನಿರರ್ಥಕವಾಗುತ್ತದೆ. ಕೊನೆಗೆ ಒಂದು ದಿನ ಮಣ್ಣಾಗುವುದು ಇದ್ದೇ ಇದೆ. ಇರುವಷ್ಟು ದಿನ ಕೈಲಾದಷ್ಟು ಕಾಯಕ ಮಾಡಿ ಬದುಕನ್ನು ಪೂರ್ಣಗೊಳಿಸುವುದು ಒಳಿತು. ಏನಂತೀರಿ?

ಪದ ತಾಂಬೂಲ: ಸ್ವಾವಲಂಬಿಗೆ ಸ್ವಾಭಿಮಾನ ಹೆಚ್ಚು,
ಸೋಮಾರಿಗೆ ದುರಭಿಮಾನ ಹೆಚ್ಚು.

ಕುಕ್ಕರಹಳ್ಳಿ ಕೆರೆ ವಾಯುವಿಹಾರಿಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ ಮತಯಾಚನೆ





ಮೈಸೂರಿನ ಕುಕ್ಕರಹಳ್ಳಿ ಕೆರೆ ಬಳಿ ಭಾನುವಾರ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಮತ ಯಾಚನೆ ಮಾಡಿದರು. ಪ್ರಚಾರದ ವೇಳೆ ರಸ್ತೆಬದಿಯ ಫಾಸ್ಟ್‌ಫುಡ್‌ನಲ್ಲಿ ತಮ್ಮ ಬೆಂಬಲಿಗರು, ಕಾರ್ಯಕರ್ತರೊಂದಿಗೆ ಉಪಾಹಾರ ಸೇವಿಸುತ್ತಿರುವ ಎಂ.ಲಕ್ಷ್ಮಣರನ್ನು ಬಲಚಿತ್ರದಲ್ಲಿ ಕಾಣಬಹುದು.

ಮೈಸೂರು, ಏ.7(ಎಂಟಿವೈ)- ಮೈಸೂರು-ಕೊಡಗು ಲೋಕಸಭಾ ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸುವ ಮಹತ್ವಾಕಾಂಕ್ಷೆ ಹೊಂದಿದ್ದು, ಈ ಬಾರಿ ಬೆಂಬಲ ನೀಡಿ ಗೆಲ್ಲಿಸುವಂತೆ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಮನವಿ ಮಾಡಿದ್ದಾರೆ.

ಮೈಸೂರಿನ ಕುಕ್ಕರಹಳ್ಳಿ ಕೆರೆ ಬಳಿ ವಾಯುವಿಹಾರಿಗಳಲ್ಲಿ ಮತಯಾಚಿಸಿದ ಅವರು, ಮೈಸೂರಲ್ಲಿ ಕಳೆದ ಮೂರು ದಶಕಗಳಿಂದ ನಾಗರಿಕ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಹೋರಾಟ ಮಾಡಿ, ಮೈಸೂರಿನ ಜನರ ಹಿತ ಕಾಪಾಡುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ. ಮೈಸೂರು ಹೊರ ವಲಯದ ಚಾಮಲಾಪುರದಲ್ಲಿ ನಿರ್ಮಿಸಲು ಉದ್ದೇಶಿಸಿದ್ದ ಉಷ್ಣ ವಿದ್ಯುತ್ ಸ್ಥಾವರದಿಂದ ಮೈಸೂರು ನಗರ ಸೇರಿದಂತೆ ಜಿಲ್ಲೆಯ ಹಲವು ತಾಲೂಕುಗಳ ಮೇಲೆ ದುಷ್ಪರಿಣಾಮ ಉಂಟಾಗುತ್ತಿತ್ತು. ಸತತ ಹೋರಾಟದ ಫಲವಾಗಿ ಉಷ್ಣ ವಿದ್ಯುತ್ ಸ್ಥಾವರ ಸ್ಥಾಪನೆ ಕೈಬಿಡಲಾಗಿದೆ. ಜಿಲ್ಲೆಯ ಜನರ ಹಿತ ಕಾಯುವ ನಿಟ್ಟಿನಲ್ಲಿ ಹಲವು ಹೋರಾಟ ಮಾಡಿದ್ದೇನೆ. ಇದೀಗ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದೇನೆ. ಈ ಬಾರಿ ನನಗೆ ಇನ್ನಷ್ಟು ಸೇವೆ ಮಾಡಲು ಅವಕಾಶ ಮಾಡಿಕೊಡುವುದಕ್ಕಾಗಿ ಮತ ನೀಡುವಂತೆ ಮನವಿ ಮಾಡಿದರು.

ಬಳಿಕ ಕನಕಗಿರಿಯಲ್ಲಿ ನಡೆದ ಮತ ಯಾಚನೆ ವೇಳೆ ಮಾತನಾಡಿದ ಎಂ.ಲಕ್ಷ್ಮಣ, ಮೈಸೂರು-ಕೊಡಗು ಲೋಕಸಭಾ ಕ್ಷೇತ್ರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಗಂಭೀರವಾಗಿ ಪರಿಗಣಿಸಿದ್ದಾರೆ. ಈಗಾಗಲೇ ಈ ಹಿಂದೆ 5 ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಡವರ ಪರವಾದ ಹಲವು ಯೋಜನೆಗಳನ್ನು ಜಾರಿಗೊಳಿಸಿದರು. ಅನ್ನಭಾಗ್ಯ, ಕ್ಷೀರಭಾಗ್ಯ, ಶೂಭಾಗ್ಯ, ವಿದ್ಯಾಸಿರಿ, ಮನಸ್ವಿನಿ, ಇಂದಿರಾ ಕ್ಯಾಂಟೀನ್ ಸೇರಿದಂತೆ ಹಲವು ಜನಪ್ರಿಯ ಯೋಜನೆಗಳನ್ನು ಅನುಷ್ಠಾನಗೊಳಿಸಿದರು. ಅಲ್ಲದೆ, ಮೈಸೂರಲ್ಲಿ ಜಯದೇವ ಹೃದ್ರೋಗ ಆಸ್ಪತ್ರೆ, ಟ್ರಾಮಾ ಕೇರ್ ಸೆಂಟರ್, ಜಿಲ್ಲಾಸ್ಪತ್ರೆ ಸೇರಿದಂತೆ 5 ಹೊಸ ಆಸ್ಪತ್ರೆಗಳನ್ನು ನಿರ್ಮಿಸಿದರು. ಇದರಿಂದ ಮೈಸೂರು ಭಾಗದ ಜನರಿಗೆ ಉತ್ತಮ ಆರೋಗ್ಯ ಸೇವೆ ಒದಗಿಸಲು ಸಹಕಾರಿಯಾಗಿದೆ. ಅನೇಕ ವಿದ್ಯಾರ್ಥಿನಿಲಯ ಸ್ಥಾಪಿಸಿದ್ದಾರೆ. ಮಹಾರಾಣಿ ವಾಣಿಜ್ಯ ಕಾಲೇಜು ಸ್ಥಾಪಿಸಿದ್ದು, ಬಡ ಕುಟುಂಬದ ಹಾಗೂ ಗ್ರಾಮೀಣ ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಲು ನೆರವಾಗಿದ್ದಾರೆ ಎಂದು ತಿಳಿಸಿದರು.

ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಯುವ ನ್ಯಾಯ ಗ್ಯಾರಂಟಿಯಲ್ಲಿ ವಿದ್ಯಾವಂತ ನಿರುದ್ಯೋಗಿ ಯುವ ಜನರಿಗೆ ತಿಂಗಳಿಗೆ ಒಂದು ಲಕ್ಷ ರೂ. ಸಂಬಳದ ಉದ್ಯೋಗ ನೀಡಲಾಗುತ್ತದೆ. ಮಹಿಳಾ ನ್ಯಾಯ ಗ್ಯಾರಂಟಿಯಲ್ಲಿ ಕುಟುಂಬದ ಯಜಮಾನಿಗೆ ವರ್ಷಕ್ಕೆ 1 ಲಕ್ಷ ರೂ. ಆರ್ಥಿಕ ನೆರವು ನೀಡಲಾಗುತ್ತದೆ. ರೈತ ನ್ಯಾಯ ಗ್ಯಾರಂಟಿಯಲ್ಲಿ ರೈತರು ಮಾಡಿರುವ ಸಾಲ ಮನ್ನಾ ಮಾಡಲಾಗುತ್ತದೆ. ಶ್ರಮಿಕ ನ್ಯಾಯ ಗ್ಯಾರಂಟಿಯಲ್ಲಿ ನರೇಗಾ ಯೋಜನೆಯಡಿ ದಿನಕ್ಕೆ ಕೂಲಿ 400 ರೂ. ನೀಡಿ, ವರ್ಷಕ್ಕೆ 200 ದಿನ ಕೆಲಸ ನೀಡಲಾಗುತ್ತದೆ. ಜಾತಿಗಣತಿ ನಡೆಸಿ ಅದರ ಆಧಾರದ ಮೇರೆಗೆ ಸವಲತ್ತು ನೀಡಲು ಕಾಂಗ್ರೆಸ್ ಸಮ್ಮತಿಸಿದೆ ಎಂದು ಲಕ್ಷ್ಮಣ ತಿಳಿಸಿದರು.

> **ಕಾಂಗ್ರೆಸ್ ಪಕ್ಷ ಎಂದಿಗೂ ಬಡವರ ಪರ ಇರುವ ಪಕ್ಷ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಕೈ ಬಲಪಡಿಸಲು ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಬೆಂಬಲ ನೀಡಬೇಕು. ವರಿಷ್ಠರಾದ ಮಲ್ಲಿಕಾರ್ಜುನ ಖರ್ಗೆ, ರಾಹುಲ್‌ಗಾಂಧಿ ಅವರು ದೆಹಲಿಯಲ್ಲಿ ಗ್ಯಾರಂಟಿ ಕಾರ್ಡ್ ಬಿಡುಗಡೆ ಮಾಡಿದ್ದಾರೆ. ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ, ಕರ್ನಾಟಕ ಸರ್ಕಾರದಂತೆ ನುಡಿದಂತೆ ನಡೆದು, ನೀಡಿರುವ ಭರವಸೆಯನ್ನು ಈಡೇರಿಸಲು ಕಾಂಗ್ರೆಸ್ ಬದ್ಧವಾಗಿದೆ.** –ಎಂ.ಲಕ್ಷ್ಮಣ

ಈ ಸಂದರ್ಭದಲ್ಲಿ ಮಾಜಿ ಮೇಯರ್‌ಗಳಾದ ಪುರುಷೋತ್ತಮ್, ಬಿ.ಕೆ.ಪ್ರಕಾಶ್, ಟಿ.ಬಿ.ಚಿಕ್ಕಣ್ಣ, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಮಾಜಿ ಸದಸ್ಯ ಬೀರಿಹುಂಡಿ ಬಸವಣ್ಣ, ಮೈಸೂರು ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ. ಮಲ್ಲೇಶ್, ಭಾಸ್ಕರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

10 ವರ್ಷದಲ್ಲಿ ದೇಶವನ್ನು ಬಿಜೆಪಿ ಹಾಳು ಮಾಡಿದೆ

ಮಾಜಿ ಶಾಸಕ ಡಾ. ಯತೀಂದ್ರ ಆರೋಪ



ಮೈಸೂರು ತಾಲೂಕಿನ ಹೊಸಹುಂಡಿಯಲ್ಲಿ ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಪರ ಮತಯಾಚಿಸಿದರು.

ಮೈಸೂರು, ಏ.7(ಎಂಟಿವೈ)– ಸ್ವಾತಂತ್ರ್ಯಾನಂತರ ಕಾಂಗ್ರೆಸ್ ದೇಶದಲ್ಲಿ ಮಾಡಿದ ಅಭಿವೃದ್ಧಿ ಹಾಗೂ ನಿರ್ಮಿಸಿದ ಸಂಸ್ಥೆಗಳನ್ನು ಕೇವಲ 10 ವರ್ಷದಲ್ಲಿಯೇ ಬಿಜೆಪಿ ಸರ್ಕಾರ ಹಾಳು ಮಾಡಿ ದೇಶವನ್ನು ದಿವಾಳಿಯಾಗಿಸಿದೆ ಎಂದು ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಕಿಡಿಕಾರಿದ್ದಾರೆ.

ಮೈಸೂರು ತಾಲೂಕಿನ ಹೊಸಹುಂಡಿಯಲ್ಲಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಪರ ಮತಯಾಚಿಸಿ ಮಾತನಾಡಿದ ಅವರು, ಕೇಂದ್ರದ ಮೋದಿ ಸರ್ಕಾರವು ಸರ್ವಾಧಿಕಾರಿ ಧೋರಣೆ ಹೊಂದಿದೆ. ಕೇವಲ ಶ್ರೀಮಂತ ಹಿತ ಕಾಯುವುದಕ್ಕಷ್ಟೇ ಸೀಮಿತವಾಗಿರುವ ಬಿಜೆಪಿ ಸರ್ಕಾರದ ವಿರುದ್ಧ ದೇಶದ ಜನತೆ ಬೇಸತ್ತಿದ್ದಾರೆ. ಮೋದಿ ನೇತೃತ್ವದ ಕೇಂದ್ರ ಸರ್ಕಾರವನ್ನು ಕಿತ್ತೊಗೆಯಲು ಪಣ ತೊಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಏ.26ರಂದು ನಡೆಯಲಿರುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಅವರನ್ನು ಬೆಂಬಲಿಸುವ ಮೂಲಕ ಕೇಂದ್ರ ಸರ್ಕಾರದ ದುರಾಡಳಿತವನ್ನು ಧಿಕ್ಕರಿಸಬೇಕು ಎಂದು ಮನವಿ ಮಾಡಿದರು.

ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆದ ನಂತರ 70 ವರ್ಷ ದೇಶವನ್ನು ಆಳಿದ ಕಾಂಗ್ರೆಸ್ ಸರ್ಕಾರ ಬಡವರಿಗೆ ಎಲ್ಲಾ ಮೂಲಭೂತ ಸೌಲಭ್ಯವನ್ನು ನೀಡಿತ್ತು. ಬಡವರ ಪರವಾಗಿ ಕೆಲಸ ಮಾಡಿತ್ತು. ಆದರೆ 10 ವರ್ಷ ದೇಶವನ್ನು ಆಳಿದ ಬಿಜೆಪಿ ಸರ್ಕಾರ ಶ್ರೀಮಂತರ ಪರವಾಗಿ, ಅವರ ಉದ್ಧಾರಕ್ಕಾಗಿ ದೇಶದ ಎಲ್ಲಾ ಸಂಸ್ಥೆಗಳನ್ನು ಮಾರಾಟ ಮಾಡುತ್ತಿದೆ. ಶ್ರೀಮಂತರ ಸಾಲವನ್ನು ಮನ್ನಾ ಮಾಡುತ್ತಿದೆ. ಆದರೆ, ರೈತರ ಸಾಲವನ್ನು ಮನ್ನಾ ಮಾಡುತ್ತಿಲ್ಲ. ಮಾಧ್ಯಮಗಳೆಲ್ಲಾ ಶ್ರೀಮಂತರ ಕೈಯಲ್ಲಿವೆ. ಈ ಚುನಾವಣೆ ದೇಶದ ಭವಿಷ್ಯವನ್ನು ರೂಪಿಸುತ್ತದೆ. ನಿಮ್ಮ ಓಟು ದೇಶದ ದಿಕ್ಕನ್ನು ಬದಲಾಯಿಸುವ ಸಾಧನವಾಗಿದ್ದು, ಪ್ರತಿಯೊಬ್ಬರೂ ಜಾಗರೂಕತೆಯಿಂದ ಮತ ಚಲಾಯಿಸಿ, ಬಿಜೆಪಿ ಸರ್ಕಾರವನ್ನು ಮನೆಗೆ ಕಳುಹಿಸಬೇಕು. ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುವುದರೊಂದಿಗೆ ಎಂ.ಲಕ್ಷ್ಮಣ ಅವರನ್ನು ಗೆಲ್ಲಿಸಬೇಕು ಎಂದು ಕೋರಿದರು.

ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಮಾತನಾಡಿ, ಸಾಮಾನ್ಯ ಕಾರ್ಯಕರ್ತನಾಗಿದ್ದ ನನ್ನ ಹೋರಾಟವನ್ನು ಗುರುತಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ಆಯ್ಕೆ ಮಾಡಿದ್ದಾರೆ. ನನ್ನನ್ನು ಗೆಲ್ಲಿಸಿದರೆ ಕೇಂದ್ರದಿಂದ ಹೆಚ್ಚಿನ ಅನುದಾನವನ್ನು ತಂದು ಕೆಲಸ ಮಾಡುತ್ತೇನೆ. ನನಗೆ ಈ ಬಾರಿ ಆಶೀರ್ವಾದ ಮಾಡಿ, ನಿಮ್ಮ ಸೇವೆಗೆ ಸದಾ ಸಿದ್ಧವಾಗಿರುತ್ತೇನೆ. ಯಾವುದೇ ತಾರತಮ್ಯವಿಲ್ಲದೆ ಮೈಸೂರು–ಕೊಡಗು ಜಿಲ್ಲೆಗೆ ಆಗಬೇಕಾದ ಅಭಿವೃದ್ಧಿ ಕಾರ್ಯ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಸಭೆಯಲ್ಲಿ ವಿಧಾನಪರಿಷತ್ ಮಾಜಿ ಸದಸ್ಯ ಮರಿತಿಬ್ಬೇಗೌಡ, ಎಪಿಎಂಸಿ ಮಾಜಿ ಅಧ್ಯಕ್ಷ ರಘು, ಉದ್ಯಮಿ ಕೃಷ್ಣಕುಮಾರ್ ಸಾಗರ್, ಕೆಪಿಸಿಸಿ ಸದಸ್ಯ ನರಸೇಗೌಡ, ಜಿಪಂ ಮಾಜಿ ಸದಸ್ಯ ರಾಕೇಶ್ ಪಾಪಣ್ಣ, ಬೀರಿಹುಂಡಿ ಬಸವಣ್ಣ, ಮುಖಂಡರಾದ ಕೋಟೆಹುಂಡಿ ಮಹಾದೇವು, ಮಂಜುಳಾ ಮಂಜುನಾಥ್, ಅರುಣ್ ಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಗುರುಸ್ವಾಮಿ, ಹರೀಶ್ ಮೊಗಣ್ಣ, ರೇವಣ್ಣ, ಶಿವಣ್ಣ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಕೋಲಾರ ಎನ್‌ಡಿಎ ಅಭ್ಯರ್ಥಿ ಗೆಲುವಿಗೆ ಶಾಸಕ ಜಿ.ಟಿ.ದೇವೇಗೌಡ ರಣತಂತ್ರ

ಸ್ವಾಭಿಮಾನಿ ಜನತಾ ಪಕ್ಷದ ಮುಖಂಡರೊಂದಿಗೆ ಮಹತ್ವದ ಚರ್ಚೆ



ಕೋಲಾರ, ಏ.7– ಕೋಲಾರ ಲೋಕಸಭಾ ಕ್ಷೇತ್ರದಲ್ಲಿ ಜೆಡಿಎಸ್ ಚಿಹ್ನೆಯಡಿ ಸ್ಪರ್ಧಿಸಿರುವ ಎನ್‌ಡಿಎ ಅಭ್ಯರ್ಥಿ ಮಲ್ಲೇಶ್ ಬಾಬು ಗೆಲುವಿಗೆ ರಣತಂತ್ರ ರೂಪಿಸಲಾಗುತ್ತಿದೆ.

ಈ ನಿಟ್ಟಿನಲ್ಲಿ ಜೆಡಿಎಸ್ ರಾಜ್ಯಾಧ್ಯಕ್ಷರಾದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸೂಚನೆ ಮೇರೆಗೆ ರಾಜ್ಯ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರೂ ಆದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು, ಸ್ವಾಭಿಮಾನಿ ಜನತಾ ಪಕ್ಷದ ಮುಖಂಡರನ್ನು ಭೇಟಿ ಮಾಡಿ, ಚುನಾವಣೆಗೆ ಸಹಕಾರ ಕೋರಿದರು.

ಜಿಲ್ಲೆಯ ಮಾಲೂರು ವಿಧಾನಸಭಾ ಕ್ಷೇತ್ರದಿಂದ ಕಳೆದ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಕಡಿಮೆ ಅಂತರದಲ್ಲಿ ಪರಾಭವಗೊಂಡ ಸ್ವಾಭಿಮಾನಿ ಜನತಾ ಪಕ್ಷದ ಹೂಡಿ ವಿಜಯ್‌ಕುಮಾರ್ ಹಾಗೂ ಅವರ ಸ್ನೇಹಿತರನ್ನು ಮಾಲೂರಿನಲ್ಲಿ ಭೇಟಿ ಮಾಡಿದ ಜಿಟಿಡಿ, ಕೋಲಾರದಲ್ಲಿ ಎನ್‌ಡಿಎ ಅಭ್ಯರ್ಥಿ ಮಲ್ಲೇಶ್ ಬಾಬು ಗೆಲುವು ಸಾಧಿಸಬೇಕು. ಇದಕ್ಕೆ ನೀವು ಒಮ್ಮತದಿಂದ ಸಹಕಾರ ನೀಡಬೇಕೆಂದು ಮನವಿ ಮಾಡಿದರು.

ಚರ್ಚೆ ಬಳಿಕ ಸಭೆಯಲ್ಲಿ ಮಾತನಾಡಿದ ಜಿ.ಟಿ.ದೇವೇಗೌಡರು, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಅಲ್ಪ ಮತಗಳ ಅಂತರದಿಂದ ಪರಾಭವಗೊಂಡ ಹೂಡಿ ವಿಜಯ್ ಕುಮಾರ್ ಅವರು, ಶಾಸಕರಂತೆಯೇ ಕ್ಷೇತ್ರದ ಜನರ ಸೇವೆ ಮಾಡುತ್ತಿದ್ದಾರೆ. ದೇಶದ ಅಭಿವೃದ್ಧಿ ಹಾಗೂ ಎಲ್ಲಾ ವರ್ಗದ ಜನರ ಹಿತ ದೃಷ್ಟಿಯಿಂದ ಜೆಡಿಎಸ್, ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡಿದೆ. ಮೋದಿ ಅವರು ಮತ್ತೆ ಪ್ರಧಾನಿಯಾಗಬೇಕು. ಇದಕ್ಕಾಗಿ ಕೋಲಾರದಿಂದ ಎನ್‌ಡಿಎ ಅಭ್ಯರ್ಥಿಯನ್ನು ಆಯ್ಕೆ ಮಾಡಿ ಕಳುಹಿಸಬೇಕು. ಸ್ವಾಭಿಮಾನಿ ಜನತಾ ಪಕ್ಷದ ಎಲ್ಲಾ ಸದಸ್ಯರೂ ನಮ್ಮ ಅಭ್ಯರ್ಥಿ ಮಲ್ಲೇಶ್ ಬಾಬು ಅವರ ಗೆಲುವಿಗೆ ಸಹಕಾರ ನೀಡಬೇಕು ಎಂದರು.

ಜಿಟಿಡಿ ಮನವಿಗೆ ಸ್ಪಂದಿಸಿದ ಹೂಡಿ ವಿಜಯ್ ಕುಮಾರ್ ಮಾತನಾಡಿ, ಮಾಜಿ ಸಿಎಂ ಕುಮಾರಸ್ವಾಮಿ ಅವರ ಸೂಚನೆಯಂತೆ ಶಾಸಕರಾದ ಜಿ.ಟಿ.ದೇವೇಗೌಡರು ನಮ್ಮನ್ನು ಭೇಟಿ ಮಾಡಿ, ಸಹಕಾರ ಕೋರಿದ್ದಾರೆ. ಕೋಲಾರ ಕ್ಷೇತ್ರ ಹಾಗೂ ದೇಶದ ಹಿತದೃಷ್ಟಿಯಿಂದ ಎನ್‌ಡಿಎ ಅಭ್ಯರ್ಥಿ ಮಲ್ಲೇಶ್ ಬಾಬು ಅವರನ್ನು ಬೆಂಬಲಿಸೋಣ ಎಂದು ಸ್ವಾಭಿಮಾನಿ ಜನತಾ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರಿಗೆ ಕರೆ ನೀಡಿದರು.

ಈ ಸಂದರ್ಭದಲ್ಲಿ ಕೋಲಾರ ಲೋಕಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಮಲ್ಲೇಶ್ ಬಾಬು, ಮುಖಂಡರಾದ ರಾಮೇಗೌಡರು, ಸಿಎಂಆರ್ ಶ್ರೀನಾಥ್, ಸ್ವಾಭಿಮಾನಿ ಜನತಾ ಪಕ್ಷದ ಪ್ರಭಾಕರ್ ಸೇರಿದಂತೆ ಜೆಡಿಎಸ್ ಹಾಗೂ ಸ್ವಾಭಿಮಾನಿ ಜನತಾ ಪಕ್ಷದ ಮುಖಂಡರು, ಕಾರ್ಯಕರ್ತರು ಇನ್ನಿತರರು ಉಪಸ್ಥಿತರಿದ್ದರು.

ಅನುವಾದಕ ಡಾ.ಸಿ.ರವೀಂದ್ರನಾಥರ 'ಬಾಶೋ ಹಾಯ್ಕು' ಪುಸ್ತಕ ಬಿಡುಗಡೆ



ಅನುವಾದಕ ಡಾ.ಸಿ.ರವೀಂದ್ರನಾಥ್ ಕನ್ನಡಕ್ಕೆ ಅನುವಾದಿಸಿರುವ 'ಬಾಶೋ ಹಾಯ್ಕು' ಪುಸ್ತಕವನ್ನು ಹಿರಿಯ ವಿಮರ್ಶಕ ಓ.ಎಲ್.ನಾಗಭೂಷಣ ಸ್ವಾಮಿ ಭಾನುವಾರ ಬಿಡುಗಡೆಗೊಳಿಸಿದರು.

ಮೈಸೂರು, ಏ.7(ಎಸ್‌ಪಿಎನ್)– ಮೈಸೂರು ಜೆಎಲ್‌ಬಿ ರಸ್ತೆಯಲ್ಲಿರುವ ಐಡಿಯಲ್ ಜಾವಾ ರೋಟರಿ ಭವನದಲ್ಲಿ ಆಕೃತಿ ಪುಸ್ತಕ ಪ್ರಕಾಶನದಿಂದ ಹೊರತಂದಿರುವ ಅನುವಾದಕ ಡಾ.ಸಿ.ರವೀಂದ್ರನಾಥ್ ಕನ್ನಡಕ್ಕೆ ಅನುವಾದಿಸಿರುವ 'ಬಾಶೋ ಹಾಯ್ಕು' ಪುಸ್ತಕವನ್ನು ಹಿರಿಯ ವಿಮರ್ಶಕ ಓ.ಎಲ್.ನಾಗಭೂಷಣ ಸ್ವಾಮಿ ಭಾನುವಾರ ಬಿಡುಗಡೆಗೊಳಿಸಿದರು.

ನಂತರ ಮಾತನಾಡಿದ ಅವರು, ಭಾರತದಲ್ಲಿ ಬ್ರಿಟಿಷರು ಎಜ್ಯುಕೇಷನ್ ಪಾಲಿಸಿಯಲ್ಲಿ ಜಾತ್ಯಾತೀತ ನಿಲುವಿನೊಂದಿಗೆ ಶಿಕ್ಷಣ ನೀತಿಯನ್ನು ಜಾರಿಗೆ ತಂದ ಪರಿಣಾಮ ನಮ್ಮ ಯುವಕರಲ್ಲಿ ಶಿಕ್ಷಣದ ಮೂಲಕ ಬದಲಾವಣೆ ನೋಡಲು ಸಾಧ್ಯವಾಯಿತು. ಅಲ್ಲದೆ, ಇರುವುದನ್ನು ಇರುವ ಹಾಗೆಯೇ ನೋಡಿದಾಗ ಮನದಲ್ಲಿ ಹೊಳೆಯಬಹುದಾದ ಹಲವು ಭಾವನೆಗಳ ಸಾರವೇ 'ಬಾಶೋ ಹಾಯ್ಕು' ಪುಸ್ತಕ ಎಂದು ಅಭಿಪ್ರಾಯಪಟ್ಟರು.

ಇತ್ತೀಚಿನ ದಿನಗಳಲ್ಲಿ ಓದುಗರಲ್ಲಿ ವಿಭಿನ್ನ ಸಂಸ್ಕೃತಿಯನ್ನು ಕಾಣುತ್ತಿದ್ದೇವೆ. ಕುಮಾರವ್ಯಾಸನ ಮಹಾಭಾರತ ಕಥೆಗಳಿಗೆ ಬ್ರಾಹ್ಮಣರು ಮತ್ತು ವಚನ ಸಾಹಿತ್ಯ, ಸರ್ವಜ್ಞನ ತ್ರಿಪದಿಗಳಿಗೆ ಲಿಂಗಾಯತ ಓದುಗರಿದ್ದಾರೆ. ಇದೇ ರೀತಿ ಜಾತಿಗೊಂದು ಲೇಖಕರನ್ನು ಇಷ್ಟಪಡುವ, ಓದುವ ಸ್ಥಿತಿ ಭಾರತದಲ್ಲಿ ಸೃಷ್ಟಿಯಾಗಿದೆ. ಇದರಿಂದ ಒಂದೊಂದು ಜಾತಿಯ ಸಂಸ್ಕೃತಿಯನ್ನು ಮತ್ತೊಂದು ವರ್ಗದ ಓದುಗರು ತಿಳಿದುಕೊಳ್ಳುವ ಗೋಜಿಗೆ ಹೋಗುವುದಿಲ್ಲ. ಹಾಗಾಗಿ ಭಾರತದಲ್ಲಿ ಒಂದೊಂದು ವರ್ಗವೂ ಒಂದೊಂದು ಲೋಕವಾಗಿವೆ. ಇಂತಹ ಅಸಹಿಷ್ಣು ಕಾಲಘಟ್ಟದಲ್ಲಿ ಇಂತಹ ಅನುವಾದ ಸಾಹಿತ್ಯ ಅಗತ್ಯ ಎಂದು ಅಭಿಪ್ರಾಯಪಟ್ಟರು.

ಜಪಾನ್‌ನ ಕವಿ ಬಾಶೋ ತನ್ನ ಹಾಯ್ಕುಗಳಲ್ಲಿ ಹಲವು ಸತ್ಯಾಂಶಗಳನ್ನು ಸಂಕ್ಷಿಪ್ತವಾಗಿ ಮಂಡಿಸುತ್ತಾನೆ. ಓದುಗ ಅದನ್ನು ತನ್ನ ಮನದಲ್ಲಿರಿಸಿ, ತನ್ನ ಮನದ ಕಲ್ಪನೆಗಳನ್ನು ಮಿಶ್ರಣಗೊಳಿಸಿ ಅರ್ಥೈಸಿಕೊಳ್ಳಬಹುದು. ಈ ಅಂಶ ವಿವಿಧ ಅನುಭವಗಳು ಓದುಗನಲ್ಲಿ ಮೂಡಬಹುದು. ಈ ರೀತಿಯ ಸಾಹಿತ್ಯ ವಿಧಾನಕ್ಕೆ ಜೆನ್ ಕಾರಣವೋ, ಬುದ್ಧನ ಪ್ರಭಾವವೋ ಇರಬಹುದು. ಹಾಯ್ಕು, ವಚನ, ಜೆನ್ ಕೋನ್‌ಗಳು ನಮ್ಮನ್ನು ಸರಿಯಾದ ಲೋಕಾನುಭವಕ್ಕೆ ಸಿದ್ಧಗೊಳಿಸುವ ಅಭಿವ್ಯಕ್ತಿ ಪ್ರಕಾರಗಳು ಎಂದರು.

ಡಾ.ಸಿ.ರವೀಂದ್ರನಾಥ್ ರಚನೆಯ 'ಬಾಶೋ ಹಾಯ್ಕು'ಗಳನ್ನು ಕನ್ನಡಕ್ಕೆ ದಾಟಿಸುವ ಅನುವಾದವೂ ಉತ್ತಮವಾಗಿದೆ. ನನ್ನದೇ ಭಾಷೆಯಲ್ಲಿ ನನ್ನದಲ್ಲದ ಸಂಸ್ಕೃತಿಯನ್ನು ಅರ್ಥ ಮಾಡಿಸುವ ಪ್ರಯತ್ನವೇ ಅನುವಾದ. ಹಾಯ್ಕುವಿನ ಅನುವಾದವೂ ಒಂದು ಸಾಂಸ್ಕೃತಿಕ ವಿದ್ಯಮಾನ ಎಂದು ಮನವರಿಕೆ ಮಾಡಿಕೊಟ್ಟರು. ಕವಯತ್ರಿ ಆರ್.ಪವಿತ್ರಾ ಪ್ರಿಯಭಾಷಿಣಿ ಕೃತಿ ಕುರಿತು ಮಾತನಾಡಿದರು. ಈ ವೇಳೆ ಅನುವಾದಕ ಡಾ.ಸಿ.ರವೀಂದ್ರನಾಥ್, ಪ್ರಕಾಶಕ ಡಿ.ಎನ್.ಗುರುಪ್ರಸಾದ್ ಇದ್ದರು.



ಸಿದ್ದರಾಮಯ್ಯ ಗ್ಯಾರಂಟಿ ಮುಂದೆ ಮೋದಿ, ಷಾ ತಂತ್ರ ನಡೆಯದು

ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಪರ ಮತಯಾಚಿಸಿ ಎಂ.ಕೆ.ಸೋಮಶೇಖರ್ ಹೇಳಿಕೆ

ಮೈಸೂರು,ಏ.7(ಎಂಟಿವೈ)– ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಜಾರಿಗೊಳಿಸಿರುವ ಐದು ಗ್ಯಾರಂಟಿ ಯೋಜನೆಗಳು ಎಲ್ಲಾ ವರ್ಗದ ಜನರಿಗೂ ನೆರವಾಗಿದ್ದು, ಲೋಕಸಭಾ ಚುನಾವಣೆಯಲ್ಲಿ ಈ ಬಾರಿ ಜನ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಅವರನ್ನು ಬೆಂಬಲಿಸಬೇಕು ಎಂದು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮನವಿ ಮಾಡಿದ್ದಾರೆ.

ಮೈಸೂರಿನ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಪಾಲಿಕೆಯ 54ನೇ ವಾರ್ಡ್‌ನ ಕನಕಗಿರಿ ಸೇರಿದಂತೆ ವಿವಿಧೆಡೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಪರ ಮತಯಾಚನೆ ನಡೆಸಿದ ಬಳಿಕ ವಿದ್ಯಾರಣ್ಯಪುರಂನಲ್ಲಿರುವ ಸೀವೆಜ್ ಫಾರಂ ವೃತ್ತದಲ್ಲಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಅವರು, ರಾಜ್ಯ ಸರ್ಕಾರದ ಗ್ಯಾರಂಟಿಗಳ ಮುಂದೆ ಪ್ರಧಾನಿ ನರೇಂದ್ರಮೋದಿ, ಅಮಿತ್ ಷಾ ತಂತ್ರಗಾರಿಕೆ ನಡೆಯುವುದಿಲ್ಲ. ಈ ಬಾರಿ ದೇಶದಲ್ಲಿ ಬಿಜೆಪಿ 200 ಸ್ಥಾನ ಗೆಲ್ಲುವುದು ಕಷ್ಟವಾಗಿದೆ. ದೇಶದಾದ್ಯಂತ ಬಿಜೆಪಿ ಸರ್ಕಾರದ ವಿರುದ್ಧ ವ್ಯಾಪಕ ಆಡಳಿತ ವಿರೋಧಿ ಅಲೆ ಎದ್ದಿದೆ ಆ ಕಾರಣದಿಂದ ಹೇಗಾದರೂ ಮಾಡಿ ಮತ್ತೆ ಅಧಿಕಾರ ಹಿಡಿಯಬೇಕೆಂದು ಕಸರತ್ತು ಮಾಡುತ್ತಿದ್ದಾರೆ. ಅದರಲ್ಲೂ ದಕ್ಷಿಣ ಭಾರತದಲ್ಲಿ ಬಿಜೆಪಿಗೆ ಹೆಚ್ಚು ಸ್ಥಾನ ಗಳಿಸಲು ಸುಳ್ಳು ಹೇಳಿ ಜನರನ್ನು ದಾರಿ ತಪ್ಪಿಸುವ ತಂತ್ರಗಾರಿಕೆ ನಡೆಸುತ್ತಿದ್ದಾರೆ ಎಂದು ಆರೋಪಿಸಿದರು.


ಮೈಸೂರಿನ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಕನಕಗಿರಿಯಲ್ಲಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಪರ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಸೇರಿದಂತೆ ಇನ್ನಿತರರು ಮತಯಾಚಿಸಿದರು.

ದಕ್ಷಿಣ ಭಾರತದ ಜನ ಪ್ರಬುದ್ಧರಾಗಿದ್ದು, ಬಿಜೆಪಿ ಮಾಡುವ ಮೋಡಿಗೆ ಒಳಗಾಗುವುದಿಲ್ಲ. ಭ್ರಮೆ ಭರವಸೆಗಳಿಗೆ ಮಾರು ಹೋಗುವುದಿಲ್ಲ. ಬದಲಾಗಿ ಅಭಿವೃದ್ಧಿ ಮತ್ತು ಸತ್ಯಕ್ಕೆ ಮಾನ್ಯತೆ ಕೊಡುತ್ತಾರೆ. ಬಿಜೆಪಿಯವರು ಜನರ ಮೇಲೆ ಸುಳ್ಳಿನ ಸವಾರಿ ಮಾಡಲು ಹೊರಟಿದ್ದಾರೆ. ಅದು ಅವರಿಗೆ ಫಲಪ್ರದ ಕೊಡುವುದಿಲ್ಲ. ನರೇಂದ್ರ ಮೋದಿಯವರ ಸರ್ವಾಧಿಕಾರಿ ಧೋರಣೆಯನ್ನು ಈ ಬಾರಿ ಕೊನೆಗಾಣಿಸದೆ ಹೋದರೆ ದೇಶದಲ್ಲಿ ಅಭಿವೃದ್ಧಿ ಮರೀಚಿಕೆಯಾಗಿ ಹೋಗಲಿದೆ. ಸಿದ್ದರಾಮಯ್ಯನವರ ಸುಭದ್ರ ಆಡಳಿತ, ಮಹತ್ವದ ಗ್ಯಾರಂಟಿ ಯೋಜನೆಗಳು ರಾಜ್ಯದ ಜನರಲ್ಲಿ ಭರವಸೆ ಮೂಡಿಸಿದೆ. ಹಾಗಾಗೀ, ರಾಜ್ಯದಲ್ಲಿ ಕಾಂಗ್ರೆಸ್ ಕನಿಷ್ಠ 20 ಸ್ಥಾನ ಗೆದ್ದೇ ಗೆಲ್ಲುತ್ತದೆ ಎಂದರು.

ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಸಾಮಾನ್ಯ ಕಾರ್ಯಕರ್ತರಾಗಿದ್ದು, ಮೈಸೂರು–ಕೊಡಗು ಕ್ಷೇತ್ರದಲ್ಲಿರುವ ಸಮಸ್ಯೆಗಳನ್ನು ಸಮರ್ಥವಾಗಿ ಅರ್ಥೈಸಿಕೊಂಡಿದ್ದಾರೆ. ಕ್ಷೇತ್ರದ ಸಮಗ್ರ ಅಭಿವೃದ್ಧಿಯ ಕನಸು ಹೊತ್ತಿರುವ ಉತ್ತಮ ಹೋರಾಟಗಾರರು. ಅಂತಹವರನ್ನು ಸಂಸತ್ತಿಗೆ ಕಳುಹಿಸಿದರೆ ಮತದಾರರ ಗೌರವಕ್ಕೆ ಕಿರೀಟಪ್ರಾಯರಾಗುವುದರಲ್ಲಿ ಸಂಶಯವಿಲ್ಲ. ಹೆಚ್ಚಿನ ಬೆಂಬಲ ನೀಡಿ ಅವರನ್ನು ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಜಾರಿಗೊಳಿಸಿರುವ 5 ಗ್ಯಾರಂಟಿಗಳು ರಾಜ್ಯದ ಜನರ ಆರ್ಥಿಕ ಬದುಕನ್ನು ಹಸನುಗೊಳಿಸಿದೆ. ಲಕ್ಷ್ಮಣರವರ ಗೆಲುವು ಸಿದ್ದರಾಮಯ್ಯನವರ ಗೆಲುವಾಗುತ್ತದೆ. ಜನಪರ ಯೋಜನೆಗಳನ್ನು ಅನುಷ್ಠಾನ ಮಾಡಲು ಮುಖ್ಯಮಂತ್ರಿಗಳಿಗೆ ಉತ್ಸಾಹ ಮತ್ತಷ್ಟು ಶಕ್ತಿ ಬಂದಂತಾಗುತ್ತದೆ. ಪ್ರತಿಯೊಬ್ಬ ಕಾರ್ಯಕರ್ತರು ತಾವೇ ಲಕ್ಷ್ಮಣ ಎಂಬ ಭಾವನೆ ಇಟ್ಟು ಕೆಲಸ ಮಾಡಿದರೆ ನಾವು ಗೆಲ್ಲುತ್ತೇವೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಅಭ್ಯರ್ಥಿ ಎಂ.ಲಕ್ಷ್ಮಣ್, ಜಿ.ಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ವಾರ್ಡ್ ಅಧ್ಯಕ್ಷ ಕೇಬಲ್ ಮಹಾದೇವು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷೆ ಭವ್ಯ, ಪಾಲಿಕೆ ಮಾಜಿ ಸದಸ್ಯರಾದ ಪಲ್ಲವಿ ಬೇಗಂ, ಶೋಭಾ ಮೋಹನ್, ಮುಖಂಡರುಗಳಾದ ವಿಜಯ್‌ಕುಮಾರ್, ಕೇಬಲ್ ಶೇಖರ್, ಡಿಸಿಸಿ ಪ್ರಧಾನ ಕಾರ್ಯದರ್ಶಿ ವಿದ್ಯಾ, ಅಸಂಘಟಿತ ಕಾರ್ಮಿಕರ ಘಟಕದ ಅಧ್ಯಕ್ಷ ವಿನಯ್ ಕುಮಾರ್.ಜೆ, ಓಬಿಸಿ ಘಟಕದ ಅಧ್ಯಕ್ಷ ಕುಮಾರ್ ಕುಮ್ಮಿ ಯುವ ಮುಖಂಡ ಸಿದ್ದು, ಕಾರ್ಯದರ್ಶಿ ಡೈರಿ ವೆಂಕಟೇಶ್, ಕಂಸಾಳೆ ರವಿ, ಶಿವಕುಮಾರ್, ರಾಜು, ರೈಸ್ ಕುಮಾರ್, ನಾಗ, ಸದಾನಂದ, ಯುವ ಕಾಂಗ್ರೆಸ್ ಅಧ್ಯಕ್ಷರಾದ ರಾಕೇಶ್, ಚಂದು, ಶಾಂತು, ತರಕಾರಿ ಕುಮಾರ್, ಗೌಡ್ಮ ಜಾನಿ ಮತ್ತಿತರು ಉಪಸ್ಥಿತರಿದ್ದರು.

ಮೈಸೂರಲ್ಲಿ ಮತದಾನ ಜಾಗೃತಿ ಜಾಥಾ



ಮೈಸೂರಿನ ಟಿ.ಕೆ.ಲೇಔಟ್, ಜನತಾನಗರ ಹಾಗೂ ಶಾರದಾದೇವಿನಗರದಲ್ಲಿ ಭಾನುವಾರ ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಕಡ್ಡಾಯ ಮತದಾನದ ಜಾಗೃತಿ ಜಾಥಾ ನಡೆಸಲಾಯಿತು.

ಮೈಸೂರು, ಏ.7(ಎಂಟಿವೈ)–ಲೋಕಸಭಾ ಚುನಾವಣೆಯಲ್ಲಿ ಕಡ್ಡಾಯವಾಗಿ ಮತದಾನ ಮಾಡುವಂತೆ ಜನರಲ್ಲಿ ಜಾಗೃತಿ ಮೂಡಿಸಲು ಜಿಲ್ಲಾ ಸ್ವೀಪ್ ಸಮಿತಿಯಿಂದ ಜಾಗೃತಿ ಜಾಥಾ ನಡೆಸಲಾಯಿತು.

ಜಿಲ್ಲಾಡಳಿತ, ಜಿಲ್ಲಾ ಸ್ವೀಪ್ ಸಮಿತಿ, ಮೈಸೂರು ಮಹಾನಗರ ಪಾಲಿಕೆ ಹಾಗೂ ವಿವಿಧ ಸಂಘ–ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಭಾನುವಾರ ಟಿ.ಕೆ.ಬಡಾವಣೆ, ಜನತಾನಗರ, ಶಾರದಾದೇವಿನಗರದ ವಿವಿಧೆಡೆ ವಿವಿಧ ಜಾನಪದ ಕಲಾತಂಡಗಳೊಂದಿಗೆ ಕಡ್ಡಾಯ ಮತದಾನದ ಜಾಗೃತಿ ಜಾಥಾ ನಡೆಸಿ, ಏಪ್ರಿಲ್ 26ರಂದು ನಡೆಯುವ ಲೋಕಸಭಾ ಚುನಾವಣೆಯಲ್ಲಿ ಕಡ್ಡಾಯವಾಗಿ ಮತದಾನ ಮಾಡುವ ಮೂಲಕ ಪ್ರಜಾಪ್ರಭುತ್ವದ ಹಬ್ಬದಲ್ಲಿ ಪಾಲ್ಗೊಳ್ಳುವಂತೆ ಮತದಾರರಿಗೆ ಮನವರಿಕೆ ಮಾಡಿಕೊಡಲಾಯಿತು.

ಯಾವೊಬ್ಬ ಮತದಾರರು, ತಮ್ಮ ಮತ ಚಲಾಯಿಸುವ ಹಕ್ಕಿನಿಂದ ವಂಚಿತರಾಗಬಾರದು. ಪ್ರತಿಯೊಂದು ಮತವೂ ಅಮೂಲ್ಯವಾದುದು. ಸುರಕ್ಷಿತ ಮತ್ತು ಪಾರದರ್ಶಕ ಮತದಾನಕ್ಕೆ ಮತದಾರರು ಮತಗಟ್ಟೆಗೆ ಬಂದು ಮತ ಚಲಾಯಿಸಬೇಕು. ಸುಭದ್ರ ಭಾರತ ನಿರ್ಮಾಣಕ್ಕೆ ಪ್ರತಿಯೊಬ್ಬರೂ ಮತದಾನದ ಹಬ್ಬದಲ್ಲಿ ಪಾಲ್ಗೊಳ್ಳಬೇಕು ಎಂಬ ಸಂದೇಶವುಳ್ಳ ಭಿತ್ತಿಪತ್ರವನ್ನು ಪ್ರದರ್ಶಿಸುವ ಮೂಲಕ ಜಾಗೃತಿ ಮೂಡಿಸಲಾಯಿತು.

ಪಾಲಿಕೆಯ ವಲಯ ಕಚೇರಿ–3ರ ಸಹಾಯಕ ಆಯುಕ್ತ ಟಿ.ಎಸ್. ಸತ್ಯಮೂರ್ತಿ, ನೋಡಲ್ ಅಧಿಕಾರಿ ರೇಖಾ ಜೆ.ಶೆಟ್ಟಿ, ಕಂದಾಯಾಧಿಕಾರಿ ಇಸ್ಮಾಯಿಲ್, ಪರಿಸರ ಅಭಿಯಂತರರು, ವಲಯ ಕಚೇರಿ–3ರ ಸಿಬ್ಬಂದಿಗಳು, ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು, ಪೌರಕಾರ್ಮಿಕರು ಸೇರಿದಂತೆ ಜಾಗೃತಿ ಜಾಥಾದಲ್ಲಿ 400ಕ್ಕೂ ಹೆಚ್ಚು ಮಂದಿ ಪಾಲ್ಗೊಂಡು ಮಾನವ ಸರಪಳಿ ರಚಿಸಿ ಮತದಾನದ ಮಹತ್ವ ಸಾರಿದರು.


ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಪರವಾಗಿ ಶಾಸಕ ಟಿ.ಎಸ್. ಶ್ರೀವತ್ಸ ಅವರು ವಾರ್ಡ್ ನಂ.61ರ ವಿದ್ಯಾರಣ್ಯಪುರಂ ಭಾಗದಲ್ಲಿ ಮತಯಾಚಿಸಿದರು. ಈ ವೇಳೆ ಕೃಷ್ಣರಾಜ ಕ್ಷೇತ್ರದ ಅಧ್ಯಕ್ಷ ಗೋಪಾಲ್ ರಾಜೇ ಅರಸ್, ಪ್ರಧಾನ ಕಾರ್ಯದರ್ಶಿ ಜಯರಾಮ್, ಮುಖಂಡರಾದ ಜಗದೀಶ್, ಶ್ರೀನಿವಾಸ್, ಮುರಳೀಧರ್, ಶೈಲೇಂದ್ರ, ಪಾರ್ಥಸಾರಥಿ, ರವಿ, ಶಿವಪ್ರಸಾದ್, ಚಂದ್ರಶೇಖರ್, ಸಂದೀಪ್, ಕಿಟ್ಟಿ, ಧರ್ಮೇಂದ್ರ ಮಹದೇವ್, ಮೋಹನ್, ರಾಜಣ್ಣ, ನರೇಂದ್ರ ರಾವ್ ಶಿಂಧೆ, ನಂದೀಶ್, ಕಿಶೋರ್, ವೀಣಾ, ಸೋಮು, ಶಿವಲಿಂಗಸ್ವಾಮಿ ಮುಂತಾದವರಿದ್ದರು.

ಹಾಸನದಲ್ಲಿ ಬಿಜೆಪಿ, ಜೆಡಿಎಸ್ ನಡುವೆ ಯಾವುದೇ ಸಮಸ್ಯೆ ಇಲ್ಲ

• ಕರ್ನಾಟಕ ಬಿಜೆಪಿ ಚುನಾವಣಾ ಉಸ್ತುವಾರಿ ರಾಧಾ ಮೋಹನ್‌ದಾಸ್ ಅಗರ್‌ವಾಲ್ • ಪ್ರೀತಂ ಗೌಡಗೆ ಮೈಸೂರು, ಚಾಮರಾಜನಗರ ಉಸ್ತುವಾರಿ

ಮೈಸೂರು, ಏ.7(ಎಸ್‌ಬಿಡಿ)– ಹಾಸನ ಲೋಕಸಭಾ ಕ್ಷೇತ್ರದಲ್ಲಿ ಜೆಡಿಎಸ್‌ನವರಿಗಿಂತ ಬಿಜೆಪಿ ಕಾರ್ಯಕರ್ತರು ಉತ್ತಮವಾಗಿ ಕೆಲಸ ಮಾಡುತ್ತಿದ್ದು, ಮೈತ್ರಿಯಲ್ಲಿ ಯಾವುದೇ ಸಮಸ್ಯೆಯಿಲ್ಲ ಎಂದು ಬಿಜೆಪಿಯ ರಾಜ್ಯ ಚುನಾವಣಾ ಉಸ್ತುವಾರಿ ರಾಧಾ ಮೋಹನ್‌ದಾಸ್ ಅಗರ್‌ವಾಲ್ ತಿಳಿಸಿದ್ದಾರೆ.

ಮೈಸೂರಿನಲ್ಲಿ ಭಾನುವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಹಾಸನ ಕ್ಷೇತ್ರದ ಮೈತ್ರಿ ಅಭ್ಯರ್ಥಿ ಪ್ರಜ್ವಲ್ ರೇವಣ್ಣ ಹಾಗೂ ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪ್ರೀತಂ ಗೌಡ ಮಧ್ಯೆ ಉತ್ತಮ ಸಂಬಂಧವಿರುವಾಗ ಅವರಿಬ್ಬರ ಭೇಟಿಗೆ ನನ್ನ ಮಧ್ಯಸ್ಥಿಕೆಯ ಅವಶ್ಯಕತೆ ಏನಿದೆ? ಎಂದು ಪ್ರಶ್ನಿಸಿದರು. ಹಾಸನದಲ್ಲಿ ಮೈತ್ರಿಯಲ್ಲಿ ಯಾವುದೇ ಸಮಸ್ಯೆ ಇಲ್ಲ. ನಿನ್ನೆಯೂ ಹಾಸನಕ್ಕೆ ಹೋಗಿದ್ದೆ ಅಲ್ಲಿ ಯಾವುದೇ ಸಮಸ್ಯೆ ಕಾಣಲಿಲ್ಲ. ಜನ ಏನಾದರೂ ಮಾತನಾಡಿಕೊಳ್ಳಲಿ, ಆದರೆ ಪ್ರಜ್ವಲ್ ರೇವಣ್ಣ ಹಾಗೂ ಪ್ರೀತಂ ಗೌಡ ನಡುವೆ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಎಲ್ಲರು ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ. ಜೆಡಿಎಸ್‌ನವರಿಗಿಂತಲು ಬಿಜೆಪಿ ಕಾರ್ಯಕರ್ತರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ ಎಂದರು.

ಪ್ರೀತಂ ಗೌಡ ಅವರ ಬೆಂಬಲಿಗರು ಚುನಾವಣೆಯಲ್ಲಿ ಕೆಲಸ ಮಾಡುತ್ತಿದ್ದು, ಅವಶ್ಯಕತೆ ಬಿದ್ದರೆ ಅವರು ಹಾಸನಕ್ಕೆ ಹೋಗುತ್ತಾರೆ. ನಾನು ಉತ್ತರ ಪ್ರದೇಶದವನು. ಅಲ್ಲಿಯೂ ಚುನಾವಣೆ ನಡೆಯುತ್ತಿದೆ. ಆದರೆ ನಾನು ಕರ್ನಾಟಕದ ಉಸ್ತುವಾರಿ ಆಗಿರುವುದರಿಂದ ಇಲ್ಲಿ ಕೆಲಸ ಮಾಡುತ್ತಿದ್ದೇನೆ. ಅದೇ ರೀತಿ ಪ್ರೀತಂ ಮೈಸೂರು ಹಾಗೂ ಚಾಮರಾಜನಗರ ಉಸ್ತುವಾರಿ ಆಗಿದ್ದಾರೆ. ಹಾಗಾಗಿ ಯಾವಾಗಲೂ ಹಾಸನಕ್ಕೆ ಹೋಗಲು ಸಾಧ್ಯವಾಗುವುದಿಲ್ಲ ಎಂದು ಹೇಳಿದರು.

ಪ್ರಜ್ವಲ್ ರೇವಣ್ಣ ನಿನ್ನೆ ಎರಡು ಗಂಟೆ ನನ್ನ ಜೊತೆಗಿದ್ದರು. ಆ ವೇಳೆ ಅವರು ಯಾವುದೇ ರೀತಿಯ ದೂರನ್ನೂ ಹೇಳಲಿಲ್ಲ. ಪ್ರೀತಂ ಹಾಗೂ ಅವರ ನಡುವೆ ಗೊಂದಲವಿದ್ದಂತೆ ಕಾಣಲಿಲ್ಲ. ಪ್ರೀತಂ ಗೌಡ ಹಾಸನದಲ್ಲಿ ಸೋತಿರಬಹುದು. ಆದರೆ ಅವರು ಪವರ್‌ಫುಲ್ ಲೀಡರ್. ಜೆಡಿಎಸ್ ಶಾಸಕರಿಗಿಂತಲೂ ಪಾಪ್ಯುಲರ್. ಹಾಸನ ಒಗ್ಗೂಡಿಸಲು ಅವರಿಗೆ ಒಂದು ದಿನ ಸಾಕು. ಆ ನಿಟ್ಟಿನಲ್ಲೇ ಅವರು ಕೆಲಸ ಮಾಡುತ್ತಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಬಗ್ಗೆ ಪ್ರತಿಕ್ರಿಯಿಸಿ, ಅಲ್ಲಿ ಡಾ.ಸಿ.ಎನ್.ಮಂಜುನಾಥ್ ಅವರು ಭಾರಿ ಮತಗಳ ಅಂತರದಲ್ಲಿ ಗೆಲುವು ಸಾಧಿಸಲಿದ್ದು, ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ.ಸುರೇಶ್ ಠೇವಣಿ ಕಳೆದುಕೊಳ್ಳುತ್ತಾರೆ ಎಂದರು.

ಗ್ಯಾರಂಟಿಗಳು ನನ್ನ 'ಕೈ' ಹಿಡಿಯಲಿವೆ

ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್ ಚಂದ್ರು ವಿಶ್ವಾಸ

ಕೆ.ಆರ್.ಪೇಟೆ,ಏ.7– ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿರುವ ಪಂಚ ಗ್ಯಾರಂಟಿಗಳು ನನ್ನ ಗೆಲುವಿಗೆ ಸಹಕಾರಿಯಾಗಲಿದ್ದು ಜನ ನನ್ನ 'ಕೈ' ಹಿಡಿಯಲಿದ್ದಾರೆ ಎಂದು ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ವಿಶ್ವಾಸ ವ್ಯಕ್ತಪಡಿಸಿದರು.

ತಾಲೂಕಿನ ನಾನಾ ಕಡೆಗಳಲ್ಲಿ ಮತ ಪ್ರಚಾರದಲ್ಲಿ ತೊಡಗಿದ್ದ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿ, ಬರಗಾಲದ ಈ ಸಂದರ್ಭದಲ್ಲಿ ಗ್ಯಾರಂಟಿಗಳು ಜನರ ಸಂಕಷ್ಟಕ್ಕೆ ನೆರವಾಗಿವೆ. ಪಂಚ ಗ್ಯಾರಂಟಿಗಳ ಜೊತೆಗೆ ಕಾಂಗ್ರೆಸ್ ಪಕ್ಷ ಲೋಕಸಭಾ ಚುನಾವಣಾ ಪ್ರಣಾಳಿಕೆಯಲ್ಲಿ ಬಿಡುಗಡೆ ಮಾಡಿರುವ ನ್ಯಾಯಪತ್ರ ಕೂಡ ಕಾಂಗ್ರೆಸ್ ಗೆಲುವಿಗೆ ಪೂರಕವಾಗಲಿದೆ ಎಂದರು.

ಪ್ರಚಾರಕ್ಕೆ ಹೋದಕಡೆಯಲ್ಲೆಲ್ಲ ಉತ್ತಮ ಸ್ಪಂದನೆ ಸಿಗುತ್ತಿದೆ. ಅದರಲ್ಲೂ ಮಹಿಳೆಯರು ಹೋದಕಡೆಯಲ್ಲೆಲ್ಲ ಆರತಿ ಎತ್ತಿ ಬರಮಾಡಿಕೊಳ್ಳುತ್ತಿದ್ದಾರೆ. ಉಚಿತ ಬಸ್ ಪ್ರಯಾಣ, ವಿದ್ಯುತ್, ತಿಂಗಳಿಗೆ ಎರಡು ಸಾವಿರ ಹಣ ಸಿಗುತ್ತಿರುವುದರ ಬಗ್ಗೆ ಕಾಂಗ್ರೆಸ್ ಸರ್ಕಾರಕ್ಕೆ ಅಭಿನಂದನೆಗಳು ಸಲ್ಲಿಸುವುದರ ಜೊತೆಗೆ ಕಾಂಗ್ರೆಸ್ ಬೆಂಬಲಿಸುವ ಭರವಸೆ ನೀಡುತ್ತಿದ್ದಾರೆ ಎಂದರು.

ಎಸಿ ರೂಮ್‌ನಲ್ಲಿ ಇರಲು ನನಗೆ ಇಷ್ಟವಿಲ್ಲ. ಜನರ ಮಧ್ಯೆ ಇರಬೇಕು. ಜನಸೇವೆ ಮಾಡಬೇಕು ಎಂಬ ಕನಸು ಕಟ್ಟಿಕೊಂಡು ರಾಜಕೀಯಕ್ಕೆ ಬಂದಿದ್ದೇನೆ. ಹಣ ಮಾಡುವ ಉದ್ದೇಶ ನನಗಿಲ್ಲ. ನಾನು ಈ ಜಿಲ್ಲೆಯ ಮಣ್ಣಿನ ಮಗ. ನಾನು ಉತ್ತಿದ್ದೇನೆ, ಬಿತ್ತಿದ್ದೇನೆ ಒಕ್ಕಲುತನ ಮಾಡಿದ್ದೇನೆ. ರೈತಾಪಿ ವರ್ಗದವರ ಕಷ್ಟಸುಖಗಳನ್ನು ಚೆನ್ನಾಗಿ ಬಲ್ಲೆ. ನಾನು ಇದೇ ಜಿಲ್ಲೆಯ ಮಣ್ಣಿನ ಮಗ. ನಾನು ಈ ಜಿಲ್ಲೆಯ ರೈತನ ಮಗ ಎಂದು ಹೇಳಿಕೊಳ್ಳಲು ನನಗೆ ಹೆಮ್ಮೆಯಿದೆ ಎಂದರು.


ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ ಭಾನುವಾರ ಕೆ.ಆರ್.ಪೇಟೆ ತಾಲೂಕಿನಲ್ಲಿ ಭರ್ಜರಿಯಾಗಿ ಮತ ಯಾಚಿಸಿದರು.

ಕೆ.ಆರ್.ಪೇಟೆಯಲ್ಲಿ ಸ್ಟಾರ್ ಚಂದ್ರು ಪ್ರಚಾರ: ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್‌ಚಂದ್ರು) ಅವರು ಕೆಆರ್.ಪೇಟೆ ತಾಲೂಕಿನ ಮಲಕೋನಹಳ್ಳಿಯಲ್ಲಿರುವ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿ ಚುನಾವಣಾ ಆರಂಭಿಸಿದರು.

ಐಚನಹಳ್ಳಿ, ಬೂಕನಕೆರೆ, ಬಲ್ಲೇನಹಳ್ಳಿ, ಗಂಜಿಗೆರೆ, ಬಳ್ಳೇಕೆರೆ, ಮಡವಿನ ಕೋಡಿ, ಹರಿಹರಪುರ, ಬಂಡಿಹೊಳೆ, ಮಾಕವಳ್ಳಿ, ಚೌಡೇನಹಳ್ಳಿ, ದಬ್ಬೆಘಟ್ಟ, ಮಾದಾಪುರ, ಆನೆಗೊಳ, ಐಕನಹಳ್ಳಿ, ಲಕ್ಷ್ಮಿಪುರ, ಕಿಕ್ಕೇರಿ ಸೇರಿದಂತೆ ನಾನಾ ಭಾಗಗಳಲ್ಲಿ ಚುನಾವಣಾ ಪ್ರಚಾರ ನಡೆಸಿದರು.

ಇದೇ ವೇಳೆ ಸ್ಟಾರ್ ಚಂದ್ರುರವರು ತಾಲೂಕಿನ ಕಲ್ಲಹಳ್ಳಿಯಲ್ಲಿರುವ ಪುರಾಣಪ್ರಸಿದ್ಧ ಭೂ ವರಾಹಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ನೆರವೇರಿಸಿದರು.

ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್, ಪ್ರಕಾಶ್, ಹಿರಿಯ ಕಾಂಗ್ರೆಸ್ ಮುಖಂಡರಾದ ಬಿ.ಎಲ್.ದೇವರಾಜ್, ಮಂಡ್ಯ ಜಿಲ್ಲಾಧ್ಯಕ್ಷ ರಾದ ಸಿ.ಡಿ.ಗಂಗಾಧರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿಶ್ವನಾಥ್, ರಮೇಶ್, ಕೃಷ್ಣಮೂರ್ತಿ, ಕೆ.ಬಿ. ರಮೇಶ್ ಸೇರಿದಂತೆ ತಾಲೂಕಿನ ಹಲವು ಕಾಂಗ್ರೆಸ್ ಮುಖಂಡರು ಜೊತೆಯಲ್ಲಿದ್ದರು.

ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆ

ಬಳ್ಳೇಕೆರೆಯಲ್ಲಿ ಚುನಾವಣಾ ಪ್ರಚಾರ ನಡೆಸುತ್ತಿದ್ದ ಸಂದರ್ಭದಲ್ಲಿ ಗ್ರಾಮ ಪಂಚಾಯತ್‌ನ ಬಿಜೆಪಿ ಕಾರ್ಯಕರ್ತರು ಹಾಗೂ ಹರಿಹರಪುರದಲ್ಲಿ ಕೆ.ಆರ್.ಪೇಟೆ ತಾಲೂಕು ಬಿಜೆಪಿ ಮಹಿಳಾ ಉಪಾಧ್ಯಕ್ಷರು ಸೇರಿದಂತೆ ಹಲವು ಮಹಿಳಾ ಕಾರ್ಯಕರ್ತೆಯರು ಕಾಂಗ್ರೆಸ್‌ಗೆ ಸೇರ್ಪಡೆಯಾದರು. ಸ್ಟಾರ್ ಚಂದ್ರು ಅವರಿಗೆ ಶಾಲು ಹಾಕಿ ಪಕ್ಷಕ್ಕೆ ಬರಮಾಡಿಕೊಂಡರು.

ಲೋಕಸಭಾ ಚುನಾವಣೆ: ತರಬೇತಿ ಕೇಂದ್ರಕ್ಕೆ ಡಿಸಿ ಭೇಟಿ

ಶ್ರೀರಂಗಪಟ್ಟಣ,ಏ.7–ಜಿಲ್ಲಾಧಿಕಾರಿ ಡಾ.ಕುಮಾರ ಅವರು ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಶ್ರೀರಂಗಪಟ್ಟಣ ತಾಲೂಕಿನಲ್ಲಿ ನಡೆಯುತ್ತಿರುವ ಪಿ.ಆರ್.ಓ ಮತ್ತು ಎ.ಪಿ.ಆರ್.ಓ ತರಬೇತಿ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮತಗಟ್ಟೆಯಲ್ಲಿ ಮತದಾನದ ಕೆಲಸಗಳು ಕ್ರಮಬದ್ಧವಾಗಿ ನಡೆಸಲು ಪಿ.ಆರ್.ಓ ಹಾಗೂ ಎ.ಪಿ.ಆರ್.ಓ ಇಬ್ಬರ ಕೆಲಸ ಮಹತ್ವದಾಗಿರುತ್ತದೆ. ತರಬೇತಿಯಲ್ಲಿ ಯಾವುದೇ ಸಂಶಯ ಅಥವಾ ಗೊಂದಲಗಳಿದ್ದಲ್ಲಿ ಮಾಸ್ಟರ್ ಟ್ರೈನರ್‌ಗಳೊಂದಿಗೆ ಚರ್ಚಿಸಿ ಪರಿಹರಿಸಿಕೊಳ್ಳಿ ಎಂದರು.


ಜಿಲ್ಲಾಧಿಕಾರಿ ಡಾ.ಕುಮಾರ್ ತರಬೇತಿ ಕೇಂದ್ರಕ್ಕೆ ಭೇಟಿ ನೀಡಿ ಮಾಹಿತಿ ಪಡೆಯುತ್ತಿರುವುದು

ಪಿಆರ್‌ಒ ಹಾಗೂ ಎಪಿಆರ್‌ಒಗಳ ಮಾಹಿತಿಗಾಗಿ ಇರುವ ಹ್ಯಾಂಡ್ ಬುಕ್ ಅನ್ನು ಪಡೆದುಕೊಂಡು ಎರಡು ಅಥವಾ ಮೂರು ಬಾರಿ ಓದಿಕೊಳ್ಳಿ, ಯಾವುದೇ ಲೋಪವಾಗದಂತೆ ಕಾರ್ಯನಿರ್ವಹಿಸಿ ಎಂದರು.

ಇದೇ ಸಂದರ್ಭದಲ್ಲಿ ಶ್ರೀರಂಗಪಟ್ಟಣ ತಹಶೀಲ್ದಾರ್ ಸೇರಿದಂತೆ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಚನ್ನಸಂದ್ರ ಡೇರಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಮದ್ದೂರು: ತಾಲೂಕಿನ ಚನ್ನಸಂದ್ರ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ರವಿ ಚನ್ನಸಂದ್ರ ಹಾಗೂ ಉಪಾಧ್ಯಕ್ಷರಾಗಿ ಈರಾಜ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಸಭಾಂಗಣದಲ್ಲಿ ನಡೆದ ಚುನಾವಣೆಯಲ್ಲಿ ಇವರಿಬ್ಬರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಇವರ ಆಯ್ಕೆಯನ್ನು ಚುನಾವಣಾಧಿಕಾರಿ ಫಿಲೋಮಿನಾ ಘೋಷಣೆ ಮಾಡಿದರು.

ನೂತನ ಅಧ್ಯಕ್ಷ ರವಿ ಚನ್ನಸಂದ್ರ ಮಾತನಾಡಿ, ಹಾಲು ಉತ್ಪಾದಕರ ಸಹಕಾರ ಸಂಘದ ಸರ್ವತೋಮುಖ ಅಭಿವೃದ್ಧಿಗೆ ಎಲ್ಲಾ ನಿರ್ದೇಶಕರ ಸಹಕಾರ ಪಡೆಯಲಾಗುವುದು. ಹಾಲು ಉತ್ಪಾದಕರಿಗೆ ಸರ್ಕಾರ ಮತ್ತು ಜಿಲ್ಲಾ ಹಾಲು ಒಕ್ಕೂಟದ ವತಿಯಿಂದ ಸಿಗುವ ಎಲ್ಲಾ ಸವಲತ್ತುಗಳನು ಸಮರ್ಪಕವಾಗಿ ತಲುಪಿಸಲು ಪ್ರಾಮಾಣಿಕವಾಗಿ ಶ್ರಮಿಸುತ್ತೇನೆಂದು ವಿಶ್ವಾಸ ವ್ಯಕ್ತಪಡಿಸಿದರು.


ಮದ್ದೂರು ತಾಲೂಕಿನ ಚನ್ನಸಂದ್ರ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ರವಿಚನ್ನಸಂದ್ರ ಹಾಗೂ ಉಪಾಧ್ಯಕ್ಷರಾಗಿ ಈರಾಜ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಸಿ.ಟಿ.ಲೋಕೇಶ್, ನಟರಾಜು, ಸುನಂದಮ್ಮ, ಅಂಬಿಕಾ, ಪುಷ್ಪ ದೇವರಾಜ್, ಅಂಜನಮ್ಮ, ಗ್ರಾಮದ ಮುಖಂಡರು ಹಾಗೂ ಯುಜಮಾನರು ಇದ್ದರು.

ಸಂಘದ ನಿರ್ದೇಶಕರಾದ ಸಿ.ಟಿ. ಲೋಕೇಶ್, ನಟರಾಜು, ಸುನಂದಮ್ಮ, ಅಂಬಿಕಾ, ಪುಷ್ಪದೇವರಾಜ್, ಅಂಜನಮ್ಮ ಸೇರಿದಂತೆ ಗ್ರಾಮದ ಯಜಮಾನರು ಹಾಗೂ ಮುಖಂಡರು ಇದ್ದರು.

ಲೋಕಾಯುಕ್ತ ಬಲೆಗೆ ಗ್ರಾಮಲೆಕ್ಕಿಗ

ಮಳವಳ್ಳಿ: ಆರ್‌ಟಿಸಿಯಲ್ಲಿ ಋಣಭಾರದ ಕಾಲಂ ತೆಗೆಯಲು ರೈತರೊಬ್ಬರಿಂದ 2500 ರೂ. ಲಂಚ ಪಡೆಯುವ ವೇಳೆ ದಾಸನದೊಡ್ಡಿ ಗ್ರಾಮಲೆಕ್ಕಿಗ ಸಿದ್ಧರಾಯ ಮಾಳಿ ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ತಾಲೂಕಿನ ವಡ್ಡರಹಳ್ಳಿ ಗ್ರಾಮದ ಗೌರಮ್ಮ ಎಂಬುವರು ತಮ್ಮ ಜಮೀನಿನ ಆರ್‌ಟಿಸಿ ಆಧಾರ ಮಾಡಿ ಬ್ಯಾಂಕ್‌ನಲ್ಲಿ ಸಾಲ ಪಡೆದಿದ್ದರು. ಸಾಲ ಮರುಪಾವತಿ ನಂತರ ಆರ್‌ಟಿಸಿಯಲ್ಲಿ ಋಣಭಾರದ ಕಾಲಂ ತೆಗೆಯಲು ಗ್ರಾಮಲೆಕ್ಕಾಧಿಕಾರಿ ಸಿದ್ಧರಾಯ ಮಾಳಿ ಬಳಿ ಅರ್ಜಿ ಸಲ್ಲಿಸಿದರು. ಹೀಗಾಗಿ 2500 ಲಂಚ ನೀಡುವಂತೆ ಸಿದ್ಧರಾಯಮಾಳಿ ಒತ್ತಾಯಿಸಿದ್ದರು.

ಹೀಗಾಗಿ ಅರ್ಜಿದಾರೆಯ ಪತಿ ಶಿವಕುಮಾರ್ ಲೋಕಾಯುಕ್ತರಿಗೆ ದೂರು ನೀಡಿದ್ದರು. ಸಂಜೆ ಶಿವಕುಮಾರ್ ಅವರಿಂದ 2500 ರೂ. ಲಂಚ ಪಡೆಯುವ ವೇಳೆ ಲೋಕಾಯುಕ್ತ ಎಸ್ಪಿ ಸುರೇಶ್ ಬಾಬು ನೇತೃತ್ವದಲ್ಲಿ ದಾಳಿ ಮಾಡಿದ ಲೋಕಾಯುಕ್ತ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

ಲೋಕಾಯುಕ್ತ ಡಿವೈಎಸ್ ಪಿ ಸುನೀಲ್ ಕುಮಾರ್, ಸಬ್ ಇನ್ಸ್‌ಪೆಕ್ಟರ್ ಮೋಹನ್ ರೆಡ್ಡಿ, ಸಿಬ್ಬಂದಿಗಳಾದ ಶಂಕರ್, ಶರತ್, ನಂದೀಶ್, ಮಹದೇವಸ್ವಾಮಿ, ಮಾನಸಾ, ಹೇಮಾವತಿ ಇದ್ದರು.

ಶ್ರೀರಂಗಪಟ್ಟಣದಲ್ಲಿ ಮತದಾನ ಜಾಗೃತಿ ಜಾಥಾ


ಮೈಸೂರು ಶೇಷಾದ್ರಿಪುರಂ ಪದವಿ ಕಾಲೇಜು ಹಾಗೂ ಪಟ್ಟಣದ ಅಚೀವರ್ಸ್ ಅಕಾಡೆಮಿ ವತಿಯಿಂದ ಮತದಾನ ಕುರಿತು ಮತದಾರರಲ್ಲಿ ಜಾಗೃತಿ ಮೂಡಿಸಲಾಯಿತು.

ಶ್ರೀರಂಗಪಟ್ಟಣ: ಮೈಸೂರು ಶೇಷಾದ್ರಿಪುರಂ ಪದವಿ ಕಾಲೇಜು ಹಾಗೂ ಪಟ್ಟಣದ ಅಚೀವರ್ಸ್ ಅಕಾಡೆಮಿ ವತಿಯಿಂದ ಮತದಾನ ಕುರಿತು ಮತದಾರರಲ್ಲಿ ಜಾಗೃತಿ ಮೂಡಿಸಲಾಯಿತು. ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಜಾಗೃತಿ ಜಾಥಾ ನಡೆಸಿದ ಇವರು, ಕಡ್ಡಾಯ ಮತದಾನ ಹಾಗೂ ಅರ್ಹ ಅಭ್ಯರ್ಥಿಯ ಆಯ್ಕೆ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು.

ಹಾಗೆಯೇ ಪಟ್ಟಣದ ಬಸ್ ನಿಲ್ದಾಣದ ಹತ್ತಿರ ಮಾನವ ಸರಪಳಿ ನಿರ್ಮಿಸಿ, ರಾಷ್ಟ್ರಪ್ರಶಸ್ತಿ ಪುರಸ್ಕೃತರು ಹಾಗೂ ಎನ್‌ಎಸ್‌ಎಸ್ ಅಧಿಕಾರಿ ಡಾ.ರಾಘವೇಂದ್ರ ಮತದಾನ ಪ್ರತಿಜ್ಞೆಯನ್ನ ಬೋಧಿಸಿದರು. ಜೊತೆಗೆ ಬೈಕ್ ರ‍್ಯಾಲಿಯ ಮುಖಾಂತರ ಶ್ರೀರಂಗಪಟ್ಟಣದ ಪ್ರಮುಖ ಬೀದಿಗಳು, ಸಂತೆಮಾಳ, ಬಾಬುರಾಯನಕೊಪ್ಪಲು, ಅಗ್ರಹಾರ, ಕರಿಘಟ್ಟ, ಗಂಜಾಂ ಇನ್ನು ಮುಂತಾದ ಕಡೆ ಮತದಾನದ ಜಾಗೃತಿಯ ಘೋಷವಾಕ್ಯವನ್ನು ಕೂಗಿ ಮತದಾನದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿಯನ್ನು ಮೂಡಿಸಲಾಯಿತು. ಇದೇ ಸಂದರ್ಭದಲ್ಲಿ ಗುರುಮೂರ್ತಿ, ದೀಕ್ಷಿತ್, ಧನುಷ್ ರಾಜೇಶ್ ನವೀನ್ ದಿವಿತ್ ವಿನಯ್ ಮುರಳಿ, ಶ್ರೀಹರಿ ಇಂಚರ ನಿವೇದಿತಾ ಅನನ್ಯ ಹಾಗೂ ಎನ್‌ಎಸ್‌ಎಸ್ ಸ್ವಯಂ–ಸೇವಕರು ಸೇರಿದಂತೆ ಮುಂತಾದವರು ಜಾಥಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಇಬ್ಬರು ವಿದ್ಯಾರ್ಥಿಗಳು ನವೋದಯಗೆ ಆಯ್ಕೆ



ಭಾರತೀನಗರ,ಏ.7– ಇಲ್ಲಿಗೆ ಸಮೀಪದ ಹುಲಿಗೆರೆಪುರ ಅನಿಕೇತನ ಹಿರಿಯ ಪ್ರಾಥಮಿಕ ಶಾಲೆಯ 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಇಬ್ಬರು ವಿದ್ಯಾರ್ಥಿಗಳು ನವೋದಯ ಶಾಲೆಗೆ ಆಯ್ಕೆಗೊಂಡಿದ್ದಾರೆ.

ದೊಡ್ಡರಸಿನಕೆರೆ ಗ್ರಾಮದ ಡಿ.ಎಂ. ಸಿದ್ದೇಗೌಡರ ಪುತ್ರಿ ಡಿ.ಎಸ್.ಕುಸುಮ, ಜ್ಯೋತಿಕುಮಾರ್ ಅವರ ಪುತ್ರಿ ಡಿ.ಜೆ.ಧನ್ಯತ ಅವರು 2024 ನೇ ಸಾಲಿನ ನವೋದಯ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಗೊಂಡು ನವೋದಯ ಶಾಲೆಗೆ ಆಯ್ಕೆಯಾಗಿದ್ದಾರೆ. ವಿದ್ಯಾರ್ಥಿಗಳನ್ನು ಅನಿಕೇತನ ಶಾಲೆಯ ಆಡಳಿತ ಮಂಡಳಿ ಅಭಿನಂದಿಸಿ ಗೌರವಿಸಿದೆ.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಯಾಗಿ ನೇಮಕ

ಪಾಂಡವಪುರ:ಏ:7– ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ(ಕೆಪಿಸಿಸಿ) ಪ್ರಧಾನ ಕಾರ್ಯದರ್ಶಿಯಾಗಿ ಪಾಂಡವಪುರ ತಾಲೂಕಿನ ಮಾಜಿ ಶಾಸಕ ದಿವಂಗತ ಡಿ.ಹಲಗೇಗೌಡರ ಪುತ್ರ ಎಚ್.ತ್ಯಾಗರಾಜು ನೇಮಕಗೊಂಡಿದ್ದಾರೆ.



ಎಚ್.ತ್ಯಾಗರಾಜು ಅವರು ತಂದೆಯ ಕಾಲದಿಂದಲೂ ಸಕ್ರಿಯ ಕಾಂಗ್ರೆಸ್ ಕಾರ್ಯಕರ್ತರಾಗಿ, ಜಿಪಂ ಸದಸ್ಯರಾಗಿ, ಕೆಪಿಸಿಸಿ ಸದಸ್ಯರಾಗಿ ಪಕ್ಷ ಸಂಘಟನೆ ಮಾಡಿದ್ದಾರೆ. ಇವರ ಸಂಘಟನ ಕೆಲಸವನ್ನು ಗುರುತಿಸಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ಕೆ.ಸಿ.ವೇಣುಗೋಪಾಲ್ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಎಚ್.ತ್ಯಾಗರಾಜು ಅವರನ್ನು ನೇಮಕಗೊಳಿಸಿ ಆದೇಶ ಹೊರಡಿಸಿದ್ದಾರೆ.

ನಿಂಗಮ್ಮ ನಿಧನ

ಕೆ.ಆರ್.ಪೇಟೆ: ತಾಲೂಕಿನ ಸಿಂಧುಘಟ್ಟ ಗ್ರಾಮದ ಲೇಟ್ ಮರೀಗೌಡ ರವರ ಧರ್ಮಪತ್ನಿ ಶ್ರೀಮತಿ ನಿಂಗಮ್ಮ(95) ನಿಧನ ಹೊಂದಿದ್ದಾರೆ. ಅವರಿಗೆ ಸುಮಾರು 95 ವರ್ಷ ವಯಸ್ಸಾಗಿತ್ತು. ಮೃತರು 6 ಮಂದಿ ಪುತ್ರರು, ಓರ್ವ ಪುತ್ರಿ, ಮೊಮ್ಮಗ ಗುಪ್ತಚರ ಇಲಾಖೆಯ ವಿಶ್ವನಾಥ್ ಸೇರಿದಂತೆ ಮೊಮ್ಮಕ್ಕಳು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.



ಮೃತರ ಅಂತ್ಯಕ್ರಿಯೆಯು ಸೋಮವಾರ ಬೆಳಗ್ಗೆ 10 ಗಂಟೆಗೆ ಸಿಂಧುಘಟ್ಟ ಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರ ನಿಧನಕ್ಕೆ ತಾಲ್ಲೂಕಿನ ವಿವಿಧ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಮೈಸೂರು ಮಿತ್ರ ಸೋಮವಾರ 8 ಏಪ್ರಿಲ್ 2024

ಬಿಜೆಪಿಗೆ ಬಹುಮತ ನೀಡಿದರೆ ಹಿಂದುಗಳ ಬೇಡಿಕೆ ಈಡೇರಿಕೆ

• ಮಾಜಿ ಸ್ಪೀಕರ್ ಕೆ.ಜಿ. ಬೋಪಯ್ಯ ಹೇಳಿಕೆ • ವಿವಿಧೆಡೆ ಪ್ರಚಾರ ಸಭೆ



ಪೊನ್ನಂಪೇಟೆಯಲ್ಲಿ ಭಾನುವಾರ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಮಾಜಿ ಸ್ಪೀಕರ್ ಕೆ.ಜಿ.ಬೋಪಯ್ಯ ಮಾತನಾಡಿದರು.

ಮಡಿಕೇರಿ, ಏ.7–ಈ ಬಾರಿಯ ಲೋಕಸಭಾ ಚುನಾವಣೆಯಲ್ಲೂ ಬಿಜೆಪಿಗೆ ಸ್ಪಷ್ಟ ಬಹುಮತ ನೀಡಿದರೆ ಹಿಂದುಗಳ ಬಹುದಿನಗಳ ಬೇಡಿಕೆ 2024ರೊಳಗೆ ಈಡೇರುತ್ತದೆ ಎಂದು ಮಾಜಿ ಸ್ಪೀಕರ್ ಕೆ.ಜಿ.ಬೋಪಯ್ಯ ಹೇಳಿದರು.

ಪೊನ್ನಂಪೇಟೆಯಲ್ಲಿ ಭಾನುವಾರ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಿಸುವ ಮೂಲಕ ಹಿಂದುಗಳ ಬಹುದಿನಗಳ ಕನಸನ್ನು ನನಸು ಮಾಡಲಾಗಿದೆ. ಒಂದು ದೇಶದಲ್ಲಿ ಎರಡು ಕಾನೂನು ಇದ್ದ ಕಾಶ್ಮೀರದಲ್ಲಿ ಆರ್ಟಿಕಲ್–370 ಅನ್ನು ರದ್ದು ಮಾಡಿದರೆ ಇಡೀ ದೇಶದಲ್ಲಿ ರಕ್ತಪಾತವಾಗುತ್ತೆ ಎಂದು ಕಾಂಗ್ರೆಸ್ ಹೇಳಿತ್ತು. ಆದರೆ, 370 ವಿಧಿಯನ್ನು ರದ್ದು ಮಾಡಿ ಅಲ್ಲಿನವರ ಸ್ವಚ್ಛಂದ ಬದುಕಿಗೆ ಅಣಿ ಮಾಡಿಕೊಡಲಾಗಿದೆ ಎಂದರು.

ಇಂದು ಅಲ್ಲಿನ ಪ್ರವಾಸೋದ್ಯಮದಿಂದ ಕಾಶ್ಮೀರ ಮತ್ತೆ ವಿಶ್ವ ಪ್ರಸಿದ್ಧಿಯಾಗಿದೆ. ಹೀಗೆ ನಾಗರಿಕ ಹಕ್ಕು ಕಾಯ್ದೆ ಕೂಡ ಜಾರಿಗೆ ತರಲು ಹೊರಟಾಗ ಬೇರೆ ಧರ್ಮದವರನ್ನು ಸುಳ್ಳಿನ ಮೂಲಕ ಕಾಂಗ್ರೆಸ್ ಎತ್ತಿ ಕಟ್ಟುವ ಕೆಲಸ ಮಾಡುತ್ತಿದೆ ಎಂದು ಆರೋಪಿಸಿದ್ದರು.

2014ರ ಡಿಸೆಂಬರ್ 31ರೊಳಗೆ ಭಾರತಕ್ಕೆ ನಿರಾಶ್ರಿತರಾಗಿ ಬಂದ ಹಿಂದುಗಳು, ಪಾರ್ಸಿ, ಬೌದ್ಧರು, ಸಿಕ್ ಸಮುದಾಯಕ್ಕೆ ದೇಶದ ಪೌರತ್ವ ನೀಡಲಾಗುವುದು. ಇದಕ್ಕೆ ತಕರಾರು ಎತ್ತಿ ತಡೆ ಉಂಟು ಮಾಡುತ್ತಿದ್ದಾರೆ. ದೇಶದ ಅಭಿವೃದ್ಧಿ, ನಾಡಿನ ಒಳಿತಿಗಾಗಿ ಭಾರತ ವಿಶ್ವ ಗುರುವಾಗಲು ಮತ್ತೊಮ್ಮೆ ಬಿಜೆಪಿಗೆ ಆಶೀರ್ವಾದ ಮಾಡಬೇಕು ಎಂದು ಮನವಿ ಮಾಡಿದರು.

ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಕಾವೇರಿ ಭೂಮಿ ಹಾಗೂ ದೇಶ ರಕ್ಷಣೆಯ ವೀರ ಪರಂಪರೆ ಹೊಂದಿರುವ ಪ್ರದೇಶದ ಸೇವೆ ಮಾಡಲು ಅವಕಾಶ ದೊರೆತ್ತಿರುವುದು ನನ್ನ ಸೌಭಾಗ್ಯ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ದೇಶ ಇಂದು ಅಭಿವೃದ್ಧಿಯತ್ತ ಸಾಗುತ್ತಿದೆ. ಜನಸಾಮಾನ್ಯರ ಕಲ್ಯಾಣಕ್ಕಾಗಿ ಹಲವಾರು ಯೋಜನೆಗಳನ್ನು ಮೋದಿ ಜಾರಿಗೆ ತಂದಿದ್ದಾರೆ. ಈ ಹಿನ್ನೆಲೆಯಲ್ಲಿ ಮತ್ತೆ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರವನ್ನು ಅಧಿಕಾರಕ್ಕೆ ತರಬೇಕು. ಹೀಗಾಗಿ ಮತದಾರರು ಆಶೀರ್ವಾದ ಮಾಡಬೇಕು ಎಂದರು. ಈ ವೇಳೆ ವಿಧಾನ ಪರಿಷತ್ ಸದಸ್ಯ ಸುಜಾ ಕುಶಾಲಪ್ಪ, ಮಾಜಿ ಎಂಎಲ್‌ಸಿ ಸುನೀಲ್ ಸುಬ್ರಮಣಿ, ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ಪ್ರಮುಖರಾದ ಮಹೇಶ್ ಜೈನಿ, ವಿಜು ಸುಬ್ರಮಣಿ, ವಿವಿಧ ಮೋರ್ಚಾ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಉಪಸ್ಥಿತರಿದ್ದರು.

ಕೊಡಗಿನ ಸಾಕಷ್ಟು ಸಮಸ್ಯೆಗಳ ಅರಿವಿದೆ: ಯದುವೀರ್

ಗೋಣಿಕೊಪ್ಪ: ಕೊಡಗಿನ ಸಮಸ್ಯೆಗೆ ಸ್ಪಂದಿಸಲು ಅವಕಾಶ ಮಾಡಿಕೊಡಿ ಎಂದು ಕೊಡಗು–ಮೈಸೂರು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಮನವಿ ಮಾಡಿದರು.


ಇಲ್ಲಿನ ಬಸ್ ನಿಲ್ದಾಣದಲ್ಲಿ ಭಾನುವಾರ ನಡೆದ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಮೈಸೂರು ಭಾಗಕ್ಕೆ ಸೇರಿದ ಕೊಡಗು ಜಿಲ್ಲೆಯ ಸಾಕಷ್ಟು ಸಮಸ್ಯೆಗಳ ಅರಿವು ನನಗೆ ಇದೆ. ಆದರೆ, ಇಲ್ಲಿನ ಸರ್ವ ಸಮಸ್ಯೆಗೆ ಸ್ಪಂದಿಸುವ ಅವಕಾಶಬೇಕಿದೆ. ಬಿಜೆಪಿಯನ್ನು ಅತಿ ಹೆಚ್ಚು ಮತಗಳಿಂದ ಗೆಲ್ಲಿಸಬೇಕಿದೆ ಎಂದರು.

ಮಾಜಿ ಶಾಸಕ ಕೆ.ಜಿ.ಬೋಪಯ್ಯ ಮಾತನಾಡಿ, ಕಾಂಗ್ರೆಸ್ ಸರ್ಕಾರ ಫ್ರೀ ಫ್ರೀ ಎಂದು ಜನರಿಗೆ ಮೋಸ ಮಾಡುವ ಕೆಲಸ ಮಾಡುತ್ತಿದೆ. ಇಂತಹ ಸರ್ಕಾರವನ್ನು ಕಿತ್ತೊಗೆಯಬೇಕಿದೆ. ಸಮೀಕ್ಷೆಯಲ್ಲಿ ಬಿಜೆಪಿ ಮತ್ತು ಎನ್‌ಡಿಎ ಕೂಟಕ್ಕೆ 400ಕ್ಕೂ ಹೆಚ್ಚು ಕ್ಷೇತ್ರ ಗೆಲುವು ದೊರೆಯುತ್ತದೆ ಎಂಬ ಮಾಹಿತಿ ಇದೆ. ಇದು ಹೆಚ್ಚು ಖುಷಿ ನೀಡಿದೆ ಎಂದರು. ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಮಾಚಿಮಾಡ ರವೀಂದ್ರ, ವಿರಾಜಪೇಟೆ ಮಂಡಲ ಅಧ್ಯಕ್ಷ ಮಾಚಿಮಂಡ ಸುವಿನ್ ಗಣಪತಿ, ರಾಜ್ಯ ಕಾರ್ಯಕಾರಿಣಿ ಸದಸ್ಯೆ ಮಾಪಂಗಡ ಯಮುನಾ ಚೆಂಗಪ್ಪ, ಪ್ರಮುಖರಾದ ಪಟ್ಟಡ ರೀನಾ ಪ್ರಕಾಶ್, ಮಾಂಗೇರ ಪದ್ಮಿನಿ, ಪ್ರಮುಖರು ಉಪಸ್ಥಿತರಿದ್ದರು.

ವಿವಿಧೆಡೆ ಪ್ರಚಾರ ಸಭೆ: ಇದೇ ವೇಳೆ ಪೊನ್ನಂಪೇಟೆ, ಕಿರುಗೂರು, ಬಲ್ಯಮುಂಡೂರು, ಹುದಿಕೇರಿ, ಬಿರುನಾಣಿ, ಟಿ.ಶೆಟ್ಟಿಗೇರಿ, ಶ್ರೀಮಂಗಲ, ಕುಟ್ಟ, ನಾಲ್ಕೇರಿ, ಕೆ.ಬಾಡಗ, ಕಾನೂರು, ಬಾಳೆಲೆ, ನಿಟ್ಟೂರು, ಪೊನ್ನಪ್ಪಸಂತೆ, ತಿತಿಮತಿ, ಮಾಯಮುಡಿ, ದೇವರಪುರ, ಗೋಣಿಕೊಪ್ಪ, ಅರ್ವತೊಕ್ಲು, ಹಾತೂರು, ಚೆನ್ನಯ್ಯನಕೋಟೆ, ಪಾಲಿಬೆಟ್ಟ, ಮಾಲ್ದಾರೆ, ಸಿದ್ದಾಪುರ, ಕಾರ್ಮಾಡು, ಅಮ್ಮತ್ತಿ, ಹೊಸೂರು, ಬಿಳುಗುಂದ, ಕಣ್ಣಂಗಾಲ, ಚೆಂಬೆಳ್ಳೂರು, ಕಾಕೋಟುಪರಂಬು, ಕದನೂರು, ಕೆದಮುಳ್ಳೂರು, ಬಿಟ್ಟಂಗಾಲ, ಆರ್ಜಿ, ಬೇಟೋಳಿ, ಬಿ.ಶೆಟ್ಟಿಗೇರಿ ಬಿಜೆಪಿ ಶಕ್ತಿ ಕೇಂದ್ರಗಳಲ್ಲಿ ಪ್ರಚಾರ ಸಭೆ ಆಯೋಜಿಸಲಾಗಿತ್ತು.

ಪಾರ್ವತಿ ಪೂವಯ್ಯಗೆ ಸರಳ ಬದುಕಿನ ಹಿರಿಮೆ

• ಡಾ.ಕಲ್ಯಾಟಂಡ ಬಿ.ಗಣಪತಿ ಅಭಿಮತ • 'ಅವ್ವೆ' ಪುಸ್ತಕ ಲೋಕಾರ್ಪಣೆ



ಮಡಿಕೇರಿಯ ಭಾರತೀಯ ವಿದ್ಯಾಭವನದಲ್ಲಿ ಕೊಡಗಿನ ಭಾರತೀಯ ವಿದ್ಯಾಭವನ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಸ್ಟಾರ್ ಆಫ್ ಮೈಸೂರ್' ಹಾಗೂ 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾದ ಡಾ.ಕಲ್ಯಾಟಂಡ ಬಿ.ಗಣಪತಿ 'ಅವ್ವೆ' ಪುಸ್ತಕ ಲೋಕಾರ್ಪಣೆಗೊಳಿಸಿದರು.

ಮಡಿಕೇರಿ, ಏ.7–ಗಾಂಧೀಜಿ ಅನುಯಾಯಿಯಾಗುವುದು ಸುಲಭವಲ್ಲದ ದಿನಗಳಲ್ಲಿ ಗಾಂಧೀಜಿ ತತ್ವಾದರ್ಶಗಳನ್ನು ಜೀವನದಲ್ಲಿ ಹಾಸುಹೊಕ್ಕಾಗಿಸಿಕೊಂಡು ಸರಳ ಮತ್ತು ಆದರ್ಶಪ್ರಾಯವಾಗಿ ಬದುಕಿದ ಹಿರಿಮೆ ಸಾಹಿತಿ ಕೂತಂಡ ಪಾರ್ವತಿ ಪೂವಯ್ಯ ಅವರಿಗೆ ಸಲ್ಲಬೇಕೆಂದು 'ಸ್ಟಾರ್ ಆಫ್ ಮೈಸೂರ್' ಹಾಗೂ 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾದ ಡಾ. ಕಲ್ಯಾಟಂಡ ಬಿ.ಗಣಪತಿ ಅವರು ಅಭಿಪ್ರಾಯಪಟ್ಟರು.

ನಗರದ ಭಾರತೀಯ ವಿದ್ಯಾಭವನದಲ್ಲಿ ಕೊಡಗಿನ ಭಾರತೀಯ ವಿದ್ಯಾಭವನ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಾಹಿತಿ ಕೂತಂಡ ಪಾರ್ವತಿ ಪೂವಯ್ಯ ಅವರ ಕುರಿತ 'ಅವ್ವೆ' ಪುಸ್ತಕ ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಅಂದಿನ ಕಾಲದಲ್ಲಿ ಪಂದ್ಯಂಡ ಗಣಪತಿ ಅವರು ಕೊಡಗಿನ 'ಗಾಂಧಿ' ಎಂದು ಖ್ಯಾತರಾಗಿದ್ದರೆ, ಕೂತಂಡ ಪಾರ್ವತಿ ಪೂವಯ್ಯ ಅವರು ಕೊಡಗಿನ ಸರೋಜಿನಿ ನಾಯ್ಡು ಎಂದು ಹೆಸರುವಾಸಿಯಾಗಿದ್ದರು. ಕೂತಂಡ ಪಾರ್ವತಿ ಅವರನ್ನು ಪ್ರತ್ಯಕ್ಷ ಕಂಡವರು ಕೆಲವೇ ಕೆಲಮಾದರೂ ಅವರ ಜೀವನಾದರ್ಶಗಳನ್ನು ಅರಿತವರು ಅನೇಕರಿದ್ದಾರೆ. ತನ್ನ ಬರವಣಿಗೆ ಮೂಲಕ ಕೊಡವರಂತಹ ಸಣ್ಣ ಸಮುದಾಯವನ್ನು ಭಾರತದಾದ್ಯಂತ ಪ್ರಚುರಪಡಿಸಿದ ಕೀರ್ತಿ ಅಂದಿನಕಾಲದ ಅಗ್ರ ಮಹಿಳಾ ಲೇಖಕಿಯಾಗಿದ್ದ ಪಾರ್ವತಿ ಪೂವಯ್ಯ ಅವರಿಗೆ ಸಲ್ಲುತ್ತದೆ ಎಂದು ಶ್ಲಾಘಿಸಿದರು.

ಪಾರ್ವತಿ ಕೊಡುಗೆ ಅಪಾರ: ಕೊಡವ, ಕನ್ನಡ ಇಂಗ್ಲಿಷ್ ಭಾಷೆಯಲ್ಲಿ ಹಿಡಿತ ಹೊಂದುವ ಮೂಲಕ ಅಂದಿನ ಕಾಲಘಟ್ಟದಲ್ಲೇ ಕೊಡಗಿನ ಪ್ರಥಮ ಮಹಿಳಾ ಲೇಖಕಿಯಾಗಿ ಪಾರ್ವತಿ ಪೂವಯ್ಯ ಸಾಹಿತ್ಯ ಲೋಕಕ್ಕೆ ನೀಡಿದ ಕೊಡುಗೆ ಅಪಾರ. ಸಾಹಿತಿಯಾದಂತೆಯೇ ಜೀವನದಲ್ಲೂ ತನ್ನದೇ ಆದರ್ಶ ಹೊಂದಿದ್ದ ಪಾರ್ವತಿ, ಓರ್ವ ಮಾದರಿ ತಾಯಿ ಕೂಡ ಆಗಿ ಕುಟುಂಬವನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಾ ಬಂದದ್ದು ಹೆಗ್ಗಳಿಕೆಯಾಗಿದೆ ಎಂದು ಹೇಳಿದರು.

> ❝ ಈಗಿನ ಕವಿತೆಗಳಲ್ಲಿ ಮೌಲ್ಯ ಕುಸಿಯುತ್ತಿದ್ದು, ತೋಚಿದ್ದು ಗೀಚಿದಂತೆ ಕಂಡು ಬರುತ್ತಿದೆ. ಹೀಗಾಗಿಯೇ ಅರ್ಥಹೀನ ಕವಿತೆಗಳು ಹೆಚ್ಚಾಗುತ್ತಿವೆ. ಹೀಗಿರುವಾಗ ಅಂದಿನ ಕಾಲ ಮಾನದಲ್ಲೇ ಮೌಲ್ಯ, ಸತ್ವಯುತ ಕವನ, ಲೇಖನಗಳನ್ನು ಬರೆದ ಕೂತಂಡ ಪಾರ್ವತಿ ಪೂವಯ್ಯ ಸದಾ ಆದರ್ಶಪ್ರಾಯರಾಗಿದ್ದಾರೆ.
> –ಡಾ. ಎಂ.ಜಿ.ಪಾಟ್ಕರ್, ಹಿರಿಯ ವೈದ್ಯ, ಮಡಿಕೇರಿ

ಸಾಹಿತ್ಯದಲ್ಲಿ ಶ್ರೀಮಂತಿಕೆ: ಮಡಿಕೇರಿಯ ಹಿರಿಯ ವೈದ್ಯ ಡಾ.ಎಂ.ಜಿ.ಪಾಟ್ಕರ್ ಮಾತನಾಡಿ, 'ಅವ್ವೆ' ಎಂಬುದು ಸರಳ ಶಬ್ದವಾಗಿದ್ದರೂ ಅವ್ವೆ ಪದ ನೀಡುವ ಅರ್ಥ ವಿಶಾಲವಾದದ್ದು. ಪಾರ್ವತಿ ಪೂವಯ್ಯ ಅವರು ಜೀವಿಸಿದ್ದ ಕಾಲದಲ್ಲಿ ಭಾರತ ಅತ್ಯಂತ ಸಂಕಷ್ಟದ ದಿನಗಳನ್ನು ಕಂಡಿತ್ತು. ಬಡತನ ಎಲ್ಲಾ ಕಡೆ ತಾಂಡವವಾಡಿತ್ತು. ಇಂತಹ ದಿನಗಳಲ್ಲೂ ಕೂತಂಡ ಪಾರ್ವತಿ ಸಾಹಿತ್ಯ ಶ್ರೀಮಂತಿಕೆ ಮೆರೆದಿದ್ದರು ಎಂದರು.

ಸರಳ–ಸ್ಮರಣೀಯ: 'ಅವ್ವೆ' ಕೃತಿಯ ಲೇಖಕಿ ಡಾ.ನಯನ ಕಶ್ಯಪ್ ಮಾತನಾಡಿ, ಪಾರ್ವತಿ ಪೂವಯ್ಯ ಅವರ ಜೀವನ ಮತ್ತು ಲೇಖನ ಎರಡೂ ಸರಳವಾಗಿತ್ತು ಹೀಗಾಗಿಯೇ ಅವರು ಜನಮಾನಸದಲ್ಲಿ ಸದಾ ಸ್ಮರಣೀಯವಾಗಿ ಉಳಿದರು. ಆ ಕಾಲದ ಆಶೋತ್ತರಗಳನ್ನು ಅರ್ಥ ಮಾಡಿಕೊಂಡು ಲೇಖನಗಳನ್ನು ಬರೆದದ್ದು ಪಾರ್ವತಿ ಅವರ ಹೆಗ್ಗಳಿಕೆಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಭಾರತೀಯ ವಿದ್ಯಾಭವನದ ಕೊಡಗು ಕೇಂದ್ರದ ಅಧ್ಯಕ್ಷ ಕೊಂಗಂಡ ಎಸ್.ದೇವಯ್ಯ ಸಭೆಯಲ್ಲಿ ಮಾತನಾಡಿದರು. ದೀಪಿಕಾ ಅಪ್ಪಯ್ಯ, ಬಾಲಾಜಿ ಕಶ್ಯಪ್ ಮತ್ತಿತರರು ಇದ್ದರು.

ಶಾಲಾ ವಾರ್ಷಿಕೋತ್ಸವದಲ್ಲಿ ಹಳೇ ವಿದ್ಯಾರ್ಥಿಗಳಿಗೆ ಸನ್ಮಾನ



ಸ್ಯಾಪಲಿಂಗ್ ಮಾಂಟೆಸರಿ ಶಾಲಾ ವಾರ್ಷಿಕೋತ್ಸವ ಸಮಾರಂಭದಲ್ಲಿ ಶ್ರೀ ಶಾಂತ ಮಲ್ಲಿಕಾರ್ಜುನ ಸಾಮೀಜಿ, ಡಾ. ಎಂ.ಸಿ. ಕಾರ್ಯಪ್ಪ, ರಶ್ಮಿ ಪೂವಯ್ಯ ಇತರರಿದ್ದಾರೆ.

ವಿರಾಜಪೇಟೆ, ಏ.7–ಪಟ್ಟಣದ ಪ್ರತಿಷ್ಠಿತ ಸ್ಯಾಪಲಿಂಗ್ ಮಾಂಟೆಸರಿ ಶಾಲಾ ವಾರ್ಷಿಕೋತ್ಸವ ಸಮಾರಂಭ ನಗರದ ಸೆರೆನಿಟಿ ಸಭಾಂಗಣದಲ್ಲಿ ನಡೆಯಿತು.

ಅರಮೇರಿ ಕಳಂಚೇರಿ ಮಠದ ಶ್ರೀ ಶಾಂತಮಲ್ಲಿಕಾರ್ಜುನಸಾಮೀಜಿ ಕಾರ್ಯಕ್ರಮ ಉದ್ಘಾಟಿಸಿದರು. ವಿರಾಜಪೇಟೆಯ ಹಿರಿಯ ವೈದ್ಯರಾದ ಡಾ.ಎಂ.ಸಿ. ಕಾರ್ಯಪ್ಪ ಹಾಗೂ ಡಾ.ಫಾತಿಮಾ ಕಾರ್ಯಪ್ಪ ಅವರನ್ನು ಸನ್ಮಾನಿಸಲಾಯಿತು. ಮಾಂಟೆಸರಿ ಶಾಲೆ ಬಗ್ಗೆ ಶಾಲಾ ನಿರ್ದೇಶಕಿ ರಶ್ಮಿ ಪೂವಯ್ಯ ವಿವರಿಸಿದರು.

ಉನ್ನತ ಹುದ್ದೆಗೆ ಸೇರ್ಪಡೆಗೊಂಡ ಸಂಸ್ಥೆಯ ಹಳೆಯ ವಿದ್ಯಾರ್ಥಿಗಳಿಂದ ಆಲಿಯಾ ಚೋಂದಮ್ಮ, ನಿಷ್ಮಾ ನೀಲಮ್ಮ, ಸ್ವಯಮ್ ಬೋಪಯ್ಯ ಹಾಗೂ ಸಂಸ್ಥೆಯ ಸ್ಥಾಪಕ ವರ್ಷದ ಶಿಕ್ಷಕರನ್ನು ಸನ್ಮಾನಿಸಲಾಯಿತು. ಮಾನವ ಕುಲ ಹಾಗೂ ಜೀವರಾಶಿಯನ್ನು ಸಮಾನ ದೃಷ್ಟಿಯಿಂದ ನೋಡುವ ಆಶಯವನ್ನು ಒಳಗೊಂಡ 'ಸಮಸ್ತ ಸೃಷ್ಟಿ–ಏಕ ದೃಷ್ಟಿ' ಎಂಬ ಪರಿಕಲ್ಪನೆಯ ಸಾಂಸ್ಕೃತಿಕ ಕಾರ್ಯಕ್ರಮ ಆಕರ್ಷಣೀಯ ವಾಗಿತ್ತು. ವಿದ್ಯಾಸಂಸ್ಥೆಯ ನಿರ್ದೇಶಕ ಕಂಡ್ರತಂಡ ಪ್ರವೀಣ್ ಪೂವಯ್ಯ ಹಾಗೂ ಕ್ಷೇತ್ರ ಸಂಪನ್ಮೂಲ ಅಧಿಕಾರಿ ವನಜಾಕ್ಷಿ ಉಪಸ್ಥಿತರಿದ್ದರು.



ಕಾರ್ಗುಂದ ವ್ಯಾಪ್ತಿಯಲ್ಲಿ ಮಳೆ.

ಜಿಲ್ಲೆ ವಿವಿಧೆಡೆ ಮಳೆ: ಬೆಳೆಗಾರರಿಗೆ ಕೊಂಚ ನೆಮ್ಮದಿ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ತಾಪಮಾನ ಏರಿಕೆಯಾಗುತ್ತಿದ್ದು, ತಡೆಯಲಾಗದ ಉಷ್ಣಾಂಶದಿಂದ ಜನ ತತ್ತರಿಸಿ ಹೋಗಿದ್ದಾರೆ. ಈ ನಡುವೆ ಭಾನುವಾರ ಜಿಲ್ಲೆಯ ವಿವಿಧೆಡೆ ಸುರಿದ ಮಳೆ ಕೊಂಚ ನೆಮ್ಮದಿ ಮೂಡಿಸಿದೆ.

ಅತಿಹೆಚ್ಚು ವರ್ಷಧಾರೆಯಾಗುವ ಭಾಗಮಂಡಲದಲ್ಲಿ ವರ್ಷದ ಮೊದಲ ಮಳೆ ಭಾನುವಾರ ಸುರಿದಿದೆ. ಚೇರಂಬಾಣೆ, ನಾಪೋಕ್ಲು, ಎಮ್ಮೆಮಾಡು, ನೆಲಜಿ, ಕಾರುಗುಂದ, ಕಡಿಯತ್ತೂರು ಸುತ್ತಮುತ್ತಲ ಗ್ರಾಮಗಳಲ್ಲಿ ಸಾಧಾರಣ ಮಳೆಯಾಗಿದ ಬಗ್ಗೆ ವರದಿಯಾಗಿದೆ. ಮಳೆಯನ್ನೇ ಕಾಯುತ್ತಾ ಆಕಾಶ ನೋಡುತ್ತಿದ್ದ ಕಾಫಿ ಬೆಳೆಗಾರರಿಗೆ ತುಸು ನೆಮ್ಮದಿ ತಂದಿದೆ. ಒಂದೆಡೆ ಬತ್ತಿ ಹೋಗಿದ್ದ ಕೆರೆಗಳಿಂದ ನೀರು ಹಾಯಿಸಲಾಗದ ಸ್ಥಿತಿಯಲ್ಲಿದ್ದ ಬೆಳೆಗಾರರು ಇದೀಗ ಸುರಿದ ಮಳೆಯಿಂದ ಅಲ್ಪ ನಿರಾಳರಾಗಿದ್ದಾರೆ. ಇದೇ ರೀತಿ ಮತ್ತೆರಡು ಮಳೆ ಬರುವಂತಾಗಲಿ ಎಂದು ಆಶಿಸುತ್ತಿದ್ದಾರೆ.

ಇಗ್ಗುತ್ತಪ್ಪನಿಗೆ ಪೂಜೆ: ಕಾವೇರಿಯ ಉಗಮ ಸ್ಥಾನ ಕೊಡಗು ಜಿಲ್ಲೆಯಲ್ಲಿ ಉಷ್ಣಾಂಶ ಮಿತಿ ಮೀರುತ್ತಿರುವುದರಿಂದ ನದಿ ಮತ್ತು ಜಲಮೂಲಗಳು ಬತ್ತಿ ಹೋಗಿವೆ. ಗಿಡಮರಗಳು ಒಣಗಲು ಆರಂಭಗೊಂಡು ಕೃಷಿ ಫಸಲಿಗೆ ಹಾನಿಯಾಗಿದೆ. ಪರಿಸ್ಥಿತಿ ಕೈಮೀರುತ್ತಿರುವುದರಿಂದ ಕೊಡಗಿನ ಮಳೆ ದೇವರೆಂದೇ ನಂಬಿಕೊಂಡು ಬಂದಿರುವ ಪಾಡಿ ಶ್ರೀ ಇಗ್ಗುತ್ತಪ್ಪನಿಗೆ ಸ್ಥಳೀಯರು ಹಾಗೂ ಸಂಘ–ಸಂಸ್ಥೆಯವರು ಮಳೆಗಾಗಿ ಪ್ರಾರ್ಥಿಸಿ ವಿಶೇಷ ಪೂಜೆ, ಅಭಿಷೇಕ ನೆರವೇರಿಸಿದರು.

ಉತ್ತಮ ಮಳೆ: ನಾಪೋಕ್ಲು ಸುತ್ತಮುತ್ತಲ ಗ್ರಾಮಗಳಲ್ಲಿ ಭಾನುವಾರ ಮಧ್ಯಾಹ್ನ ಉತ್ತಮ ಮಳೆಯಾಗಿದೆ. ಬಲ್ಲಮಾವಟಿ 90 ಸೆಮೀ, ದೊಡ್ಡ ಪುಲಿಕೋಟು 86 ಸೆಮೀ, ಕೂರುಳಿ, ಎಮ್ಮೆಮಾಡು, ಕಾರ್ಗುಂದ 35 ಸೆಮೀ ಮಳೆ ಮಳೆಯಾಗಿದೆ. ಭಾಗಮಂಡಲ, ಚೇರಂಬಾಣೆ ವ್ಯಾಪ್ತಿಯಲ್ಲಿ ಮೊದಲ ಮಳೆ ಸುರಿದಿದ್ದು, ರೈತರು ಸಂತಸಗೊಂಡಿದ್ದಾರೆ. ವಿವಿಧ ಭಾಗಗಳಲ್ಲಿ ಸುರಿದ ಮಳೆಯಿಂದ ಭೂಮಿಗೆ ತಂಪೆರದಂತಾಗಿದೆ.



ಚೇರಂಬಾಣೆ ವ್ಯಾಪ್ತಿಯಲ್ಲಿ ಮಳೆ.

ಮೈಸೂರಿಗೆ ಮಹಾರಾಜ, ಚಾ.ನಗರಕ್ಕೆ ಬಾಲರಾಜ



ಚಾಮರಾಜನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮೈಸೂರು ಗ್ರಾಮಾಂತರ ಜಿಲ್ಲಾ ವಕ್ತಾರ ದಯಾನಂದ ಪಾಟೀಲ್ ಮಾತನಾಡಿದರು.

ಚಾಮರಾಜನಗರ, ಏ.7–ಮೈಸೂರು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಮರಾಜ ಒಡೆಯರ್ ಹಾಗೂ ಚಾಮರಾಜನಗರದಲ್ಲಿ ಎಸ್. ಬಾಲರಾಜು ಜಯಗಳಿಸಲಿದ್ದು, ಮೈಸೂರಿನಲ್ಲಿ ಮಹಾರಾಜ ಹಾಗೂ ಚಾ.ನಗರದಲ್ಲಿ ಬಾಲರಾಜ ಆಯ್ಕೆಯಾಗಲಿದ್ದಾರೆ ಎಂದು ಬಿಜೆಪಿ ಮೈಸೂರು ಗ್ರಾಮಾಂತರ ಜಿಲ್ಲಾ ವಕ್ತಾರ ದಯಾನಂದ ಪಾಟೀಲ್ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶಾದ್ಯಂತ ಪ್ರಧಾನಿ ನರೇಂದ್ರ ಮೋದಿ ಅಲೆ ಇದೆ. ಮತ್ತೆ ಮೋದಿ ಪ್ರಧಾನಿಯಾಗಬೇಕೆಂದು ಯುವ ಜನಾಂಗ, ಮಹಿಳೆಯರು ಹಾಗೂ ಪ್ರಬುದ್ಧ ಮತದಾರರು ನಿಶ್ಚಯ ಮಾಡಿದ್ದಾರೆ. ಹೀಗಾಗಿ 400ಕ್ಕೂ ಹೆಚ್ಚು ಸ್ಥಾನಗಳಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಅಭ್ಯರ್ಥಿಗಳು ಜಯಗಳಿಸಲಿದ್ದಾರೆ ಎಂದರು.

ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಕಳೆದ 10 ವರ್ಷಗಳ ಅವಧಿಯಲ್ಲಿ ದೇಶದಲ್ಲಿ ಹಲವು ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸಿದೆ. 2014ರ ನಂತರ ಬಂದ ಮೋದಿ ಸರ್ಕಾರ ದೇಶದ ಪ್ರತಿ ಹಳ್ಳಿಗಳಲ್ಲಿ ಶೌಚಾಲಯ ನಿರ್ಮಾಣ, ಕುಡಿಯುವ ನೀರು ಪೂರೈಕೆ ಸೇರಿದಂತೆ ಅನೇಕ ಜನಪರ ಕಾರ್ಯಗಳನ್ನು ಮಾಡಿದೆ. ಆದರೆ, ಸಿದ್ದರಾಮಯ್ಯ ಎಸ್ಸಿ, ಎಸ್ಟಿ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ದೂರಿದರು. ದೇಶದಲ್ಲಿ 10 ಕೋಟಿ ಸಿಲಿಂಡರ್ ವಿತರಣೆ, ಜಲಜೀವನ್ ಮಿಷನ್ ಯೋಜನೆಯಡಿ 14 ಕೋಟಿ ಜನರಿಗೆ ಕುಡಿಯುವ ನೀರು, 12 ಕೋಟಿ ಶೌಚಾಲಯ ನಿರ್ಮಾಣ ಮಾಡಿದೆ. ಈ ಬಾರಿ 400ಕ್ಕೂ ಹೆಚ್ಚು ಸ್ಥಾನ ಗಳಿಸುವ ಮೂಲಕ ಬಿಜೆಪಿ ಕೇಂದ್ರದಲ್ಲಿ ಮತ್ತೆ ಅಧಿಕಾರಕ್ಕೆ ಬರಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾ ವಕ್ತಾರ ಕಾಡಹಳ್ಳಿ ಶಿವರುದ್ರಸ್ವಾಮಿ, ಚುಡಾ ಮಾಜಿ ಅಧ್ಯಕ್ಷ ಕುಲಗಾಣ ಶಾಂತಮೂರ್ತಿ, ಸಹ ವಕ್ತಾರ ಎನ್.ಮಂಜುನಾಥ್, ಜಿಲ್ಲಾ ಮಾಧ್ಯಮ ಸಂಚಾಲಕ ವೀರೇಂದ್ರ, ಸಹ ಸಂಚಾಲಕ ಅಶ್ವಿನ್ ಇದ್ದರು.

ಈ ಚುನಾವಣೆ ಸಂವಿಧಾನದ ಅಳಿವು ಉಳಿವಿನ ಪ್ರಶ್ನೆ

• ಹೆಚ್ಚಿನ ಬಹುಮತದಿಂದ ಕೈ ಅಭ್ಯರ್ಥಿ ಗೆಲ್ಲಿಸಿ • ಸಚಿವ ಡಾ.ಎಚ್.ಸಿ.ಮಹದೇವಪ್ಪ ಮನವಿ



ಚಾ.ನಗರದ ವರ್ತಕರ ಭವನದಲ್ಲಿ ನಡೆದ ಮಾದಿಗ ಸಮುದಾಯದ ಕಾಂಗ್ರೆಸ್ ಮುಖಂಡರ ಸಭೆಯಲ್ಲಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಮಾತನಾಡಿದರು. ಈ ವೇಳೆ ಪಿ.ಮರಿಸ್ವಾಮಿ, ಎ.ಎಸ್. ಗುರುಸ್ವಾಮಿ, ಮಹಮದ್ ಅಸ್ಗರ್, ಇತರರು ಉಪಸ್ಥಿತರಿದ್ದರು.

ಚಾಮರಾಜನಗರ, ಏ.7–ಈ ಬಾರಿಯ ಲೋಕಸಭೆ ಚುನಾವಣೆ ಸಂವಿಧಾನದ ಅಳಿವು ಉಳಿವಿನ ಪ್ರಶ್ನೆಯಾಗಿದೆ. ಹೀಗಾಗಿ ಸಂವಿಧಾನ ಪರವಾಗಿರುವ ಕಾಂಗ್ರೆಸ್ ಅನ್ನು ಗೆಲ್ಲಿಸಬೇಕು ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಮನವಿ ಮಾಡಿದರು.

ನಗರದ ವರ್ತಕರ ಭವನದಲ್ಲಿ ನಡೆದ ಮಾದಿಗ ಸಮುದಾಯದ ಕಾಂಗ್ರೆಸ್ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಸಂವಿಧಾನ ಆಶಯಗಳನ್ನು ಜಾರಿಗೊಳಿಸುವುದು ನಮ್ಮದಾಗಿದೆ. ನಿಮ್ಮ ಪರ ಧ್ವನಿ ಮಾಡುವ ಕಾಂಗ್ರೆಸ್ ಅನ್ನು ಗೆಲ್ಲಿಸಿ, ಪ್ರಜಾಪ್ರಭುತ್ವ ಹಾಗೂ ಸಂವಿಧಾನ ಉಳಿಸುವ ಪ್ರಶ್ನೆಯಾಗಿದೆ ಎಂದರು.

ನಾವೆಲ್ಲರೂ ಅಂಬೇಡ್ಕರ್ ಅನುಯಾಯಿಗಳು. ಎಡಗೈ, ಬಲಗೈ ಎಂಬ ಬೇಧಭಾವ ಇಲ್ಲ. ನಮ್ಮದೇ ಒಂದೇ ಕೈ. ಅದು ಅಂಬೇಡ್ಕರ್ ಕೈ ಆಗಿದೆ. ಅಂಬೇಡ್ಕರ್ ಅವರ ಆಶಯದಂತೆ ಎಲ್ಲಾ ವರ್ಗದವರಿಗೂ ಸಾಮಾಜಿಕ ನ್ಯಾಯ ದೊರಬೇಕು ಎಂಬುವುದು ನಮ್ಮೆಲ್ಲರ ಒತ್ತಾಸೆ. ಕಾಂಗ್ರೆಸ್ ಅಂಬೇಡ್ಕರ್ ಅವರ ಸಂವಿಧಾನದಡಿಯಲ್ಲಿ ನಂಬಿಕೆಯನ್ನುಟ್ಟುಕೊಂಡು ಕೆಲಸ ಮಾಡುತ್ತಿದೆ. ಆದರೆ, ಬಿಜೆಪಿ ಸಂವಿಧಾನ ವಿರುದ್ಧವಾಗಿದ್ದು, ಸಂವಿಧಾನ ಬದಲಾಯಿಸುವ ಮಾತುಗಳನ್ನಾಡುತ್ತಿದೆ.

> ▶ ಕಾಂಗ್ರೆಸ್ ನುಡಿದಂತೆ ನಡೆದ ಪಕ್ಷವಾಗಿದೆ. ಐದು ಗ್ಯಾರಂಟಿಗಳನ್ನು ಜಾರಿ ಮಾಡುವ ಮೂಲಕ ಎಲ್ಲಾ ವರ್ಗದವರಿಗೆ ಸಾಮಾಜಿಕ ನ್ಯಾಯ ಕಲ್ಪಿಸಿದೆ. ಮಾದಿಗ ಸಮುದಾಯಕ್ಕೆ ಕಾಂಗ್ರೆಸ್ ಕೊಡುಗೆ ಅಪಾರ. ನಾನು ವಿಧಾನ ಪರಿಷತ್ ಸದಸ್ಯನಾಗಲು ಕಾಂಗ್ರೆಸ್ ಕಾರಣ. ಅದೇ ರೀತಿ ಬಹಳಷ್ಟು ಯೋಜನೆಗಳನ್ನು ಮಾದಿಗ ಸಮುದಾಯ ಅಭಿವೃದ್ಧಿಗೆ ನೀಡಿದೆ. ಹೀಗಾಗಿ ಮಾದಿಗ ಸಮುದಾಯದ ಬಂಧುಗಳು ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಅವರನ್ನು ಅತ್ಯಧಿಕ ಮತಗಳ ಅಂತರದಲ್ಲಿ ಗೆಲ್ಲಿಸಬೇಕು.
> –ಡಾ.ತಿಮ್ಮಯ್ಯ, ವಿಧಾನಪರಿಷತ್ ಸದಸ್ಯ

ಇದರಿಂದ ಜಾಗೃತರಾಗಿ ಕಾಂಗ್ರೆಸ್ ಬೆಂಬಲಿಸಿ, ಸಂವಿಧಾನ ಸಂರಕ್ಷಣೆಗೆ ನಿಲ್ಲಬೇಕು ಎಂದು ತಿಳಿಸಿದರು.

ಎಸ್‌ಇಪಿ, ಟಿಎಸ್‌ಪಿ ಕಾಯ್ದೆ ಸಂವಿಧಾನ ಪೂರಕವಾಗಿದ್ದು, ಇದನ್ನು 2013ರಲ್ಲಿ ಸಚಿವನಾಗಿದ್ದಾಗ ಆಂಜನೇಯ ಅವರ ಸಹಕಾರದೊಂದಿಗೆ ಜಾರಿ ಮಾಡಿದ್ದೇವು. ಇದರಿಂದ ದಲಿತರ ಕಾಲೋನಿಗಳು ಅಭಿವೃದ್ಧಿಯಾದವು. ನಮ್ಮ ಸರ್ಕಾರ ಇಡೀ ದೇಶದಲ್ಲಿ ಮೊಟ್ಟ ಮೊದಲ ಅಂಬೇಡ್ಕರ್ ಜಾಗೃತಿ ಜಾಥಾ ಆಯೋಜನೆ ಮಾಡಿತ್ತು. ಇದು ಇತರೇ ರಾಜ್ಯಗಳಿಗೆ ಮಾದರಿಯಾಗಿದೆ. ಇದರ ಉದ್ದೇಶ ಸಮುದಾಯಗಳು ಗಟ್ಟಿಯಾಗಬೇಕೆಂಬದಾಗಿದೆ ಎಂದರು.

ಸಭೆಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ, ಬ್ಲಾಕ್ ಅಧ್ಯಕ್ಷರಾದ ಎ.ಎಸ್. ಗುರುಸ್ವಾಮಿ, ಮಹಮದ್ ಅಸ್ಗರ್, ಜಿಪಂ ಮಾಜಿ ಸದಸ್ಯ ಕೆ.ಪಿ.ಸದಾಶಿವಮೂರ್ತಿ, ರಾಜ್ಯ ಉಪಾಧ್ಯಕ್ಷ ಸಿ.ಎ.ಮಹದೇವಶೆಟ್ಟಿ, ಅಂಬೇಡ್ಕರ್ ಅಭಿವೃದ್ಧಿ ನಿಗಮದ ಮಾಜಿ ನಿರ್ದೇಶಕ ಶಿವಮೂರ್ತಿ, ಮುಖಂಡರಾದ ಎಚ್.ಎಚ್.ನಾಗರಾಜು, ಎನ್. ವಿನೋದ್, ಗುಂಡ್ಲುಪೇಟೆ ದೇವರಾಜು, ಸೇವಾದಳದ ಜಿಲ್ಲಾಧ್ಯಕ್ಷ ಹೊಂಗನೂರು ಜಯರಾಜ್, ಕೊಳ್ಳೇಗಾಲ ಬಾಲರಾಜು, ಸೋಮು, ಪಾಳ್ಯ ರಾಚಪ್ಪ, ಬೂದಬಾಳು ಮಹದೇವ್, ಸುರೇಶ್, ಹೊಗ್ಯಂ ಸಂಪತ್ತು, ವೀರಪ್ಪ, ಗುಂಡ್ಲುಪೇಟೆ ಪುರಸಭಾ ಮಾಜಿ ಅಧ್ಯಕ್ಷ ರಂಗಸ್ವಾಮಿ, ನಿಟ್ರೆ ಮಹದೇವ್, ಯಳಂದೂರು ರಾಜಣ್ಣ, ಬೂದಿತಿಟ್ಟು ಇದ್ದರು.

ವಿವಿಧ ಗ್ರಾಪಂನಲ್ಲಿ ಕಾಂಗ್ರೆಸ್ ಪರ ಪುಟ್ಟರಂಗಶೆಟ್ಟಿ ಪ್ರಚಾರ



ಮಂಗಲ ಹೊಸೂರು ಗ್ರಾಮದಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಪರ ಮತ ಯಾಚಿಸಿದರು.

ಚಾಮರಾಜನಗರ, ಏ.7– ತಾಲೂಕಿನ ಮಂಗಲ ಹಾಗೂ ಬೋಗಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಪರ ಪ್ರಚಾರ ನಡೆಸಿದರು.

ಮಂಗಲ, ಮಂಗಲ ಹೊಸೂರು, ಹುಲ್ಲೇಪುರ, ಮಹಾಂತಾಳಪುರ, ಕರಡಿಮೋಳೆ, ಯಡಿಯೂರು, ಸಪ್ಪಯ್ಯನಪುರ, ಬೋಗಾಪುರ ಗಾಪಂ ವ್ಯಾಪ್ತಿಯ ವಿವಿಧ ಗ್ರಾಮಗಳ ಮನೆ ಮನೆಗೆ ತೆರಳಿ ಕಾಂಗ್ರೆಸ್‌ಗೆ ಮತ ನೀಡುವಂತೆ ಮನವಿ ಮಾಡಿದರು.

ನಂತರ ಮಾತನಾಡಿದ ಶಾಸಕರು, ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಮರಾಜನಗರ ಜಿಲ್ಲೆಯ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡುತ್ತಿದ್ದಾರೆ. ಅನ್ನಭಾಗ್ಯ, ಶಕ್ತಿ ಯೋಜನೆ, ಯುವನಿಧಿ, ಗೃಹಜ್ಯೋತಿ, ಗೃಹಲಕ್ಷ್ಮಿ ಗ್ಯಾರಂಟಿ ಯೋಜನೆಗಳನ್ನು ಸಮರ್ಪಕವಾಗಿ ಜಾರಿಗೊಳಿಸಿರುವಂತಹ ಏಕೈಕ ಪಕ್ಷ ಎಂದರೆ ಅದು ಕಾಂಗ್ರೆಸ್ ಮಾತ್ರ. ಯಾವಾಗಲೂ ಜನಪರ, ಬಡವರ ಪರವಾಗಿರುವ ಪಕ್ಷವಾಗಿದೆ. ಎಲ್ಲರೂ ಕಾಂಗ್ರೆಸ್‌ಗೆ ಮತ ನೀಡಬೇಕು ಎಂದು ಮನವಿ ಮಾಡಿದರು.

ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಚಿಕ್ಕಮಹದೇವ್, ಆರ್.ಮಹದೇವ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎ.ಎಸ್.ಗುರುಸ್ವಾಮಿ, ಮಹಮದ್‌ಅಸ್ಗರ್, ಹಿಂದುಳಿದ ವರ್ಗಗಳ ರಾಜ್ಯ ಪ್ರಧಾನ ಕಾರ್ಯದರ್ಶಿ ಸಿ.ಎ.ಮಹದೇವಶೆಟ್ಟಿ, ಕೋಡಿಮೋಳೆ ಪ್ರಕಾಶ್, ಎಪಿಎಂಸಿ ಮಾಜಿ ಅಧ್ಯಕ್ಷ ನಾಗೇಂದ್ರ, ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ್, ನಾಗಯ್ಯ, ಕಾರ್ಮಿಕ ವಿಭಾಗದ ಜಿಲ್ಲಾ ಕಾರ್ಯಾಧ್ಯಕ್ಷ ಮೂರ್ತಿ, ಮಂಗಲ ಗ್ರಾಪಂ ಅಧ್ಯಕ್ಷ ಅಣ್ಣಪ್ಪಸ್ವಾಮಿ, ಮಾಜಿ ಅಧ್ಯಕ್ಷ ಶಿವಣ್ಣ, ನಂಜುಂಡಶೆಟ್ಟಿ, ಶಿವಣ್ಣ, ಮಹದೇವಸ್ವಾಮಿ, ದೊರೆಸ್ವಾಮಿ, ಅಕ್ಷಯ್, ಮೋಹನ್ ನಗು, ರಾಜೀವ್, ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷ ಕೆಲ್ಲಂಬಳ್ಳಿ ಸೋಮು, ತಾಪಂ ಮಾಜಿ ಸದಸ್ಯ ಮಹಾಲಿಂಗು, ನಂಜುಂಡಯ್ಯ, ಎಂ.ಕುಮಾರ್ ಮತ್ತಿತರರಿದ್ದರು.

ಮತಯಾಚನೆ: ಚಾಮರಾಜನಗರ ತಾಲೂಕಿನ ವಿವಿಧ ಗ್ರಾಮಗಳಿಗೆ ಭೇಟಿ ನೀಡಿದ ಶಾಸಕ ಸಿ.ಪುಟ್ಟರಂಗಶೆಟ್ಟಿ, ಬೆಂಬಲಿಗರೊಂದಿಗೆ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಪರ ಮತಯಾಚಿಸಿದರು.

ತಾಲೂಕಿನ ಕೂಡೂರು, ಮಾದಾಪುರ ಸೇರಿದಂತೆ ಹಲವು ಗ್ರಾಮಗಳಿಗೆ ಭೇಟಿ ನೀಡಿ, ಗ್ರಾಮ ದೇವತೆಗೆ ಪೂಜೆ ಸಲ್ಲಿಸಿ ನಂತರ ಮತಯಾಚಿಸಿದರು.

ಮಾದಾಪುರ ಗ್ರಾಪಂ ಅಧ್ಯಕ್ಷ ರೂಪೇಶ್, ಆಲೂರು ಎಪಿಎಂಸಿ ಸದಸ್ಯ ಆಲೂರು ಪ್ರತಾಪ್, ಕಾಗಲವಾಡಿ ಚಂದ್ರು, ಶಿವಕುಮಾರ್, ಕಾಗಲವಾಡಿ ಚಂದ್ರು, ಕೋಡಿಮೋಳೆ ಪ್ರಕಾಶ್, ತಾಪಂ ಮಾಜಿ ಸದಸ್ಯ ಮಹದೇವಶೆಟ್ಟಿ, ಕಾರ್ಮಿಕ ವಿಭಾಗದ ಜಿಲ್ಲಾ ಕಾರ್ಯಾಧ್ಯಕ್ಷ ಮೂರ್ತಿ ದೊಡ್ಡರಾಯಪೇಟೆ, ರವಿಗೌಡ, ಬೂದಿತಿಟ್ಟು ಲಿಂಗರಾಜು, ಸಿದ್ದರಾಜು, ಶಿವಣ್ಣ, ನಂಜುಂಡಪ್ಪ, ಮಹದೇವಶೆಟ್ಟಿ, ಮಹೇಶ್, ಸಿದ್ದರಾಜು ಮತ್ತಿತರರಿದ್ದರು.

ಮತದಾನ ಜಾಗೃತಿ


ಚಾಮರಾಜನಗರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಜಿಲ್ಲಾ ಸ್ವೀಪ್ ಸಮಿತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಶೇಷಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ವಿನಾಯಕ ಎಜುಕೇಷನ್ ಸೊಸೈಟಿ ಹಾಗೂ ಸೃಷ್ಟಿ ಚೇತನ ಹಿರಿಯ ನಾಗರಿಕರ ಹಗಲು ಯೋಗ ಕ್ಷೇಮ ಕೇಂದ್ರದ ಸಹಯೋಗದಲ್ಲಿ ನಗರದ ಹೌಸಿಂಗ್ ಬೋರ್ಡ್ (ಪಾರ್ಕ್ ಹತ್ತಿರ) ಬಳಿ ಸೃಷ್ಟಿ ಚೇತನ ಹಿರಿಯ ನಾಗರಿಕರ ಹಗಲು ಯೋಗ ಕ್ಷೇಮ ಕೇಂದ್ರದಲ್ಲಿ ಮತದಾನ ಜಾಗೃತಿ ಕಾರ್ಯಕ್ರಮ ನಡೆಯಿತು.

ಇದೇ ವೇಳೆ ಮಾತನಾಡಿದ ಜಿಲ್ಲಾ ಸ್ವೀಪ್ ಸಮಿತಿ ನೋಡಲ್ ಅಧಿಕಾರಿ ಪಿ.ಲಕ್ಷ್ಮೀ, ಹಿರಿಯ ನಾಗರಿಕರು ಕಡ್ಡಾಯವಾಗಿ ಮತದಾನ ಮಾಡಬೇಕು. ನೈತಿಕ ಮತದಾನವನ್ನು ಬೆಂಬಲಿಸಬೇಕು. ಮತದಾನದ ದಿನವನ್ನು ಪ್ರಜಾಪ್ರಭುತ್ವದ ಹಬ್ಬವಾಗಿ ಆಚರಿಸೋಣ. ಮತದಾನ ವರದಾನವಾಗಿದ್ದು, ಕಡ್ಡಾಯವಾಗಿ ಎಲ್ಲರೂ ಮತ ಹಾಕಿ ಎಂದರು.

ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಸುರೇಶ್, ಸೃಷ್ಟಿ ಚೇತನ ಹಿರಿಯ ನಾಗರಿಕರ ಹಗಲು ಯೋಗ ಕ್ಷೇಮ ಕೇಂದ್ರದ ಯೋಜನಾ ಸಂಯೋಜಕ ನಿಂಗರಾಜು, ಇತರರು ಇದ್ದರು.

ದೇಶದ ಸುಭದ್ರತೆಗಾಗಿ ಮತ್ತೆ ಮೋದಿ ಸರ್ಕಾರ ಅನಿವಾರ್ಯ

ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಮಂಗಲ ಶಿವಕುಮಾರ್ ಅಭಿಮತ



ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜ್ ಪರ ಕೊಳ್ಳೇಗಾಲ ಕ್ಷೇತ್ರದ ಕುಂತೂರುಮೋಳೆ ಗ್ರಾಮದಲ್ಲಿ ಪ್ರಚಾರ ನಡೆಸಲಾಯಿತು.

ಚಾಮರಾಜನಗರ, ಏ.7– ದೇಶದ ಸುಭದ್ರತೆಗಾಗಿ ಮತ್ತೆ ನರೇಂದ್ರಮೋದಿ ಪ್ರಧಾನಿಯಾಗುವುದು ಅನಿವಾರ್ಯವಾಗಿದೆ ಎಂದು ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಮಂಗಲ ಶಿವಕುಮಾರ್ ಹೇಳಿದರು.

ಚಾಮರಾಜನಗರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜ್ ಪರ ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದ ಕುಂತೂರುಮೋಳೆ ಗ್ರಾಮದಲ್ಲಿ ಪ್ರಚಾರ ನಡೆಸಿ ಮಾತನಾಡಿದ ಅವರು, ದೇಶದ ಸುಭದ್ರತೆ ಹಾಗೂ ರಕ್ಷಣೆಗೆ ಮೋದಿ ಸರ್ಕಾರ ಅನಿವಾರ್ಯ. ಅನೇಕ ವರ್ಷಗಳಿಂದ ಹಿಂದುಗಳ ಭಾವನೆಯಂತೆ ರಾಮಮಂದಿರ ನಿರ್ಮಾಣ ಅದರಲ್ಲೂ ಅಯೋಧ್ಯೆಯಲ್ಲಿ ಭಗೀರಥ ವಂಶಸ್ಥ ರಾಮನ ಮಂದಿರ ನಿರ್ಮಾಣ ಉಪ್ಪಾರರ ಘನತೆಯನ್ನು ಹೆಚ್ಚಿಸಿದೆ ಎಂದರು.

ಅಭ್ಯರ್ಥಿ ಎಸ್.ಬಾಲರಾಜು ಸರಳ, ಸಜ್ಜನಿಕೆ ವ್ಯಕ್ತಿಯಾಗಿದ್ದು, ಅವರನ್ನು ಗೆಲ್ಲಿಸುವ ಮೂಲಕ ಮೋದಿಯವರ ಕೈ ಬಲಪಡಿಸಬೇಕು. ಆ ಮೂಲಕ ದೇಶವನ್ನು ಬಲಪಡಿಸಿ ಎಂದರು.

ಓಬಿಸಿ ಮೋರ್ಚಾ ಜಿಲ್ಲಾಧ್ಯಕ್ಷ ವೆಂಕಟೇಶ್, ಪ್ರಧಾನ ಕಾರ್ಯದರ್ಶಿ ಸೋಮಣ್ಣ ಉಪ್ಪಾರ, ರೈಲ್ವೆ ಸಲಹಾ ಸಮಿತಿಯ ಸದಸ್ಯ ನಟರಾಜೇಗೌಡ, ಜಿಲ್ಲಾ ಉಪಾಧ್ಯಕ್ಷ ಟಗರಪುರ ರೇವಣ್ಣ, ತಾಪಂ ಮಾಜಿ ಸದಸ್ಯ ಮರಿಸ್ವಾಮಿ, ಕುಣಗಳ್ಳಿ ರಘು, ಸೋಮಣ್ಣ ಇತರರಿದ್ದರು.

ಏ.22ರಿಂದ ಯುವ ನಾಯಕತ್ವ ತರಬೇತಿ ಶಿಬಿರ

ಮೈಸೂರು,ಏ.7–ಮೈಸೂರಿನ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಏ.22 ರಿಂದ 28ರವರೆಗೆ ಯುವ ನಾಯಕತ್ವ ತರಬೇತಿ ಶಿಬಿರವನ್ನು ಆಯೋಜಿಸಲಾಗಿದೆ.

ಶಿಬಿರವು 8 ದಿನಗಳ ವಸತಿಸಹಿತ ತರಬೇತಿ ಕಾರ್ಯಕ್ರಮ. ಯುವ ಜನತೆಯ ಅಭ್ಯುದಯಕ್ಕೆ ಪೂರಕವಾಗಿದೆ. ಮಾಹಿತಿಗೆ ಜಿ.ಎ.ಸುಬ್ಬುಕೃಷ್ಣ (ಆರ್ಟ್ ಆಫ್ ಲಿವಿಂಗ್ ಶಿಕ್ಷಕ) 98451 73779 ಹೆಚ್.ಎಲ್.ವಿದ್ಯಾ (ಆರ್ಟ್ ಆಫ್ ಲಿವಿಂಗ್ ಶಿಕ್ಷಕಿ) 9110256623, ಮಹೇಶ್ ದುದ್ದುಗೆರೆ 9591652423, ಹೇಮಂತ್‌ಕುಮಾರ್ 7892957431 ಸಂಪರ್ಕಿಸಿ.

ಒಂದನೇ ಪುಟದಿಂದ

ಏ.14ಕ್ಕೆ ರಾಜ್ಯಕ್ಕೆ ಪ್ರಧಾನಿ ಮೋದಿ

ಬಿಜೆಪಿ ರೋಡ್ ಶೋ ಮಾರ್ಗದ ಮ್ಯಾಪ್ ಅನ್ನು ಸಿದ್ಧಪಡಿಸಿದೆ ಈ ಸಂಬಂಧ ಚಿಕ್ಕಬಳ್ಳಾಪುರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಡಾ. ಕೆ.ಸುಧಾಕರ್, ಏ.14ರಂದು ಪ್ರಧಾನಿ ಮೋದಿ ರಾಜ್ಯದಲ್ಲಿ ಪ್ರಚಾರ ಮಾಡಲಿದ್ದು, ದೇವನಹಳ್ಳಿ ಬಳಿ ಬೃಹತ್ ಸಮಾವೇಶ ಆಯೋಜಿಸಲಾಗಿದೆ. ಈ ಸಮಾವೇಶದಲ್ಲಿ 2 ಲಕ್ಷಕ್ಕೂ ಹೆಚ್ಚು ಜನ ಸೇರುವ ನಿರೀಕ್ಷೆ ಇದೆ ಎಂದರು. ಲೋಕಸಭಾ ಚುನಾವಣೆ ದಿನಾಂಕ ಪ್ರಕಟವಾದ ಬಳಿಕ ಕೇಂದ್ರ ಗೃಹ ಸಚಿವ ಅಮಿತ್ ಷಾ ರಾಜ್ಯಕ್ಕೆ ಆಗಮಿಸಿದ್ದರು. ಈ ವೇಳೆ ಬೆಂಗಳೂರಿನಲ್ಲಿ ವಿವಿಧ ಲೋಕಸಭಾ ಕ್ಷೇತ್ರಗಳ ಮುಖಂಡರ ಜೊತೆ ಸರಣಿ ಸಭೆಗಳನ್ನು ನಡೆಸಿದ್ದರು. ಅಲ್ಲದೇ ರಾಜ್ಯದಲ್ಲಿ 28 ಕ್ಷೇತ್ರಗಳನ್ನು ಗೆಲ್ಲುವ ಬಗ್ಗೆ ರಾಜ್ಯ ಬಿಜೆಪಿ ನಾಯಕರಿಗೆ ಸಲಹೆ–ಸೂಚನೆಗಳನ್ನು ನೀಡಿದ್ದರು. ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರಕ್ಕೊಳಪಟ್ಟ ಚನ್ನಪಟ್ಟಣದಲ್ಲಿ ರೋಡ್ ಶೋ ನಡೆಸಿದರು. ಬಿಜೆಪಿ ಅಭ್ಯರ್ಥಿ ಡಾ. ಸಿ.ಎನ್.ಮಂಜುನಾಥ್ ಪರ ಪ್ರಚಾರ ಮಾಡಿದ್ದರು. ಇದಾದ ಬಳಿಕ ಏ.14ಕ್ಕೆ ಪ್ರಧಾನಿ ಮೋದಿ ರಾಜ್ಯಕ್ಕೆ ಆಗಮಿಸುತ್ತಿರುವುದು ಬಿಜೆಪಿ ನಾಯಕರಲ್ಲಿ ಮತ್ತಷ್ಟು ಹುರುಪು ನೀಡಿದೆ.

ಇನ್ನೂ ಮೂರು ದಿನ ಬಿಸಿಗಾಳಿ

ದೇಹದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಸಾಧ್ಯತೆ ಇದೆ. ಹಾಗಾಗಿ, ನಿರ್ಮಾಣ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರು ಅಗತ್ಯ ಎಚ್ಚರಿಕೆ ತೆಗೆದುಕೊಳ್ಳುವಂತೆ ಕಾರ್ಮಿಕ ಇಲಾಖೆ ಸಲಹೆ ಕೊಟ್ಟಿದೆ. ಯಥೇಚ್ಛವಾಗಿ ನೀರು ಕುಡಿಯಬೇಕು, ಕೆಲಸದ ಸ್ಥಳಗಳಲ್ಲಿ ಸಾಧ್ಯವಾದಷ್ಟೂ ನೆರಳಿನ ವ್ಯವಸ್ಥೆ ಮಾಡಿಕೊಳ್ಳಬೇಕು, ಬಿಸಿಲಿನಲ್ಲಿ ಕೆಲಸ ಮಾಡುವುದನ್ನು ತಪ್ಪಿಸಬೇಕು, ದೇಹದಲ್ಲಿ ನೀರಿನ ಅಂಶ ಕಡಿಮೆಯಾಗದಂತೆ ಎಚ್ಚರ ವಹಿಸಬೇಕು, ಸಮಯಕ್ಕೆ ಸರಿಯಾಗಿ ಆರೋಗ್ಯಕರ ಆಹಾರ ಸೇವಿಸಬೇಕು ಎಂದು ಇಲಾಖೆ ಹಲವು ಸಲಹೆಗಳನ್ನು ನೀಡಿದೆ. ಏನಾದರೂ ಅನಾಹುತವಾದರೆ 155214 ಸಹಾಯವಾಣಿಗೆ ಕರೆ ಮಾಡಬಹುದು ಎಂದು ಹವಾಮಾನ ಇಲಾಖೆಯ ವಿಜ್ಞಾನಿ ಎ.ಪ್ರಸಾದ್ ಹೇಳಿದ್ದಾರೆ.

10 ಮಂದಿಗೆ ಕಾಲರಾ ದೃಢ

ಕಾಲರಾ ಇರುವುದು ದೃಢಪಡುತ್ತಿದ್ದಂತೆ ಬೆಂಗಳೂರು ಮೆಡಿಕಲ್ ಕಾಲೇಜಿನ ಹಾಸ್ಟೆಲ್ ಕಿಚನ್ ಬಂದ್ ಮಾಡಲಾಗಿದೆ. ವೈದ್ಯಕೀಯ ವಿದ್ಯಾರ್ಥಿಗಳಿಗೆ ವಿಕ್ಟೋರಿಯಾ ಆಸ್ಪತ್ರೆ ಕಿಚನ್‌ನಿಂದ ತಿಂಡಿ, ಊಟ ಸಪ್ಲೈ ಮಾಡಲಾಗುತ್ತಿದೆ.ಇಂದು ಬೆಳಗ್ಗೆ ವಿದ್ಯಾರ್ಥಿಗಳಿಗೆ ಬ್ರೆಡ್ ಹಾಗೂ ಬಾಳೆಹಣ್ಣು ಹಂಚಿಕೆ ಮಾಡಲಾಗಿದೆ.

ಹಾಸ್ಟೆಲ್ ವಾರ್ಡನ್ ಸಸ್ಪೆಂಡ್: ಮೆಡಿಕಲ್ ಕಾಲೇಜಿನ ಹಾಸ್ಟೆಲ್‌ನಲ್ಲಿ ಕಾಲರಾ ಕಾಣಿಸಿಕೊಂಡಿರುವ ಹಿನ್ನೆಲೆಯಲ್ಲಿ ಅಲ್ಲಿನ ವಾರ್ಡನ್ ಅಖಿಲಾಂಡೇಶ್ವರಿ ಅವರನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ.

ಹಾಸ್ಟೆಲ್ ತೊರೆದ ವಿದ್ಯಾರ್ಥಿಗಳು: ಕಾಲರಾ ಇರುವುದು ತಿಳಿಯುತ್ತಿದ್ದಂತೆ ಕೆಲ ಮೆಡಿಕಲ್ ವಿದ್ಯಾರ್ಥಿಗಳು ಹಾಸ್ಟೆಲ್ ತೊರೆದಿದ್ದಾರೆ. ವಿಕ್ಟೋರಿಯಾ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿ ಬಂದಿರುವ ಕೆಲ ವಿದ್ಯಾರ್ಥಿಗಳು ಸೇರಿದಂತೆ ಸುಮಾರು 100ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಸ್ಟೆಲ್ ಖಾಲಿ ಮಾಡಿ ತಮ್ಮ ಊರಿನತ್ತ ಮುಖ ಮಾಡಿದ್ದಾರೆ. ಅಲ್ಲೇ ಉಳಿದುಕೊಂಡಿರುವ ವಿದ್ಯಾರ್ಥಿಗಳು ಅಲ್ಲಿನ ನೀರು ಕುಡಿಯದೆ ಬಾಟಲ್ ವಾಟರ್‌ಗೆ ಮೊರೆ ಹೋಗಿದ್ದಾರೆ.

ರಮೇಶ್ ಕುಮಾರ್ ರಾಜಕೀಯ ನಿವೃತ್ತಿ

ಕಾರಣಕ್ಕೂ ಮತ ಕೇಳಲು ನಿಮ್ಮ ಮುಂದೆ ಬರುವುದಿಲ್ಲ. ರಮೇಶ್ ಕುಮಾರ್ ಉತ್ತರಾಧಿಕಾರಿಯಾಗಿ ನನ್ನ ಮಗ ಹರ್ಷ ಕೂಡ ಮತ ಕೇಳಲು ಬರುವುದಿಲ್ಲ ಎಂದು ಕಳೆದ ವಿಧಾನಸಭೆ ಚುನಾವಣೆಯಲ್ಲಿ ಸೋಲು ನೆನಪು ಮಾಡಿ ಕೊಂಡರು. ನನಗೆ ಮೋಸ ಮಾಡಿದವರಿಗೆ ಎಂತಹ ಸ್ಥಿತಿ ಬರಲಿದೆ ಕಾದು ನೋಡಿ ಎಂದು ಹೇಳುವ ಮೂಲಕ ತಮ್ಮ ಸೋಲಿನ ಕಹಿ ಘಟನೆ ನೆನೆದು ಭಾವುಕರಾಗಿ ಮಾತನಾಡಿದರು. ಕಾಂಗ್ರೆಸ್ ಅಭ್ಯರ್ಥಿ ಪರ ಮತ ಕೇಳುವುದಿಲ್ಲ: ಕೋಲಾರ ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರದಲ್ಲಿ ಪಕ್ಷದ ಟಿಕೆಟ್‌ಗಾಗಿ ರಂಪಾಟ ನಡೆಸಿದ್ದ ಸಚಿವ ಕೆ.ಎಚ್.ಮುನಿಯಪ್ಪ ಹಾಗೂ ಮಾಜಿ ಸ್ಪೀಕರ್ ಕೆ.ಆರ್. ರಮೇಶ್‌ಕುಮಾರ್ ಎರಡೂ ಬಣಗಳನ್ನು ಬದಿಗೆ ಸರಿಸಿದ ಎಐಸಿಸಿ ಹೈಕಮಾಂಡ್, ಹೊಸ ಮುಖ ಕೆ.ವಿ.ಗೌತಮ್ ಅವರನ್ನು ಅಭ್ಯರ್ಥಿಯಾಗಿ ಘೋಷಿಸಿತ್ತು. ಜಿಲ್ಲೆಯ ನಾಯಕರ ನಡುವಿನ ಕಾಲೆಳೆದಾಟದಲ್ಲಿ ಎರಡೂ ಗುಂಪಿಗೆ ಸಂಬಂಧವಿಲ್ಲದ ಯುವ ಮತ್ತು ಉತ್ಸಾಹಿ ಗೌತಮ್‌ಗೆ ಟಿಕೆಟ್ ಅದೃಷ್ಟ ಒಲಿದಿದೆ. ಕೋಲಾರ ಲೋಕಸಭೆ ಕಾಂಗ್ರೆಸ್ ಅಭ್ಯರ್ಥಿ ಕೆ.ವಿ.ಗೌತಮ್ ಪರ ನಾನು ಮತ ಕೇಳಲು ಬರುವುದಿಲ್ಲ. ನಾನು ಮಾಡಿರುವ ಅಭಿವೃದ್ಧಿ ಕೆಲಸವನ್ನು ನೋಡಿ ಮತ ಅವರಿಗೆ ಹಾಕಲಿ ಎಂದು ಹೇಳಿದರು.

300ಕ್ಕೂ ಅಧಿಕ ಸ್ಥಾನ ಸಾಧ್ಯತೆ

ಎಂದು ತಿಳಿಸಿದರು ಪ್ರಧಾನಿ ಅವರು ಕಳೆದ ಐದು ವರ್ಷಗಳಲ್ಲಿ ತಮಿಳುನಾಡಿಗೆ ಎಷ್ಟು ಸಲ ಭೇಟಿ ಕೊಟ್ಟಿದ್ದಾರೆ ಮತ್ತು ರಾಹುಲ್ ಗಾಂಧಿ ಅಥವಾ ಸೋನಿಯಾ ಗಾಂಧಿ ಅವರು ಎಷ್ಟು ಸಲ ಭೇಟಿ ಕೊಟ್ಟಿದ್ದಾರೆ ಎಂಬುದನ್ನು ಲೆಕ್ಕಹಾಕಿ ನೋಡಿ ಎಂದರು. ಉತ್ತರ ಪ್ರದೇಶ, ಬಿಹಾರ ಮತ್ತು ಮಧ್ಯಪ್ರದೇಶದಲ್ಲಿ ಹೆಚ್ಚು ಸ್ಥಾನಗಳನ್ನು ಗೆಲ್ಲಲು ಹೋರಾಡುತ್ತಿರುವ ನೀವು (ಕಾಂಗ್ರೆಸ್‌ನವರು) ಮಣಿಪುರ, ಮೇಘಾಲಯದಲ್ಲಿ ಪ್ರವಾಸ ಮಾಡಿದರೆ ಏನು ಲಾಭ ಎಂದು ಹೆಸರು ಉಲ್ಲೇಖಿಸಿದೆಯೇ ರಾಹುಲ್ ಗಾಂಧಿ ಅವರ ನಿಲುವನ್ನು ಪ್ರಶ್ನಿಸಿದರು.

ಅವಕಾಶ ಕೈಚೆಲ್ಲಿದ ವಿರೋಧ ಪಕ್ಷಗಳು: '2020ರಲ್ಲಿ ಕೋವಿಡ್ ಬಳಿಕದ ಅವಧಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಜನಪ್ರಿಯತೆ ಕುಸಿದಿತ್ತು. 2021ರಲ್ಲಿ ಪಶ್ಚಿಮ ಬಂಗಾಳ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಬಿಜೆಪಿ ಹೀನಾಯ ಸೋಲು ಅನುಭವಿಸಿತ್ತು. ಈ ವೇಳೆ ಮೋದಿ ಅವರನ್ನು ಇನ್ನಷ್ಟು ಒತ್ತಡಕ್ಕೆ ತಳ್ಳುವ ಬದಲು ವಿರೋಧ ಪಕ್ಷದವರು ತಮ್ಮ ತಮ್ಮ ಮನೆಗಳಲ್ಲೇ ಕುಳಿತುಕೊಂಡರು. ಇದರಿಂದ ಪ್ರಧಾನಿಗೆ ರಾಜಕೀಯ ಪುನರಾಗಮನ ಮಾಡಲು ಸಾಧ್ಯವಾಗಿದೆ. ಚೆನ್ನಾಗಿ ಆಡುವ ಬ್ಯಾಟರ್‌ನ ಕ್ಯಾಚ್‌ಗಳನ್ನು ಕೈಚೆಲ್ಲುತ್ತಾ ಇದ್ದರೆ ಆತ ಶತಕ ಹೊಡೆಯುತ್ತಾನೆ' ಎಂದು ಪ್ರಶಾಂತ್ ಕಿಶೋರ್ ಹೇಳಿದರು.

ಸ್ಕ್ವಾಡ್ ಅಧಿಕಾರಿಗಳ ಸುಲಿಗೆಗೆ ಯತ್ನ!

ಈ ವೇಳೆ ಕಾರಿನ ಹಿಂಬದಿ ಸೀಟ್‌ನಲ್ಲಿ ಸಮವಸ್ತ್ರ ಸಮೇತ ಆಸೀನರಾಗಿದ್ದ ಕಾನ್ಸ್‌ಟೇಬಲ್ ಶಶಿಕುಮಾರ್ ಕೆಳಗಿಳಿದು ಯಾವ ಸ್ಟೇಷನ್ ಪೊಲೀಸರು ನಿಮ್ಮನ್ನು ಚೆಕ್ ಮಾಡಲು ಹೇಳಿದ್ದಾರೆ ಎಂದು ಕೇಳುತ್ತಿದ್ದಂತೆಯೇ ಮೂವರು ಬೈಕ್ ಹತ್ತಿ ಪರಾರಿಯಾಗಲೆತ್ನಿಸಿದ್ದು, ಅವರಲ್ಲಿ ಮಾದೇಗೌಡ ಅಲಿಯಾಸ್ ಮಧುವನ್ನು ಕಾನ್ಸ್‌ಟೇಬಲ್ ಶಿವಕುಮಾರ್ ಹಿಡಿದುಕೊಂಡು ಆಲನಹಳ್ಳಿ ಪೊಲೀಸ್ ಠಾಣೆಗೆ ಕರೆತಂದು ಏ.5ರಂದು ಮುಂಜಾನೆ 5 ಗಂಟೆಗೆ ಲಿಖಿತ ದೂರು ಸಲ್ಲಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿದ್ದ ಆಲನಹಳ್ಳಿ ಠಾಣೆ ಇನ್ಸ್‌ಪೆಕ್ಟರ್ ಸ್ವರ್ಣ ನೇತೃತ್ವದ ಪೊಲೀಸರು ಏ.5ರಂದು ಬೆಳಗ್ಗೆ ಇನ್ನಿಬ್ಬರು ಆರೋಪಿಗಳಾದ ಯೋಗೇಶ್ ಅಲಿಯಾಸ್ ಅಭಿಷೇಕ್ ಮತ್ತು ಕಾರ್ತಿಕ್‌ನನ್ನು ಬಂಧಿಸಿ ಬೈಕ್ ಅನ್ನು ವಶಪಡಿಸಿಕೊಂಡಿದ್ದಾರೆ. ಆರೋಪಿಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲಾಗಿ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

ಜಿಲ್ಲಾಡಳಿತದಿಂದ ಪೂರ್ವ ತಯಾರಿ

ವಿನಾಯಕ ನಗರದ ಮಹಾರಾಣಿ ವಾಣಿಜ್ಯ ಮತ್ತು ನಿರ್ವಹಣಾ ಮಹಿಳಾ ಕಾಲೇಜಿನಲ್ಲಿ ಇಡಲಾಗುವುದು. ಅಲ್ಲಿ ಎಲ್ಲಾ ಮತಯಂತ್ರ ಗಳನ್ನು ಇಟ್ಟು ಸ್ಟ್ರಾಂಗ್ ರೂಂ ತೆರೆಯಲಾಗುವುದು. ಈ ಹಿನ್ನೆಲೆಯಲ್ಲಿ ಕಾಲೇಜಿನಲ್ಲಿ ಸಿದ್ಧತಾ ಕಾರ್ಯ ಗಳು ಚುರುಕುಗೊಂಡಿದೆ. ಈ ಸಂಬಂಧ ಲೋಕೋಪ ಯೋಗಿ ಇಲಾಖೆಯ ಎಕ್ಸಿಕ್ಯೂಟಿವ್ ಇಂಜಿನಿಯರ್ ಬಾಣಾವರ ರಾಮಮೂರ್ತಿ ಮಹಾರಾಣಿ ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಸ್ಟ್ರಾಂಗ್ ರೂಂ ಪರಿ ಶೀಲನೆ ನಡೆಸಿದರು.

ಸ್ಟ್ರಾಂಗ್ ರೂಂಗಳಲ್ಲಿ ಮತ ಯಂತ್ರ ಮತ್ತು ವಿವಿ ಪ್ಯಾಟ್ ಗಳ ಹಂಚಿಕೆ, ಅಂದಾಜು ಮತ್ತು ವಿನ್ಯಾಸ, ಕೊಠಡಿಗಳ ರೇಖಾಚಿತ್ರಗಳನ್ನು ಜಿಲ್ಲಾಧಿಕಾರಿಗಳೂ ಆದ ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರಿಗೆ ಸಲ್ಲಿಸಲಿದ್ದಾರೆ.

ಮಹಾರಾಣಿ ಕಾಲೇಜಿನ ಎಣಿಕಾ ಕೇಂದ್ರದಲ್ಲಿ ಭದ್ರತೆ ಸೇರಿದಂತೆ ಮೂಲಭೂತ ಸೌಕರ್ಯಗಳಿಗೆ ಕಲ್ಪಿಸಲಾಗುವುದು. ಎಣಿಕಾ ಕೇಂದ್ರದಲ್ಲಿ ಒಂದು ಹಾಲ್‌ನಲ್ಲಿ ಮತ ಎಣಿಕೆಗಾಗಿ 14 ಟೇಬಲ್ ಗಳನ್ನು ಇಡಲಾಗುವುದು. ಚುನಾವಣಾಧಿಕಾರಿ ಕಚೇರಿ, ಚುನಾವಣಾ ವೆಚ್ಚ ವೀಕ್ಷಕರು, ಸಾಮಾನ್ಯ ವೀಕ್ಷಕರು ಹಾಗೂ ಮಾಧ್ಯಮ ಕೇಂದ್ರಕ್ಕೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗುವುದು. ಸ್ಟ್ರಾಂಗ್ ರೂಂನಲ್ಲಿ ಶೇಕಡ 100 ರಷ್ಟು ಬಿಗಿ ಪೊಲೀಸ್ ಬಂದೋಬಸ್ತ್, ಸಿಸಿಟಿವಿ ಕ್ಯಾಮರಾ ಅಳವಡಿಕೆ, ವಿದ್ಯುತ್ ದ್ವನಿವರ್ಧಕ ಸೇರಿದಂತೆ ಇತರೆ ವ್ಯವಸ್ಥೆ ಮಾಡಲಾಗುವುದು.

ಸರ್ಕಾರದ ಇತರೆ ಗ್ಯಾರಂಟಿಗಳಿಗಿಂತ ಸಮಾನ ಶಿಕ್ಷಣ, ಆರೋಗ್ಯ ಗ್ಯಾರಂಟಿ ಬಹುಮುಖ್ಯ

● ಹೈಕೋರ್ಟ್ ನ್ಯಾಯಮೂರ್ತಿ ಹೆಚ್.ಪಿ.ಸಂದೇಶ್ ಅಭಿಮತ ● ಶಿಕ್ಷಣ, ಆರೋಗ್ಯ ವ್ಯಾಪಾರೀಕರಣಗೊಂಡಿದೆ ● ಇವೆರಡು ನಾಯಕರ ಕಪಿಮುಷ್ಠಿಯಲ್ಲಿದೆ



ಮೈಸೂರಿನ ಮಾನಸ ಗಂಗೋತ್ರಿಯ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಭಾನುವಾರ ನಡೆದ ಲಯನ್ಸ್ ಇಂಟರ್‌ನ್ಯಾಷನಲ್‌ನ ಮೊದಲ ವಾರ್ಷಿಕ ಜಿಲ್ಲಾ ಸಮ್ಮೇಳನ–2024 ವನ್ನು ಹೈಕೋರ್ಟ್ ನ್ಯಾಯಮೂರ್ತಿ ಹೆಚ್.ಪಿ.ಸಂದೇಶ್ ಉದ್ಘಾಟಿಸಿದರು.

ಮೈಸೂರು, ಏ.7(ಬಿಎಲ್‌ಯು)– ಸಮಾನ ಶಿಕ್ಷಣ ಹಾಗೂ ಆರೋಗ್ಯ ಎಂಬ ಗ್ಯಾರಂಟಿ ಮಾತ್ರ ಅವಶ್ಯಕತೆ ಇದ್ದು, ಉಳಿದ ಗ್ಯಾರಂಟಿಗಳು ಜನರಿಗೆ ಅನಿವಾರ್ಯವಲ್ಲ ಎಂದು ಹೈಕೋರ್ಟ್ ನ್ಯಾಯಮೂರ್ತಿ ಹೆಚ್.ಪಿ.ಸಂದೇಶ್ ಅಭಿಪ್ರಾಯಪಟ್ಟರು.

ಮೈಸೂರಿನ ಮಾನಸ ಗಂಗೋತ್ರಿಯ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಇಂದು ನಡೆದ ಲಯನ್ಸ್ ಇಂಟರ್ ನ್ಯಾಷನಲ್ ನ ಮೊದಲ ವಾರ್ಷಿಕ ಜಿಲ್ಲಾ ಸಮ್ಮೇಳನ–2024 ಉದ್ಘಾಟಿಸಿ ಮಾತನಾಡಿದ ಅವರು, ತಮಗೆ ಅತ್ಯಗತ್ಯವಾಗಿರುವ ಸಮಾನ ಶಿಕ್ಷಣ ಮತ್ತು ಆರೋಗ್ಯ ಎಂಬ ಎರಡು ಗ್ಯಾರಂಟಿಗಳಿಗೆ ಜನರು ಬೇಡಿಕೆ ಇಡಬೇಕು ಎಂದು ಸಲಹೆ ನೀಡಿದರು.

ಇಂದು ಶಿಕ್ಷಣ ಮತ್ತು ಆರೋಗ್ಯ ಸಂಪೂರ್ಣವಾಗಿ ವಾಣಿಜ್ಯೀಕರಣಗೊಂಡಿದೆ. ಸೇವಾ ಮನೋಭಾವ ಎಂಬುದು ಜನರಿಗೆ ಅಗತ್ಯವಾದ ಈ ಎರಡೂ ಕ್ಷೇತ್ರದಲ್ಲಿ ಇಲ್ಲ. ಆರೋಗ್ಯದಲ್ಲಿ ಸಣ್ಣ ಸಮಸ್ಯೆ ಎದುರಾದಾಗ ಆಸ್ಪತ್ರೆಗೆ ಹೋದರೆ ಒಂದು ದಿನಕ್ಕೆ 30 ರಿಂದ 50 ಸಾವಿರ ರೂಪಾಯಿ ಖರ್ಚು ಮಾಡಬೇಕಾದ ಪರಿಸ್ಥಿತಿ ಇದೆ. ಬಡ ಹಾಗೂ ಮಧ್ಯಮ ವರ್ಗದ ಜನರು ಇಷ್ಟು ಹಣ ಎಲ್ಲಿಂದ ತರುತ್ತಾರೆ ಎಂದು ಸಂದೇಶ್ ಪ್ರಶ್ನಿಸಿದರು.

ಶಿಕ್ಷಣ ಕ್ಷೇತ್ರದ ಪರಿಸ್ಥಿತಿ ಕೂಡ ಇದಕ್ಕಿಂತ ಭಿನ್ನವಾಗಿಲ್ಲ. ಈಗಿನ ಸ್ಥಿತಿಯಲ್ಲಿ ಬಹಳಷ್ಟು ಪ್ರತಿಭೆಗಳಿಗೆ ಶುಲ್ಕ ಭರಿಸಲಾಗದೆ ವ್ಯಾಸಂಗ ನಿಲ್ಲಿಸುವ ಅನಿವಾರ್ಯತೆ ಎದುರಾಗಿದೆ. ಇದರಿಂದ ದೇಶಕ್ಕೆ ಕೊಡುಗೆ ಕೊಡುವ ಪ್ರತಿಭೆಗಳು ಹಾಗೆ ಮರೆಯಾಗುತ್ತಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಶಿಕ್ಷಣ ಇಲ್ಲದಿದ್ದರೆ ರಾಷ್ಟ್ರದ ಅಭ್ಯುದಯ ಸಾಧ್ಯವಿಲ್ಲ ಇನ್ನು ಆರೋಗ್ಯವಿಲ್ಲದೆ ಬದುಕಿಲ್ಲ. ಇದರಿಂದ ಬಹಳಷ್ಟು ಜನರು ಸಮಾನ ಶಿಕ್ಷಣ ಮತ್ತು ಆರೋಗ್ಯ ಸೇವೆಯಿಂದ ವಂಚಿತರಾಗುತ್ತಿದ್ದಾರೆ. ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳು ಬಹಳಷ್ಟು ನಾಯಕರ ಕಪಿಮುಷ್ಠಿಯಲ್ಲಿದೆ. ಇದನ್ನು ಇಟ್ಟುಕೊಂಡು ಈ ನಾಯಕರು ಜನರನ್ನು ಶೋಷಣೆ ಮಾಡುತ್ತಿದ್ದಾರೆ. ಆದ ಕಾರಣ ಸರ್ಕಾರದಿಂದ ಸಮಾನ ಶಿಕ್ಷಣ ಮತ್ತು ಆರೋಗ್ಯ ಎಂಬ ಎರಡು ಗ್ಯಾರಂಟಿ ನೀಡಬೇಕು ಉಳಿದ ಗ್ಯಾರಂಟಿಗಿಂತ ಇದು ಬಹು ಮುಖ್ಯವಾದ ಗ್ಯಾರಂಟಿಗಳಾಗಿದೆ ಎಂದು ಸಂದೇಶ್ ಅಭಿಪ್ರಾಯ ವ್ಯಕ್ತಪಡಿಸಿದರು.

ಲಯನ್ಸ್ ಸಂಸ್ಥೆ ಬಹಳಷ್ಟು ಸಮಾಜ ಸೇವಾ ಕಾರ್ಯ ಮಾಡುತ್ತಿದೆ. ಸೇವೆ ನಮ್ಮ ಧ್ಯೇಯ ಎನ್ನುವ ನೀವು ಶಿಕ್ಷಣ ವಂಚಿತರಿಗೆ ಅಕ್ಷರ ನೀಡಿ, ಆರೋಗ್ಯ ವಂಚಿತರಿಗೆ ಆರೋಗ್ಯ ಸೇವಾ ಸೌಲಭ್ಯ ದೊರಕುವಂತೆ ಹಲವು ಯೋಜನೆಗಳನ್ನು ಅನುಷ್ಠಾನ ಮಾಡಿ ಎಂದು ಸಲಹೆ ನೀಡಿದರು.

ಲಯನ್ಸ್‌ನಲ್ಲಿ 94 ಕ್ಲಬ್‌ಗಳಿದ್ದು, ಇದು ಚೊಚ್ಚಲ ಸಮ್ಮೇಳನದ ಸಂಭ್ರಮವಾಗಿದೆ. 1917 ರಲ್ಲಿ ಆರಂಭವಾದ ಲಯನ್ಸ್ ಕ್ಲಬ್ ಹಲವು ಸಮಾಜ ಸೇವಾ ಕಾರ್ಯ ಮಾಡಿದೆ. ಲಯನ್ಸ್ ಕ್ಲಬ್ ಸ್ಥಾಪನೆಯಾದ ವರ್ಷದ ಕೊನೆಯ ಸಂಖ್ಯೆ 7 ಹಾಗೂ ನಿಮ್ಮ ಜಿಲ್ಲಾ ಕ್ಲಬ್ ಸಂಖ್ಯೆ ಕೂಡ 7 ಆಗಿದೆ. ಒಂದು ಮಾಹಿತಿ ಪ್ರಕಾರ 7 ಏಳಿಗೆಯ ಸಂಖ್ಯೆ. ಕಾಕತಾಳೀಯ ಎಂಬಂತೆ ನನ್ನ ಜೀವನದಲ್ಲಿ 7 ಪ್ರಮುಖ ಪಾತ್ರ ವಹಿಸಿದೆ ಎಂದು ಸಂದೇಶ್ ತಿಳಿಸಿದರು.

ನಾನು ಜಡ್ಜ್ ಆಗಿದ್ದೇನೆ, ಬಿಷಪ್ ಕಾಟನ್ ಕಾನ್ವೆಂಟ್‌ನಲ್ಲಿ ಓದಿದ ಆತ...!

ನಾವು ಯಾವ ಶಾಲಾ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ್ದೇವೆ ಎಂಬುವುದು ಮುಖ್ಯವಲ್ಲ. ನಾವು ವ್ಯಾಸಂಗ ಮಾಡಿದ ಶಾಲೆಗಿಂತ ಯಾವ ರೀತಿ ಸಾಧನೆ ಮಾಡಿದ್ದೇವೆ ಎಂಬುವುದು ಮುಖ್ಯ ಎಂದು ನ್ಯಾಯಮೂರ್ತಿ ಸಂದೇಶ್ ಅಭಿಪ್ರಾಯಪಟ್ಟರು.

ನಾನು ಸರ್ಕಾರಿ ಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲೆ ವ್ಯಾಸಂಗ ಮಾಡಿದ್ದೇನೆ. ಆದರೆ ನನ್ನ ವಕೀಲ ಸಹೋದ್ಯೋಗಿಯೊಬ್ಬ ಬೆಂಗಳೂರಿನ ಬಿಷಪ್ ಕಾಟನ್ ಶಾಲೆಯಲ್ಲಿ ಓದಿದ್ದ. ಆದರೆ ಒಂದು ದಿನ ಆತ ಕೋರ್ಟ್ ನಲ್ಲಿ ವಾದ ಮಂಡಿಸುವ ಬುದ್ಧಿವಂತಿಕೆ ಪ್ರದರ್ಶಿಸಲಿಲ್ಲ. ಬಿಷಪ್ ಕಾಟನ್ ಶಾಲೆಯಲ್ಲಿ ಓದಿದ ಆತ ಈಗ ಇಂಟೀರಿಯರ್ ಡಿಸೈನ್ ಮಾಡುವ ಗುತ್ತಿಗೆದಾರನಾಗಿದ್ದಾನೆ. ಆದರೆ ಸರ್ಕಾರಿ ಶಾಲೆಯಲ್ಲಿ ಓದಿದ ನಾನು ಜಡ್ಜ್ ಆಗಿದ್ದೇನೆ ಎಂದು ಹೇಳಿದರು.

ಈ ಮೂಲಕ ಪ್ರತಿಷ್ಠಿತ ಶಾಲೆಯಲ್ಲಿ ಮಕ್ಕಳನ್ನು ಓದಿಸುತ್ತಿದ್ದೇವೆ ಎಂದು ಬೀಗುವ ಪೋಷಕರಿಗೆ ಸಂದೇಶ್ ಸರ್ಕಾರಿ ಶಾಲೆ ಮತ್ತು ಸಾಮಾನ್ಯ ಶಾಲೆಗಳ ಮಹತ್ವದ ಬಗ್ಗೆ ತಿಳಿ ಹೇಳಿದರು. ಮಕ್ಕಳಿಗೆ ಶಿಕ್ಷಣದ ಜೊತೆಗೆ ಪೋಷಕರು ಬದುಕಿನ ಪಾಠ ಕೂಡ ಹೇಳಿಕೊಡಬೇಕು. ಹತ್ತು ರೂಪಾಯಿ ಬೆಲೆ ಎಷ್ಟೆಂದು ತಿಳಿ ಹೇಳುವ ಮೂಲಕ ಬದುಕಿನ ಕಷ್ಟಕರ ಸಂಗತಿ ವಿವರಿಸಿ, ದಾರಿ ತಪ್ಪದಂತೆ ಮಕ್ಕಳನ್ನು ನೋಡಿಕೊಳ್ಳಬೇಕು ಎಂದು ಸಲಹೆ ನೀಡಿದರು. ದೊಡ್ಡ ಹಾಗೂ ಪ್ರತಿಷ್ಠಿತ ಶಾಲಾ ಕಾಲೇಜಿನಲ್ಲಿ ಓದಿಸುವುದು ಮುಖ್ಯವಲ್ಲ. ಶಾಲೆ ಸಣ್ಣದಾದರೂ ಉತ್ತಮವಾಗಿ ವ್ಯಾಸಂಗ ಮಾಡಿ ಒಳ್ಳೆಯ ಬದುಕು ಕಟ್ಟಿಕೊಳ್ಳುವುದು ಮುಖ್ಯ ಎಂದರು.

ಇವತ್ತು ಬಹಳಷ್ಟು ಜನರು ಮೊಬೈಲ್‌ಗೆ ದಾಸರಾಗಿದ್ದಾರೆ. ದಿನದ 24 ಗಂಟೆಯಲ್ಲಿ ಕನಿಷ್ಠ 10 ಗಂಟೆ ಮೊಬೈಲ್‌ನಲ್ಲೆ ಕಾಲ ಕಳೆಯುತ್ತಾರೆ. ಯಾವುದೇ ವಿಚಾರವಾದರೂ ಇಂಟರ್‌ನೆಟ್‌ನಲ್ಲಿ ಶೋಧಿಸುತ್ತಾರೆ. ಪುಸ್ತಕದತ್ತ ದೃಷ್ಟಿ ಕೂಡ ಹಾಯಿಸುವುದಿಲ್ಲ. ಆಧುನಿಕ ತಾಂತ್ರಿಕತ ಸೌಲಭ್ಯವಾಗಿರುವ ಮೊಬೈಲ್ ಬೇಕು, ಆದರೆ ಅದರ ಬಳಕೆಗೆ ಮಿತಿ ಇರಬೇಕು ಎಂಬುವುದನ್ನು ಮರೆಯಬಾರದು ಎಂದು ಸಂದೇಶ್ ಹೇಳಿದರು.

ಈ ವೇಳೆ ಲಯನ್ಸ್ ಕ್ಲಬ್ ವತಿಯಿಂದ ನ್ಯಾಯಮೂರ್ತಿ ಸಂದೇಶ್ ಅವರನ್ನು ಮೈಸೂರು ಪೇಟ ತೊಡಿಸಿ ಸನ್ಮಾನಿಸಲಾಯಿತು.

ಮೈಸೂರು ಜಿಲ್ಲಾ ಮತ್ತು ಸೆಷನ್ ನ್ಯಾಯಾಧೀಶೆ ಪ್ರಭಾವತಿ ಎಂ.ಹಿರೇಮಠ್, ಲಯನ್ಸ್ ಇಂಟರ್ ನ್ಯಾಷನಲ್ ಜಿಲ್ಲಾ ರಾಜ್ಯಪಾಲ ಲಯನ್ ಡಾ.ಎನ್.ಕೃಷ್ಣೇಗೌಡ, ಹೇಮಾವತಿ ಕೃಷ್ಣೇಗೌಡ, ಲಯನ್ ದೇವೇಗೌಡ, ಮಾಜಿ ರಾಜ್ಯಪಾಲ ಲಯನ್ ಕೃಷ್ಣಾರೆಡ್ಡಿ ಲಯನ್ ಬಿ.ಎಸ್.ರಾಜಶೇಖರ್ ಸೇರಿದಂತೆ ಇತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಅಭ್ಯರ್ಥಿ ನಾಮಪತ್ರ ತಿರಸ್ಕೃತ ಹಿನ್ನೆಲೆ ಬಿಎಸ್‌ಪಿ ಜಿಲ್ಲಾಧ್ಯಕ್ಷ ಉಚ್ಛಾಟನೆ


ಮೈಸೂರು, ಏ.7(ಎಸ್‌ಬಿಡಿ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಬಹುಜನ ಸಮಾಜ ಪಾರ್ಟಿ(ಬಿಎಸ್‌ಪಿ) ಅಭ್ಯರ್ಥಿ ನಾಮಪತ್ರ ತಿರಸ್ಕೃತಗೊಂಡ ಹಿನ್ನೆಲೆಯಲ್ಲಿ ಪಾರ್ಟಿಯ ಜಿಲ್ಲಾಧ್ಯಕ್ಷ ಹಾಗೂ ಓರ್ವ ಕಾರ್ಯಕರ್ತನನ್ನು ಉಚ್ಛಾಟಿಸಲಾಗಿದೆ.

ಬಿಎಸ್‌ಪಿ ಮೈಸೂರು ಜಿಲ್ಲಾಧ್ಯಕ್ಷ ಪುಟ್ಟಸ್ವಾಮಿ ಹಾಗೂ ಕಾರ್ಯಕರ್ತ ಡಾ.ಚನ್ನಕೇಶವಮೂರ್ತಿಯನ್ನು ಪಕ್ಷದಿಂದ ಉಚ್ಛಾಟಿಸಿ ಪಾರ್ಟಿಯ ರಾಜ್ಯಾಧ್ಯಕ್ಷ ಮಾರಸಂದ್ರ ಮುನಿಯಪ್ಪ, ಭಾನುವಾರ ಆದೇಶ ಹೊರಡಿಸಿದ್ದಾರೆ.

ಮೈಸೂರು–ಕೊಡಗು ಲೋಕಸಭಾ ಚುನಾವಣೆಗೆ ಸ್ಪರ್ಧಿಸಲು ರಾಜ್ಯ ಸಮಿತಿ ವತಿಯಿಂದ ನಿಯೋಜನೆಗೊಂಡಿದ್ದ ಶ್ರೀಮತಿ ರೇವತಿರಾಜ್ ಅವರ ನಾಮಪತ್ರ ತಿರಸ್ಕಾರಗೊಂಡಿರುವುದು ಪಕ್ಷಕ್ಕೆ ಬಹಳ ಮುಜುಗರ ಮತ್ತು ಅಪಮಾನ ಉಂಟು ಮಾಡಿದೆ. ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಹಾಗೂ ಕ್ಷೇತ್ರದಲ್ಲಿ ಚುನಾವಣಾ ಪ್ರಚಾರದ ಜವಬ್ದಾರಿಯನ್ನು ಜಿಲ್ಲಾಧ್ಯಕ್ಷರಾಗಿದ್ದ ಪುಟ್ಟಸ್ವಾಮಿ ಅವರಿಗೆ ವಹಿಸಿದ್ದಲ್ಲದೆ, ಅವರನ್ನು ತಾರಾ ಪ್ರಚಾರಕರನ್ನಾಗಿ ಪಕ್ಷ ನೇಮಕ ಮಾಡಿತ್ತು.

ಆದರೆ ಪುಟ್ಟಸ್ವಾಮಿ, ಪಕ್ಷದ ಅಭ್ಯರ್ಥಿ ರೇವತಿರಾಜ್ ನಾಮಪತ್ರದ ದಾಖಲೆಗಳನ್ನು ಸರಿಪಡಿಸುವ ಕಾರ್ಯದಲ್ಲಿ ಸಂಪೂರ್ಣವಾಗಿ ನಿರ್ಲಕ್ಷತೆ ತೋರುವ ಮೂಲಕ ನಾಮಪತ್ರ ತಿರಸ್ಕೃತಗೊಳ್ಳಲು ನೇರ ಹೊಣೆಗಾರರಾಗಿದ್ದಾರೆ. ಪುಟ್ಟಸ್ವಾಮಿ ಜೊತೆಗೆ ಕಾರ್ಯಕರ್ತ ಡಾ.ಚನ್ನಕೇಶವ ಮೂರ್ತಿ ಬೇಜವಾಬ್ದಾರಿಯಿಂದ ವರ್ತಿಸಿದ್ದಾರೆ. ನಾಮಪತ್ರ ತಿರಸ್ಕಾರಗೊಂಡಿರುವುದು ಪಕ್ಷಕ್ಕೆ ಮುಜುಗರ ಮತ್ತು ಅಪಮಾನ ಉಂಟಾಗಿರುವ ಬಗ್ಗೆ ಅಭ್ಯರ್ಥಿಯಾಗಿದ್ದ ರೇವತಿರಾಜ್, ಜಿಲ್ಲಾ ಕಾರ್ಯಕರ್ತರು ಮತ್ತು ಬೆಂಬಲಿಗರು ನಿರಾಶೆ ವ್ಯಕ್ತಪಡಿಸಿದ್ದರು.

ಈ ಬೆಳವಣಿಗೆಯ ಬಗ್ಗೆ ಪಕ್ಷದ ರಾಜ್ಯ ಸಮಿತಿಯು ಕೇಂದ್ರ ಸಮಿತಿಗೆ ವರದಿ ನೀಡಿತ್ತು. ಪರಿಶೀಲನೆ ನಡೆಸಿದ ಕೇಂದ್ರ ಸಮಿತಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ರಾಜ್ಯ ಸಮಿತಿಗೆ ಸೂಚಿಸಿದೆ. ಈ ಹಿನ್ನೆಲೆಯಲ್ಲಿ ಪುಟ್ಟಸ್ವಾಮಿ ಅವರನ್ನು ಬಿಎಸ್‌ಪಿ ಅಧ್ಯಕ್ಷ ಸ್ಥಾನ ಹಾಗೂ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ತಕ್ಷಣ ಜಾರಿಗೆ ಬರುವಂತೆ ಉಚ್ಛಾಟಿಸಲಾಗಿದೆ. ಜೊತೆಗೆ ಕಾರ್ಯಕರ್ತ ಡಾ.ಚನ್ನಕೇಶವ ಮೂರ್ತಿ ಅವರನ್ನೂ ಪಕ್ಷದ ಸದಸ್ಯತ್ವದಿಂದ ಉಚ್ಛಾಟನೆ ಮಾಡಲಾಗಿದೆ ಎಂದು ರಾಜ್ಯಾಧ್ಯಕ್ಷ ಮಾರಸಂದ್ರಮುನಿಯಪ್ಪಆದೇಶದಲ್ಲಿ ತಿಳಿಸಿದ್ದಾರೆ.



ಮೈಸೂರು ತಾಲೂಕು ಜಯಪುರ ಗ್ರಾಮದ ಶ್ರೀ ರಾಘವೇಂದ್ರ ವಿದ್ಯಾಪೀಠ ಪ್ರೌಢಶಾಲೆಯ ಮುಖ್ಯ ಶಿಕ್ಷಕರಾಗಿ ಸೇವೆ ಸಲ್ಲಿಸಿ, ನಿವೃತ್ತರಾದ ಎಸ್.ವೈದ್ಯನಾಥನ್ ಅವರನ್ನು ಶಾಲೆಯ ಆಡಳಿತ ಮಂಡಳಿ ಸದಸ್ಯರು, ಶಿಕ್ಷಕ ವೃಂದ, ಹಳೆಯ ವಿದ್ಯಾರ್ಥಿಗಳು ಹಾಗೂ ಮೈಸೂರು ಗ್ರಾಮಾಂತರ ಕ್ಷೇತ್ರ ಶಿಕ್ಷಣ ಕಛೇರಿ ಸಿಬ್ಬಂದಿ ಆತ್ಮೀಯವಾಗಿ ಅಭಿನಂದಿಸಿದರು.

ಕೇಜ್ರಿವಾಲ್ ಬಿಡುಗಡೆಗೆ ಆಗ್ರಹಿಸಿ ಎಎಪಿ ಸತ್ಯಾಗ್ರಹ



ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಬಿಡುಗಡೆ ಮಾಡುವಂತೆ ಒತ್ತಾಯಿಸಿ ಮೈಸೂರಿನ ಮಹಾತ್ಮಗಾಂಧಿ ವೃತ್ತದಲ್ಲಿ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಉಪವಾಸ ಸತ್ಯಾಗ್ರಹ ನಡೆಸಿದರು.

ಮೈಸೂರು, ಏ.7(ಎಂಟಿವೈ)–ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಬಿಡುಗಡೆ ಮಾಡುವಂತೆ ಒತ್ತಾಯಿಸಿ ಮೈಸೂರಿನ ಮಹಾತ್ಮಗಾಂಧಿ ವೃತ್ತದಲ್ಲಿ ಆಮ್ ಆದ್ಮಿ ಪಕ್ಷ(ಎಎಪಿ) ಕಾರ್ಯಕರ್ತರು ಉಪವಾಸ ಸತ್ಯಾಗ್ರಹ ನಡೆಸಿದರು.

ರಾಜಕೀಯ ದುರುದ್ದೇಶದಿಂದ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಕೇಂದ್ರದ ಬಿಜೆಪಿ ಸರ್ಕಾರ ಹುನ್ನಾರ ನಡೆಸಿ ಬಂಧಿಸಿದೆ. ದೆಹಲಿಯ ಮುಖ್ಯಮಂತ್ರಿಯಾಗಿ ಕೇಜ್ರಿವಾಲ್ ಅವರು ಜನಪ್ರಿಯಗೊಂಡಿರುವುದನ್ನು ಸಹಿಸದೇ ಅವರ ನಾಯಕತ್ವವನ್ನು ತುಳಿಯಲು ಬಿಜೆಪಿ ನಡೆಸಿದ ಸಂಚಿಗೆ ಕೇಜ್ರಿವಾಲ್ ಅವರ ಬಂಧನವಾಗಿದೆ. ಯಾವುದೇ ಭ್ರಷ್ಟಾಚಾರ ನಡೆಸಿರುವ ದಾಖಲೆಗಳಿಲ್ಲದಿದ್ದರೂ ಇಡಿ ರಾಜಕೀಯ ಒತ್ತಡಕ್ಕೆ ಒಳಗಾಗಿ ಬಂಧಿಸುವ ಮೂಲಕ ಪ್ರಧಾನಿ ನರೇಂದ್ರ ಮೋದಿಯವರ ಕೈಗೊಂಬೆಯಾಗಿ ವರ್ತಿಸಿದೆ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ದೇಶದಲ್ಲಿ ಬಿಜೆಪಿ ವಿರುದ್ಧದ ಅಲೆ ಹೆಚ್ಚಾಗುತ್ತಿದ್ದು, ಎನ್‌ಡಿಎ ಮೈತ್ರಿಕೂಟದ ವಿರುದ್ಧ ಜನ ಅಸಮಾಧಾನಗೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಚುನಾವಣೆಯ ಸಂದರ್ಭದಲ್ಲಿಯೇ ಅರವಿಂದ ಕೇಜ್ರಿವಾಲ್ ಅವರನ್ನು ಬಂಧಿಸುವ ಮೂಲಕ ಬಿಜೆಪಿಗೆ ಲೋಕಸಭಾ ಚುನಾವಣೆಯಲ್ಲಿ ಆಗಬಹುದಾದ ಹಿನ್ನಡೆಯನ್ನು ತಪ್ಪಿಸಲು ಕುತಂತ್ರ ಮಾಡಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಈ ವೇಳೆ ಆಮ್ ಆದ್ಮಿ ಪಕ್ಷದ ಮುಖಂಡರಾದ ಮಾಲವಿಕ ಗುಬ್ಬಿವಾಣಿ, ರಂಗಯ್ಯ, ವಿಶ್ವನಾಥ್ ಕುಲಕರ್ಣಿ, ಉಷಾ ಸಂಪತ್ ಕುಮಾರ್, ಐಶ್ವರ್ಯಾ, ನಟರಾಜು, ನಾಗರಾಜು, ನವೀನ್, ಧರ್ಮಶ್ರೀ ಸೇರಿದಂತೆ ಇನ್ನಿತರರು ಉಪವಾಸ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು.

ಏ.15ರಿಂದ ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆಯಿಂದ ಬೇಸಿಗೆ ಶಿಬಿರ

ಮೈಸೂರು,ಏ.7–ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆಯು, ಮೈಸೂರು ಆರ್ಟ್ ಸೆಂಟರ್, ವರ್ಣ ಕಲೆಕ್ಟಿವ್ ಸಹಯೋಗದೊಂದಿಗೆ ಮಕ್ಕಳಿಗಾಗಿ ಬೇಸಿಗೆ ಶಿಬಿರವನ್ನು ಹಾರ್ಡ್ವಿಕ್ ಶಾಲೆಯಲ್ಲಿ ಹಮ್ಮಿಕೊಂಡಿದೆ. ಮಕ್ಕಳಿಗೆ ವಿವಿಧ ಕಲಾ ಪ್ರಕಾರಗಳನ್ನು ಚಟುವಟಿಕೆಯ ಮೂಲಕ ಪರಿಚಯಿಸುವ ಒಂದು ಕಾರ್ಯಕ್ರಮ. ಈ ಬೇಸಿಗೆ ಶಿಬಿರವು ಬೆಳಗ್ಗೆ 10ರಿಂದ ಸಂಜೆ 4ರವರೆಗೆ, ಏ.15ರಿಂದ ಮೇ 12ರವರೆಗೆ ನಡೆಯಲಿದೆ. 10ರಿಂದ 16 ವರ್ಷದ ಮಕ್ಕಳು ಪಾಲ್ಗೊಳ್ಳಬಹುದು. ಕಲೆ ಎಂದರೆ ಬರಿ ಚಿತ್ರಕಲೆಯಲ್ಲ, ಇದರಲ್ಲಿ ಸಾಹಿತ್ಯ, ಸಂಗೀತ, ನಾಟಕ ಮತ್ತು ನೃತ್ಯ ಎಲ್ಲವೂ ಒಳಗೊಂಡಿರುತ್ತದೆ. ಈ ಕಲಾ ಮಾಧ್ಯಮ ಮಕ್ಕಳಲ್ಲಿ ಒತ್ತಡವನ್ನು ಕಡಿಮೆ ಮಾಡಿ, ಮನಸ್ಸನ್ನು ಮೃದುವಾಗಿಸಲು ಹಾಗೆ ಅವರಲ್ಲಿ ಸಂವೇದನಾಶೀಲತೆ ಹೆಚ್ಚಿಸಲು ಸಹಾಯ ಮಾಡುತ್ತದೆ. ನಮ್ಮ ಮಕ್ಕಳ ಶಿಕ್ಷಣದ ಗುರಿ ಸರ್ವತೋಮುಖ ಬೆಳವಣಿಗೆಯಾಗಿರುವುದರಿಂದ ಮೆದುಳಿನ ಬಲ ಮತ್ತು ಎಡಭಾಗಗಳು ಸರಿಯಾಗಿ ಅಭಿವೃದ್ಧಿ ಹೊಂದಬೇಕು. ಮಕ್ಕಳು ಸುತ್ತಲಿನ ಪರಿಸರಕ್ಕೆ ಹೆಚ್ಚು ಸಂವೇದನಾಶೀಲರನ್ನಾಗಿ ಸುತ್ತಾ ಸೃಜನಶೀಲರಾಗಿರುವಂತೆ ಮಾಡುತ್ತದೆ ನಮ್ಮ ಈ ಸಂಪೂರ್ಣ ಚಟುವಟಿಕೆಗಳನ್ನು ನುರಿತ ವೃತ್ತಿಪರರು ವಿನ್ಯಾಸಗೊಳಿಸಿದ್ದು, ಕಾರ್ಯಗತಗೊಳಿಸಲಿದ್ದಾರೆ. ಶಿಬಿರಕ್ಕೆ ನೋಂದಾಯಿಸಿಕೊಳ್ಳಲು, ಮಾಹಿತಿಗಾಗಿ ಸಂಪರ್ಕಿಸಿ: 9845605012, 9945158970.

ದೈಹಿಕ, ಮಾನಸಿಕ, ಸಾಮಾಜಿಕವಾಗಿ ಸುಸ್ಥಿತಿಯಲ್ಲಿರುವುದೇ ನೈಜ ಆರೋಗ್ಯ

ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ ಅಭಿಮತ

ಮೈಸೂರು,ಏ.7(ಪಿಎಂ)– ಆರೋಗ್ಯವೆಂದರೆ ಕೇವಲ ರೋಗ ಮುಕ್ತವಾಗಿರುವುದಷ್ಟೇ ಅಲ್ಲ. ಯಾವುದೇ ವ್ಯಕ್ತಿ ದೈಹಿಕ, ಮಾನಸಿಕ ಹಾಗೂ ಸಾಮಾಜಿಕವಾಗಿಯೂ ಸುಸ್ಥಿತಿಯಲ್ಲಿರುವುದೇ ನೈಜ ಆರೋಗ್ಯ ಎಂದು ವಿಧಾನ ಪರಿಷತ್ ಸದಸ್ಯರೂ ಆದ ವೈದ್ಯ ಡಾ.ಡಿ.ತಿಮ್ಮಯ್ಯ ಅಭಿಪ್ರಾಯಪಟ್ಟರು.

ಮೈಸೂರಿನ ಕೃಷ್ಣಮೂರ್ತಿಪುರಂನ ನಮನ ಕಲಾ ಮಂಟಪದಲ್ಲಿ ಉತ್ತಿಷ್ಠ ಭಾರತ ಪ್ರತಿಷ್ಠಾನ ಮತ್ತು ಹಿಮಾಲಯ ಪ್ರತಿಷ್ಠಾನದ ಜಂಟಿ ಆಶ್ರಯದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ವಿಶ್ವ ಆರೋಗ್ಯ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಒಬ್ಬ ವ್ಯಕ್ತಿಯು ದೈಹಿಕ, ಮಾನಸಿಕ ಹಾಗೂ ಸಾಮಾಜಿಕವಾಗಿ ಆರೋಗ್ಯವಂತ ಆಗಿರುವುದೇ 'ಆರೋಗ್ಯ' ಎಂದು ವಿಶ್ವಆರೋಗ್ಯ ಸಂಸ್ಥೆ ವ್ಯಾಖ್ಯಾನಿಸಿದೆ ದೈಹಿಕವಾಗಿ ಉಂಟಾಗುವ ಅನಾರೋಗ್ಯ ನಮಗೆ ಗೊತ್ತಾಗುತ್ತವೆ. ಆದರೆ ಮಾನಸಿಕ ಅನಾರೋಗ್ಯ ಕಂಡುಕೊಳ್ಳುವುದು ಕಷ್ಟ ಬಡತನ, ನಿರುದ್ಯೋಗ, ಪೌಷ್ಟಿಕ ಆಹಾರದ ಕೊರತೆ ಈ ಎಲ್ಲವೂ ಸಾಮಾಜಿಕ ಅನಾರೋಗ್ಯದ ಅಂಶಗಳು ಎಂದು ವಿವರಿಸಿದರು.

ಹೆಚ್ಚು ಸಿಹಿ, ಹೆಚ್ಚು ಉಪ್ಪು ಅಂಶ ಹೊಂದಿರುವ ಆಹಾರ ಸೇವನೆ ಅನಾರೋಗ್ಯಕ್ಕೆ ಮೂಲ. ಊಟದ ಎಲೆಯಲ್ಲಿ ಉಪ್ಪು ಉಪ್ಪಿನಕಾಯಿ ಹಾಕುವುದುಂಟು. ಸಾಂಬಾರಿನಲ್ಲೇ ಉಪ್ಪು ಮತ್ತು ಖಾರ ಇದ್ದ ಮೇಲೆ ಉಪ್ಪು ಮತ್ತು ಉಪ್ಪಿನಕಾಯಿ ಪ್ರತ್ಯೇಕವಾಗಿ ಅನಗತ್ಯ. ಈ ಅಭ್ಯಾಸದಿಂದ ಅತಿಯಾದ ಉಪ್ಪು ಸೇವಿಸುವಂತಾಗಿ ರಕ್ತದೊತ್ತಡ ಅಧಿಕವಾಗಲಿದೆ. ಅತಿಯಾದ ತುಪ್ಪ ಸೇವನೆಯಿಂದಲೂ ದೇಹಕ್ಕೆ ಹಾನಿಯಾಗಲಿದೆ. ಅತಿಯಾದ ಸಿಹಿ ತಿನ್ನುವುದು ಒಳ್ಳೆಯದಲ್ಲ ಎಂದು ತಿಳಿಸಿದರು.

'ಆರೋಗ್ಯ ಪಾಲನೆಯಲ್ಲಿ ಜೀವನ ಶೈಲಿಯ ಪಾತ್ರ' ಕುರಿತು ವರುಣಾದ ರಾಜಶೇಖರ ಆಸ್ಪತ್ರೆ ನಿರ್ದೇಶಕ ಡಾ.ಹೆಚ್.ಬಿ. ರಾಜಶೇಖರ್ ಮಾತನಾಡಿದರು. ಇದಕ್ಕೂ ಮುನ್ನ ವೈದ್ಯರಾದ ಡಾ.ಡಿ.ತಿಮ್ಮಯ್ಯ, ಡಾ.ಹೆಚ್.ಬಿ.ರಾಜಶೇಖರ್, ಡಾ.ಲಕ್ಷ್ಮೀದೇವಿ ಅವರನ್ನು ಸನ್ಮಾನಿಸಲಾಯಿತು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಉತ್ತಿಷ್ಠ ಭಾರತ ಪ್ರತಿಷ್ಠಾನದ ಕಾರ್ಯದರ್ಶಿ ಅನಂತ್ ಸಾಲಿಗ್ರಾಮ, ಸಂಚಾಲಕರಾದ ರಾಕೇಶ್ ಭಟ್, ಎಂ.ವಿ.ನಾಗೇಂದ್ರಬಾಬು, ಹಿಮಾಲಯ ಪ್ರತಿಷ್ಠಾನದ ಅಧ್ಯಕ್ಷ ಎನ್.ಅನಂತ್ ಮತ್ತಿತರರು ಹಾಜರಿದ್ದರು.



ಮೈಸೂರಿನ ಕೃಷ್ಣಮೂರ್ತಿಪುರಂನ ನಮನ ಕಲಾ ಮಂಟಪದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಆರೋಗ್ಯ ದಿನಾಚರಣೆಯಲ್ಲಿ ಡಾ.ಡಿ.ತಿಮ್ಮಯ್ಯ, ಡಾ.ಹೆಚ್.ಬಿ.ರಾಜಶೇಖರ್, ಡಾ.ಲಕ್ಷ್ಮೀದೇವಿ ಅವರನ್ನು ಸನ್ಮಾನಿಸಲಾಯಿತು.

ನನಗೀಗ 75 ವರ್ಷ, ಶುಗರ್–ಬಿಪಿ ಎರಡೂ ಇಲ್ಲ...

ನಮ್ಮ ಆಹಾರ ಸೇವನೆಯಲ್ಲಿ ನಿಯಂತ್ರಣ ಹೊಂದಬೇಕು. ಯಾವುದನ್ನು ಎಷ್ಟು, ಯಾವಾಗ ತಿನ್ನಬೇಕೆಂಬ ಅರಿವಿರಬೇಕು. ನಾನು ಇಂದಿಗೂ ಗಂಟೆ ಕಾಲ ವಾಕಿಂಗ್ ಮತ್ತು ಅರ್ಧಗಂಟೆ ವ್ಯಾಯಾಮ ಮಾಡುತ್ತೇನೆ. ನಾನಗೀಗ 75 ವರ್ಷ. ನನಗೆ ಮಧುಮೇಹ ಮತ್ತು ರಕ್ತದೊತ್ತಡ (ಬಿಪಿ) ಎರಡೂ ಇಲ್ಲ. ಎಲ್ಲವೂ ಇತಿಮಿತಿವಾಗಿದ್ದರೆ ಆರೋಗ್ಯ ಸುಸ್ಥಿತಿಯಲ್ಲಿರುತ್ತದೆ ನಮ್ಮ ಆರೋಗ್ಯ ನಮ್ಮ ಕೈಯಲ್ಲೇ ಇದೆ ಆರೋಗ್ಯಕ್ಕೆ ಪೂರಕ ಅಭ್ಯಾಸಗಳನ್ನು ಬೆಳೆಸಿಕೊಳ್ಳಬೇಕು.

-ಡಾ.ಡಿ.ತಿಮ್ಮಯ್ಯ

ಎನ್‌ಡಿಎ ಮೈತ್ರಿ ಅಭ್ಯರ್ಥಿ ಕುಮಾರಸ್ವಾಮಿ ಗೆಲುವಿಗೆ ಶ್ರಮಿಸಿ

ವಿಶ್ರಾಂತ ಕುಲಪತಿ ಡಾ.ಕೆ.ಎಸ್.ರಂಗಪ್ಪ


ಜೆಡಿಎಸ್ ಮತ್ತು ಬಿಜೆಪಿ ಚುನಾವಣಾ ಸಮನ್ವಯ ಸಭೆಯಲ್ಲಿ ವಿಶ್ರಾಂತ ಕುಲಪತಿ ಕೆ.ಎಸ್.ರಂಗಪ್ಪ ಮಾತನಾಡಿದರು.

ಕೆ.ಆರ್.ನಗರ, ಏ.7– ಪ್ರಜಾಪ್ರಭುತ್ವದ ಮೌಲ್ಯಗಳು ಉಳಿದು ಜನತಂತ್ರ ವ್ಯವಸ್ಥೆಗೆ ಜೀವ ಬರಬೇಕಾದರೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸಂಸತ್ ಪ್ರವೇಶಿಸಬೇಕು ಎಂದು ವಿಶ್ರಾಂತ ಕುಲಪತಿ ಡಾ.ಕೆ.ಎಸ್.ರಂಗಪ್ಪ ತಿಳಿಸಿದರು.

ಪಟ್ಟಣದ ಬಿಜೆಪಿ ಜಿಲ್ಲಾ ಗ್ರಾಮಾಂತರ ಉಪಾಧ್ಯಕ್ಷ ಹೊಸಹಳ್ಳಿ ವೆಂಕಟೇಶ್ ನಿವಾಸದಲ್ಲಿ ನಡೆದ ಜೆಡಿಎಸ್ ಮತ್ತು ಬಿಜೆಪಿ ಚುನಾವಣಾ ಸಮನ್ವಯ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಹೆಚ್.ಡಿ.ಕುಮಾರಸ್ವಾಮಿ ಅವರ ಸೇವೆ ದೇಶಕ್ಕೆ ಅಗತ್ಯವಿರುವುದರಿಂದ ಎರಡೂ ಪಕ್ಷಗಳ ಮುಖಂಡರು ಅತ್ಯಂತ ಜಾಗರೂಕರಾಗಿ ಕೆಲಸ ಮಾಡಬೇಕೆಂದರು.

ಮಂಡ್ಯ ಲೋಕಸಭಾ ಕ್ಷೇತ್ರದ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿ, ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಗೆಲುವಿಗೆ ಪ್ರತಿಯೊಬ್ಬರು ಪ್ರಾಮಾಣಿಕವಾಗಿ ಕೆಲಸ ಮಾಡಬೇಕು. ಸದಾ ಅಧ್ಯಯನಶೀಲರಾಗಿ ಜನರ ಸಂಕಷ್ಟ ಅರಿತಿರುವ ಅಂತಹ ನಾಯಕರ ಅವಶ್ಯಕತೆ ದೇಶಕ್ಕೆ ಅಗತ್ಯವಿದೆ ಎಂದರು. ಮೋದಿ ಅವರನ್ನು ಮತ್ತೊಮ್ಮೆ ಪ್ರಧಾನಿ ಮಾಡುವ ನಿಟ್ಟಿನಲ್ಲಿ ಲೋಕಸಭಾ ಚುನಾವಣೆಗೆ ಜೆಡಿಎಸ್ ಮತ್ತು ಬಿಜೆಪಿ ಪಕ್ಷಗಳು ಮೈತ್ರಿ ಮಾಡಿಕೊಂಡಿರುವುದು ಉತ್ತಮ ನಿರ್ಧಾರ. ರಾಜ್ಯದ 28 ಕ್ಷೇತ್ರಗಳಲ್ಲಿಯೂ ಪಕ್ಷದ ಪರ ಅಲೆ ಇದ್ದು, ಎಲ್ಲಾ ಕ್ಷೇತ್ರಗಳಲ್ಲಿಯೂ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಗಳು ಜಯಶಾಲಿಯಾಗಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರು ದೇಶ ಕಟ್ಟುವ ಕಾಯಕವನ್ನು ಪ್ರಾಮಾಣಿಕವಾಗಿ ಮಾಡುತ್ತಿದ್ದು, ಅವರ ಕೈ ಬಲಪಡಿಸುವ ಕೆಲಸವನ್ನು ನಾವೆಲ್ಲಾ ಮಾಡಬೇಕು. ಭಾರತ ವಿಶ್ವ ಮಟ್ಟದಲ್ಲಿ ಮತ್ತಷ್ಟು ಪ್ರಸಿದ್ಧಿಯಾಗಲು ಇಂತಹ ಪ್ರಬಲ ನಾಯಕರು ಮತ್ತೆ ಪ್ರಧಾನಿಗಳಾಗಬೇಕೆಂದರು.

ಮಾಜಿ ಶಾಸಕ ಸಾ.ರಾ.ಮಹೇಶ್ ಅವರಂತಹ ಜನಪರ ನಾಯಕರ ನೇತೃತ್ವದಲ್ಲಿ ಎಲ್ಲರೂ ಒಟ್ಟಾಗಿ ಕೆಲಸ ಮಾಡಿ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಗೆಲ್ಲಿಸಿ ನರೇಂದ್ರ ಮೋದಿಯವರಂತಹ ಬಲಿಷ್ಠ ನಾಯಕರ ಜತೆ ಸದಾ ಇರೋಣ ಎಂದರು.

ಈ ವೇಳೆ ಬಿಜೆಪಿ ಜಿಲ್ಲಾ ಗ್ರಾಮಾಂತರ ಉಪಾಧ್ಯಕ್ಷ ಹೊಸಹಳ್ಳಿ ವೆಂಕಟೇಶ್, ಜೆಡಿಎಸ್ ಜಿಲ್ಲಾ ಗ್ರಾಮಾಂತರ ಮಹಿಳಾ ಘಟಕದ ಅಧ್ಯಕ್ಷೆ ದಾಕ್ಷಾಯಿಣಿ, ಪುರಸಭೆ ಸದಸ್ಯರಾದ ಉಮೇಶ್, ಕೆ.ಎಲ್.ಜಗದೀಶ್, ಸಂತೋಷ್‌ಗೌಡ, ತಾಲೂಕು ಜೆಡಿಎಸ್ ವಕ್ತಾರ ಕೆ.ಎಲ್.ರಮೇಶ್, ಮಾಜಿ ಜಿಪಂ ಸದಸ್ಯ ಎಂ.ಟಿ.ಕುಮಾರ್, ಮೈಮುಲ್ ಮಾಜಿ ಅಧ್ಯಕ್ಷ ಎ.ಟಿ.ಸೋಮಶೇಖರ್, ತಾಲೂಕು ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಲಾಲನಹಳ್ಳಿ ಮಹೇಶ್, ಕ್ಷೇತ್ರದ ಚುನಾವಣಾ ಬಿಜೆಪಿ ಸಂಚಾಲಕ ಮಾರ್ಕಂಡೇಯಸ್ವಾಮಿ, ತಾಲೂಕು ಜೆಡಿಎಸ್ ವಕ್ತಾರ ಕೆಎಲ್.ರಮೇಶ್, ಪಿಎಲ್‌ಡಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಹೆಚ್.ಬಿ.ಪ್ರಕಾಶ್, ಜೆಡಿಎಸ್ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಹೆಚ್.ಆರ್. ಮಧುಚಂದ್ರ, ಮುಖಂಡರಾದ ಹೆಚ್.ಪಿ. ಶಿವಣ್ಣ, ವೃಷಬೇಂದ್ರ, ವಿ.ಕೃಷ್ಣಶೆಟ್ಟಿ, ತಾಲೂಕು ಬಿಜೆಪಿ ಮಹಿಳಾ ಘಟಕದ ಅಧ್ಯಕ್ಷೆ ದ್ರಾಕ್ಷಾಯಿಣಿ, ನಿವೃತ್ತ ಎಇಇ ಕೆ.ಬಿ.ಪ್ರಕಾಶ್ ಮತ್ತಿತರರು ಇದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಫ್ಯಾಮಿಲಿ ಸ್ಟಾರ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಯುವ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
---	---
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಯುವ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ಫ್ಯಾಮಿಲಿ ಸ್ಟಾರ್ (ತೆ)	4 ಪ್ರದರ್ಶನಗಳು
ಸಂಗಂ	
ಅವತಾರ ಪುರುಷ (ಕ)	4 ಪ್ರದರ್ಶನಗಳು
ಲಿಡೋ	
ಮ್ಯಾಟ್ನಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಮಾರಿಗೋಲ್ಡ್ (ಕ)	4 ಪ್ರದರ್ಶನಗಳು
ಪ್ರಭಾ	
ಮಾರಿಗೋಲ್ಡ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಸ್ವತಂತ್ರ್ಯ ವೀರ ಸಾವರ್ಕರ್ (ಹಿಂ): ಬೆ.8ಕ್ಕೆ, ಮ.3.50ಕ್ಕೆ, ಕುಂಗ್ ಫು ಪಾಂಡ 4 (3ಡಿ) (ಇಂ): ಬೆ.11.20ಕ್ಕೆ, ಕ್ರೂವ್ (ಹಿಂ): ಮ.1.20ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ರಾ.7.10ಕ್ಕೆ, ರಾ.10.20ಕ್ಕೆ
ಸ್ಕ್ರೀನ್ 2	ದಿ ಫಸ್ಟ್ ಓಮನ್ (ಇಂ): ಬೆ.10.50ಕ್ಕೆ, ರಾ.10.05ಕ್ಕೆ, ಅವತಾರ ಪುರುಷ 2 (ಕ): ಮ.1.35ಕ್ಕೆ, ಸಂ.4.15ಕ್ಕೆ, ಆಡುಜೀವಿತಂ (ಮ): ಸಂ.6.50ಕ್ಕೆ.
ಸ್ಕ್ರೀನ್ 3	ಮ್ಯಾಟ್ನಿ (ಕ): ಬೆ.10.35ಕ್ಕೆ, ರಾ.7.15ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಮ.1.15ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ಸಂ.4ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (ಇಂ): ರಾ.9.55ಕ್ಕೆ.
ಸ್ಕ್ರೀನ್ 4	ಯುವ (ಕ): ಬೆ.10.30ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (ಇಂ): ಮ.1.35ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಅವತಾರ ಪುರುಷ 2 (ಕ): ಬೆ.9.35ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ಮ.12.15ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಯುವ (ಕ): ಬೆ.9.30ಕ್ಕೆ, ಮ.12.45ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಕ್ರೂವ್ (ಹಿಂ): ಸಂ.4ಕ್ಕೆ.
ಸ್ಕ್ರೀನ್ 3	ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.55ಕ್ಕೆ, ಮಾರಿಗೋಲ್ಡ್ (ಕ): ಮ.1.20ಕ್ಕೆ, ಆಡುಜೀವಿತಂ (ಮ): ಸಂ.4.05ಕ್ಕೆ, ಅವತಾರ ಪುರುಷ 2 (ಕ): ರಾ.7.40ಕ್ಕೆ, ಮ್ಯಾಟ್ನಿ (ಕ): ರಾ.10.20ಕ್ಕೆ.
ಸ್ಕ್ರೀನ್ 4	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (ಇಂ): ಬೆ.10.40ಕ್ಕೆ, ಸಂ.4.40ಕ್ಕೆ, ದಿ ಫಸ್ಟ್ ಓಮನ್ (ಇಂ): ಮ.1.15ಕ್ಕೆ, ರಾ.7.15ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಥಂಬರ್ಥ ಪ್ರೇಮಕಥೆ (ತ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಲಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ತೆ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.35ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಆರ್ಟಿಕಲ್ 370 (ಹಿಂ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ಡ್ಯೂನ್ ಪಾರ್ಟ್ 2 (ಇಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ಡೆಮೋನ್ ಸ್ಲೇಯರ್ (ಜ): ಸಂ.4.30ಕ್ಕೆ, ಆಪರೇಷನ್ ವ್ಯಾಲೆಂಟೈನ್ (ತೆ & ಹಿಂ): ಬೆ.9.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ಲಾಪತಾ ಲೇಡಿಸ್ (ಹಿಂ): ಬೆ.10.35ಕ್ಕೆ, ಸಂ.4.10ಕ್ಕೆ, ರಾ.9.45ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಬೆ.10.20ಕ್ಕೆ, ಮ.1.25ಕ್ಕೆ, ರಾ.7.25ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.11.55ಕ್ಕೆ, ಕ್ರೀಂ (ಹಿಂ): ಸಂ.6.55ಕ್ಕೆ, ಪ್ರೇಮಲು (ಮ): ರಾ.10.20ಕ್ಕೆ, ಜೋಶುವಾ (ತ): ಮ.1.20ಕ್ಕೆ, ಸಂ.6.55ಕ್ಕೆ, ಭ್ರಮಯುಗಂ (ಮ): ರಾ.9.45ಕ್ಕೆ, ವಾರನಂ ಆಯಿರಂ (ತ): ಮ.3.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ದೇಶಕ್ಕಾಗಿ ಹೋರಾಡಿದ ಮಹಾನ್ ನಾಯಕ ಬಾಬೂಜಿ


ಗೋಪಾಲಪುರದಲ್ಲಿ ಬಾಬೂಜಿ ಜಯಂತಿ ಆಚರಿಸಲಾಯಿತು.

ತಿ.ನರಸೀಪುರ, ಏ.7– ರಾಜಕೀಯ ಶಕ್ತಿ ಸಿಗದಿದ್ದರೇ ಶೋಷಿತ ಸಮುದಾಯಗಳ ಅಭಿವೃದ್ಧಿ ಅಸಾಧ್ಯ ಎಂದು ಮಾಜಿ ವಿಧಾನ ಪರಿಷತ್ ಸದಸ್ಯ ಸಿ.ರಮೇಶ್ ಅಭಿಪ್ರಾಯಪಟ್ಟರು.

ಪಟ್ಟಣದ ಗೋಪಾಲಪುರದಲ್ಲಿ ನಡೆದ ಹಸಿರು ಕ್ರಾಂತಿ ಹರಿಕಾರ ಡಾ.ಬಾಬುಜಗಜೀವನ್ ರಾಂ ಜಯಂತಿಯಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ದೇಶ ಪ್ರೇಮ ಬೆಳೆಸಿಕೊಂಡು ಎಲ್ಲರೂ ಒಗ್ಗಟ್ಟಾದಾಗ ಮಾತ್ರ ಯಾವುದೇ ಸವಲತ್ತುಗಳನ್ನು ಪಡೆಯಲು ಸಾಧ್ಯ ಎಂದರು.

ನಾವು ಒಗ್ಗಟ್ಟಿನ ಕೊರತೆಯಿಂದ ತೀವ್ರ ಹಿಂದುಳಿದಿದ್ದೇವೆ. ನಾವು ನಮ್ಮ ಹಕ್ಕುಗಳಿಗಾಗಿ ಹೋರಾಡಲು ಮಾನಸಿಕವಾಗಿ ಸಧೃಡರಾಗಬೇಕು. ಆ ಮೂಲಕ ಅನ್ಯಾಯದ ವಿರುದ್ಧ ಪ್ರತಿಭಟಿಸುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು ಎಂದರು.

ಬಾಬು ಜಗಜೀವನರಾಂ ಅವರು ಸಾಮಾನ್ಯ ಕುಟುಂಬದಲ್ಲಿ ಜನಿಸಿ ದೇಶದ ಪ್ರಗತಿಗಾಗಿ ಹೋರಾಡಿದ ಮಹಾನ್ ನಾಯಕ. ಕೇಂದ್ರ ಸರ್ಕಾರದಲ್ಲಿ ಹಲವು ಖಾತೆಗಳನ್ನು ನಿರ್ವಹಿಸಿ ದೇಶದ ಪ್ರಗತಿಗೆ ಶ್ರಮಿಸಿದವರು. ಅವರು ದೇಶದ ಪ್ರಗತಿಗೆ ಹಾಕಿಕೊಟ್ಟ ಮಾರ್ಗದಲ್ಲಿ ನಾವು ಮುನ್ನಡೆಯಬೇಕು ಎಂದರು.

ಬಾಬೂಜಿ ಅವರ ಹಸಿರು ಕ್ರಾಂತಿಯಿಂದ ದೇಶದಲ್ಲಿ ಆಹಾರದ ಕೊರತೆ ನೀಗಿದೆ. ಅಧಿಕಾರ ಮತ್ತು ಆಸ್ತಿಯಿಂದ ಗಳಿಸಲಾಗದ ಕೀರ್ತಿಯನ್ನು ಸೇವೆ ಹಾಗೂ ತ್ಯಾಗದಿಂದ ಗಳಿಸಬಹುದು ಎಂದು ಅವರ ಬದುಕು ತಿಳಿಸಿಕೊಟ್ಟಿದೆ ಎಂದರು.

ಕಾರ್ಯಕ್ರಮದಲ್ಲಿ ಜಯರಾವ್, ಸಿ.ಡಿ.ವೆಂಕಟೇಶ್, ವಿಶ್ವನಾಥ್, ಸಂದೀಪ್, ನಾಗಣ್ಣ, ರಾಜು, ಧನು, ರಮೇಶ್ ಮತ್ತಿತರರಿದ್ದರು.

ಜಿಂಕೆ ಮಾಂಸ ಸಾಗಾಟ: ನಾಲ್ವರು ಬೇಟೆಗಾರರ ಬಂಧನ



ಹುಣಸೂರು, ಏ.7– ಎರಡು ಚುಕ್ಕೆ ಜಿಂಕೆಗಳನ್ನು ಬೇಟೆಯಾಡಿ ಕೊಂದು ಮಾಂಸ ಸಾಗಾಣೆ ಮಾಡುತ್ತಿದ್ದ ನಾಲ್ವರು ಬೇಟೆಗಾರರನ್ನು ಬಂಧಿಸುವಲ್ಲಿ ಅರಣ್ಯಾಧಿಕಾರಿಗಳು ಯಶಸ್ವಿಯಾಗಿದ್ದಾರೆ.

ಶಿಂಡೇನಹಳ್ಳಿ ಗ್ರಾಮದ ನಿವಾಸಿ ಮಂಜೇಗೌಡರ ಪುತ್ರ ಎಂ.ಶ್ರೀನಿವಾಸ ಅಲಿಯಾಸ್ ದಾಸ(19), ಬಿಲ್ಲೇನಹೊಸಳ್ಳಿ ಗ್ರಾಮದ ನಿವಾಸಿ ಲೇ.ಮಾದೇಶ್ ಅವರ ಪುತ್ರ ಶಿವು ಅಲಿಯಾಸ್ ಮಹೇಶ್(18), ಹನಗೋಡು ಗ್ರಾಮದ ನಿವಾಸಿ ಸುಬ್ಬಾಚಾರಿ ಅವರ ಪುತ್ರ ಶ್ರೀನಿವಾಸ(42), ಕಿರಂಗೂರು ಗ್ರಾಮದ ನಿವಾಸಿ ಲೇ. ಬಸವರಾಜಾಚಾರಿ ಅವರ ಪುತ್ರ ಬಸವಲಿಂಗಾಚಾರಿ(36) ಬಂಧಿತ ಆರೋಪಿಗಳು. ಇವರಿಂದ 25 ಕೆಜಿ ಚುಕ್ಕೆ ಜಿಂಕೆ ಮಾಂಸ, ಜಿಂಕೆಯ ತಲೆ, ಚರ್ಮ, ಬಾಲ ಹಾಗೂ ಕಾಲು, ಕೃತ್ಯಕ್ಕೆ ಬಳಸಿದ 150 ಸಿಸಿ ಬಜಾಜ್ ಪಲ್ಸರ್, 125 ಸಿಸಿ ಹೋಂಡಾ ಶೈನ್, 125 ಸಿಸಿ ಹೋಂಡ ಎಸ್‌ಪಿ ಸೇರಿದಂತೆ ಮೂರು ಬೈಕ್‌ಗಳು. ಅಲ್ಲದೆ, ಕತ್ತಿ, ಚಾಕು, ತೂಕ ಮಾಡುವ ಡಿಜಿಟಲ್ ಯಂತ್ರ, ಮರದ ಕೊಂಟು ವಶಪಡಿಸಿಕೊಳ್ಳಲಾಗಿದೆ.

ಏ.7 ರಂದು ಹುಣಸೂರು ವನ್ಯಜೀವಿ ವಲಯ ಅರಣ್ಯಾಧಿಕಾರಿ ಕೆ.ಇ.ಸುಬ್ರಹ್ಮಣ್ಯ, ಕಚುವಿನಹಳ್ಳಿ ಶಾಖೆಯ ಉಪ ವಲಯ ಅರಣ್ಯಾಧಿಕಾರಿ ಹೆಚ್.ಎಂ.ಪ್ರಮೋದ್ ಮತ್ತು ಗಸ್ತು ಅರಣ್ಯ ಪಾಲಕರು ಹಾಗೂ ಎಪಿಸಿ ಸಿಬ್ಬಂದಿ ಖಚಿತ ಮಾಹಿತಿ ಮೇರೆಗೆ ರಾತ್ರಿ ಗಸ್ತು ಮಾಡುತ್ತಿದ್ದ ವೇಳೆ ಹನಗೋಡು ಮತ್ತು ಅಬ್ಬೂರು ಗ್ರಾಮದ ರಸ್ತೆಯಲ್ಲಿರುವ ಕಾಳಮ್ಮ ದೇವಸ್ಥಾನ ಬಳಿ ಆರೋಪಿಗಳು 2 ಚುಕ್ಕೆ ಜಿಂಕೆ ಬೇಟೆಯಾಡಿ ಸಾಗಿಸುತ್ತಿದ್ದರು. ಈ ವೇಳೆ ದಾಳಿ ನಡೆಸಿದ ಅರಣ್ಯಾಧಿಕಾರಿಗಳು ನಾಲ್ವರನ್ನು ಬಂಧಿಸಿ ಅವರಿಂದ ಕೃತ್ಯಕ್ಕೆ ಬಳಸಿದ ವಸ್ತುಗಳು, ಜಿಂಕೆ ಮಾಂಸ ವಶಪಡಿಸಿಕೊಂಡು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಪ್ರಕರಣ ಸಂಬಂಧ ಇನ್ನೂ ಆರು ಮಂದಿ ತಲೆಮರೆಸಿಕೊಂಡಿದ್ದು, ಅವರ ಬಂಧನಕ್ಕೆ ಕಾರ್ಯಾಚರಣೆ ನಡೆಸಲಾಗುತ್ತಿದೆ.

ಯಾಲಹಳ್ಳಿಯಲ್ಲಿ ಬೋಸ್ ಪರ ಮತಯಾಚನೆ


ನಂಜನಗೂಡು ತಾಲೂಕಿನ ಯಾಲಹಳ್ಳಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಪರ ಮತಯಾಚಿಸಿದರು. ಈ ವೇಳೆ ಕಾರ್ಯಕರ್ತರಾದ ನಾಗೇಂದ್ರ, ಪ್ರಸಾದ್, ಮಹದೇವಪ್ಪ, ಬಸವರಾಜೇಂದ್ರ, ನಾಗರಾಜಪ್ಪ, ಗುರು, ಶಶಿಕುಮಾರ್, ಮಂಜು, ಬಸವಣ್ಣ, ರವಿ, ಗುರುಸ್ವಾಮಿ,ಮಹದೇವಸ್ವಾಮಿ, ಪುಟ್ಟ, ಚಿಕ್ಕರಾಜ ಇತರರಿದ್ದರು.

ವರುಣ ಕ್ಷೇತ್ರದಲ್ಲಿ ಬೋಸ್ ಭರ್ಜರಿ ರೋಡ್ ಶೋ


ವರುಣ ಕ್ಷೇತ್ರದಲ್ಲಿ ಸುನೀಲ್ ಬೋಸ್ ರೋಡ್ ಶೋ ನಡೆಸಿದರು.

ನಂಜನಗೂಡು, ಏ.7– ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಚಾಮರಾಜನಗರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಹಾಗೂ ಮಾಜಿ ಶಾಸಕ ಡಾ.ಯತೀಂದ್ರ ಅವರು ವರುಣ ಕ್ಷೇತ್ರದಲ್ಲಿ ಭರ್ಜರಿ ರೋಡ್ ಶೋ ನಡೆಸಿದರು.

ವರುಣ ಕ್ಷೇತ್ರಕ್ಕೆ ಒಳಪಡುವ ನಂಜನಗೂಡು ತಾಲೂಕಿನ ಕಾರ್ಯ ಗ್ರಾಮದ ಕಾರ್ಯ ಸಿದ್ದೇಶ್ವರ ಬೆಟ್ಟದಲ್ಲಿ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಕಾರ್ಯ, ದಾಸನೂರು, ಕೋಣನೂರು, ತಗಡೂರು, ಮಲ್ಲೂಪುರ, ನಗರ್ಲೆ, ಸುತ್ತೂರು, ಬಿಳಿಗೆರೆ ಗ್ರಾಪಂ ವ್ಯಾಪ್ತಿಯಲ್ಲಿ ತೆರೆದ ಜೀಪಿನಲ್ಲಿ ಮತಯಾಚನೆ ನಡೆಸಿದರು. ಇವರಿಗೆ ಮಾಜಿ ಎಂಎಲ್‌ಸಿ ಮರಿತಿಬ್ಬೇಗೌಡ, ಮಾಜಿ ಸಂಸದ ಕಾಗಲವಾಡಿ ಶಿವಣ್ಣ ಸಾಥ್ ನೀಡಿದರು.


ಮಾಜಿ ಶಾಸಕ ಡಾ.ಯತೀಂದ್ರ ಮಾತನಾಡಿ, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಲ್ಲಿ ಬಡಕುಟುಂಬದ ಮಹಿಳೆಯರಿಗೆ 1 ಲಕ್ಷ, ಉದ್ಯೋಗ ನೇಮಕಾತಿ ಯಲ್ಲಿ ಶೇ.50ರಷ್ಟು ಮೀಸಲಾತಿ, ರೈತರಿಗಾಗಿ ಸ್ವಾಮಿನಾಥನ್ ಆಯೋಗದ ಶಿಫಾರಸ್ಸಿನಂತೆ ಎಂಎಸ್‌ಪಿ ಕಾನೂನು, ರೈತರ ಸಾಲಮನ್ನಾ, ಕೃಷಿಯನ್ನು ಜಿಎಸ್‌ಟಿಯಿಂದ ಮುಕ್ತಗೊಳಿಸುವುದು ಸೇರಿದಂತೆ 25 ಗ್ಯಾರಂಟಿಗಳನ್ನು ಜಾರಿಗೊಳಿಸುವುದಾಗಿ ಪ್ರಣಾಳಿಕೆಯಲ್ಲಿ ಭರವಸೆ ನೀಡಲಾಗಿದೆ. ಬಡವರ ಬದುಕು ಹಸನಾಗಲು ಸುನೀಲ್ ಬೋಸ್ ಅವರನ್ನು ಹೆಚ್ಚು ಮತಗಳಿಂದ ಗೆಲ್ಲಿಸಿ ಎಂದರು. ಅಭ್ಯರ್ಥಿ ಸುನೀಲ್ ಬೋಸ್ ಮಾತನಾಡಿ, ನುಡಿದಂತೆ ನಡೆದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರಕ್ಕೆ ಶಕ್ತಿ ತುಂಬಲು ಮತ್ತು ದಿ.ಆರ್.ಧ್ರುವನಾರಾಯಣ್ ಆತ್ಮಕ್ಕೆ ಶಾಂತಿ ಸಿಗಲು ಕಾಂಗ್ರೆಸ್ ಪಕ್ಷದ ಸಾಧನೆಯನ್ನು ಮನೆ ಮನೆಗೆ ತಿಳಿಸಿ ಹೆಚ್ಚಿನ ಮತಗಳನ್ನು ಕೊಡಿಸುವ ಮೂಲಕ ನನ್ನನ್ನು ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

ಪ್ರತಿಭಟನಾಕಾರರ ಆಕ್ರೋಶ: ಮಲ್ಲೂಪುರ ಗ್ರಾಪಂನಲ್ಲಿ ರೋಡ್ ಶೋ ನಡೆಸುವ ವೇಳೆ ಬಣ್ಣಾರಿ ಅಮ್ಮನ್ ಶುಗರ್ ಕಾರ್ಖಾನೆ ಎದುರು ಉದ್ಯೋಗ ನೀಡುವಂತೆ ಆಗ್ರಹಿಸಿ ನಡೆಸುತ್ತಿರುವ ಪ್ರತಿಭಟನಾನಿರತರು ಯತೀಂದ್ರ ಮತ್ತು ಅಭ್ಯರ್ಥಿ ಸುನೀಲ್‌ಬೋಸ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಡಾ.ಯತೀಂದ್ರ ಕಾರ್ಖಾನೆಯವರಿಗೆ ಉದ್ಯೋಗ ನೀಡುವಂತೆ ಸೂಚಿಸಿದ್ದರೂ ಅವರು ಒಪ್ಪಿಲ್ಲ. ಆದ್ದರಿಂದ ಮುಖ್ಯಮಂತ್ರಿಗಳಿಗೆ ತಿಳಿಸಿ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಮನವೊಲಿಸಲು ಮುಂದಾದರು. ಈ ಸಂದರ್ಭ ಪ್ರತಿಭಟನಾನಿರತರು ನೀವು ಈ ಮಾತನ್ನು ಸಾಕಷ್ಟು ಬಾರಿ ಹೇಳಿದ್ದೀರಿ. ನೀವು ನಮ್ಮ ಸಮಸ್ಯೆಯನ್ನು ಸಿದ್ದರಾಮಯ್ಯರಿಗೆ ತಿಳಿಸಿಯೇ ಇಲ್ಲ. ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ನಮ್ಮನ್ನು ಸಂತೈಸಲು ಬಂದಿದ್ದೀರಿ ಹೊರತು ನಮ್ಮ ಸಮಸ್ಯೆ ಬಗೆಹರಿಸಲು ಮುಂದಾಗಿಲ್ಲ. ಹೀಗಾಗಿ ಲೋಕಸಭಾ ಚುನಾವಣೆಯಲ್ಲಿ ಗ್ರಾಮಸ್ಥರೆಲ್ಲರೂ ಚುನಾವಣೆ ಬಹಿಷ್ಕರಿಸುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಈ ವೇಳೆ ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಗಸ್ವಾಮಿ, ಜಿಪಂ ಮಾಜಿ ಸದಸ್ಯೆ ಲತಾ, ಮುಖಂಡರಾದ ಸರ್ವೇಶ್, ದಕ್ಷಿಣಮೂರ್ತಿ, ಕುಮಾರ್, ರಾಜು, ಕೆಂಪಣ್ಣ, ಆರ್.ಮಹದೇವು, ಮುದ್ದುಮಾದೇಗೌಡ, ಗುರುಪಾದಸ್ವಾಮಿ, ಮೋಹನ್‌ಕುಮಾರ್, ಮಹೇಶ್, ಸಿ.ಆರ್.ಮಹದೇವು, ಜಗದೀಶ್, ತಾಪಂ ಮಾಜಿ ಸದಸ್ಯ ಪದ್ಮನಾಭ ಇತರರಿದ್ದರು.

ಗೂಡ್ಸ್ ವಾಹನ ಡಿಕ್ಕಿ: ವ್ಯಕ್ತಿ ಸಾವು





ಹುಣಸೂರು, ಏ.7– ಮನೆ ಮುಂದೆ ನಿಂತಿದ್ದ ವ್ಯಕ್ತಿಗೆ ಟಾಟಾ ಬೊಲೆರೋ ಗೂಡ್ಸ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಆತ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಗಾವಡಗೆರೆ ಸಮೀಪದ ಉಂಡ ವಾಡಿ ಗ್ರಾಮದಲ್ಲಿ ಭಾನುವಾರ ರಾತ್ರಿ ನಡೆದಿದೆ. ಗ್ರಾಮದ ನಿವಾಸಿ ರಾಜೇಗೌಡ(65) ಸಾವನ್ನಪ್ಪಿದವರು.

ವಿವರ: ಕೊಡಗಿನ ಗೋಣಿಕೊಪ್ಪ ನಿವಾಸಿ ಮಂಜು ಅವರಿಗೆ ಸೇರಿದ ಟಾಟಾ ಬೊಲೆರೋ ಗೂಡ್ಸ್ ವಾಹನ (ಕೆಎ.12, ಬಿ.5930) ವನ್ನು ಗೌಡನಹಳ್ಳಿ ಗ್ರಾಮದ ಪೃಥ್ವಿ ಎಂಬಾತ ಕೆ.ಆರ್.ನಗರದಲ್ಲಿ ರಿಪೇರಿ ಮಾಡಿಸಿಕೊಂಡು ಉಲ್ಲಾಳ್ ಮಾರ್ಗವಾಗಿ ಪತ್ನಿ ಮನೆ ತೊಂಡಾಳ ಗ್ರಾಮಕ್ಕೆ ತೆರಳುತ್ತಿದ್ದ ವೇಳೆ ಉಂಡುವಾಡಿ ಗ್ರಾಮದಲ್ಲಿ ಮನೆ ಮುಂದೆ ನಿಂತಿದ್ದ ರಾಜೇಗೌಡನಿಗೆ ಡಿಕ್ಕಿ ಹೊಡೆದಿದ್ದಾನೆ. ಪರಿಣಾಮ ತೀವ್ರ ಗಾಯಗೊಂಡ ಆತ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಬಳಿಕ ಮುಂದೆ ಹಸುವಿಗೆ ಡಿಕ್ಕಿ ಹೊಡೆದು ರಸ್ತೆ ಬಳಿಯ ಹಳ್ಳಕ್ಕೆ ಗೂಡ್ಸ್ ವಾಹನ ಉರುಳಿದೆ. ಘಟನೆ ಬಳಿಕ ವಾಹನ ಚಾಲಕ ಪೃಥ್ವಿ ಸ್ಥಳದಿಂದ ಪರಾರಿಯಾಗಿದ್ದಾನೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಬಿಳಿಕೆರೆ ಪೊಲೀಸರು ಪರಿಶೀಲನೆ ನಡೆಸಿ, ಶವವನ್ನು ಕೆ.ಆರ್.ನಗರ ಸಾರ್ವಜನಿಕರ ಆಸ್ಪತ್ರೆಗೆ ರವಾನಿಸಿ ವಾಹನವನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ರಾಜಣ್ಣ ನಿಧನ



ಸರಗೂರು, ಏ.7– ಪಟ್ಟಣದ 4ನೇ ವಾರ್ಡ್ ಪಪಂ ಸದಸ್ಯ ಎಸ್.ಎಲ್.ರಾಜಣ್ಣ(56) ಭಾನುವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಪಟ್ಟಣದ ಅಂಬೇಡ್ಕರ್ ರುದ್ರಭೂಮಿಯಲ್ಲಿ ಸಂಜೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರ ನಿಧನಕ್ಕೆ ಹಲವು ಗಣ್ಯರು ಸಂತಾಪ ಸೂಚಿಸಿದ್ದಾರೆ.

'ಕೈ' ಭದ್ರಕೋಟೆ ಚಾ.ನಗರದಲ್ಲಿ ಸುನೀಲ್ ಬೋಸ್ ಗೆಲ್ಲಿಸಿ

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮನವಿ


ತಿ.ನರಸೀಪುರದಲ್ಲಿ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಸಚಿವ ಮಹದೇವಪ್ಪ ಅವರನ್ನು ಸನ್ಮಾನಿಸಲಾಯಿತು.

" ಪ್ರಸಕ್ತ ಚುನಾವಣೆ ಅಸೆಂಬ್ಲಿ ಅಥವಾ ಜಿಪಂ ಚುನಾವಣೆಗಳಂತಲ್ಲ. 2 ಸಾವಿರ ಬೂತ್‌ಗಳಿವೆ. ಸಾವಿರಾರು ಹಳ್ಳಿ ಗಳಿವೆ. 15–16 ದಿನಗಳಲ್ಲಿ ಅಭ್ಯರ್ಥಿ ಹೋಗಲು ಸಾಧ್ಯವಾಗದು. ಹಾಗಾಗಿ ನಿಮ್ಮ ಊರಲ್ಲಿ ಬೂತ್ ಜವಾಬ್ದಾರಿ ನೀವೇ ನೋಡಿಕೊಳ್ಳಬೇಕು. ಕ್ಷೇತ್ರದಲ್ಲಿ ನಾನಿದ್ದೇನೆ. ಮುಖ್ಯಮಂತ್ರಿಗಳಿದ್ದಾರೆ. ಚಾಮರಾಜನಗರ, ಮೈಸೂರು–ಕೊಡಗು ಕ್ಷೇತ್ರದ ಕಡೆಗೆ ಇಡೀ ರಾಜ್ಯವೇ ನೋಡುತ್ತಿದೆ. ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಬೆಂಬಲ ಹೇಗಿದೆ ಎಂದು ಕಾತುರದಿಂದ ಕಾಯುತ್ತಿದ್ದಾರೆ. ಹಾಗಾಗಿ ಕಳೆದ 40 ವರ್ಷಗಳಿಂದ ರಾಜಕೀಯ ಸಹಕಾರ ಕೊಟ್ಟ ನೀವು ಈ ಚುನಾವಣೆಯಲ್ಲೂ ವ್ಯಾಪಕ ಬೆಂಬಲ ನೀಡುತ್ತೀರೆಂಬ ವಿಶ್ವಾಸ ನಮ್ಮದಾಗಿದೆ. ನನಗೆ ನೀಡಿದ ರಾಜಕೀಯ ಬೆಂಬಲವನ್ನು ಸುನೀಲ್ ಬೋಸ್‌ಗೂ ನೀಡಿ ಅವನನ್ನು ಅತ್ಯಧಿಕ ಬಹು ಮತಗಳಿಂದ ಗೆಲ್ಲಿಸಿಕೊಡಿ.

– ಹೆಚ್.ಸಿ.ಮಹದೇವಪ್ಪ, ಜಿಲ್ಲಾ ಉಸ್ತುವಾರಿ ಸಚಿವ

ತಿ.ನರಸೀಪುರ, ಮಾ.7– ಚಾಮರಾಜನಗರ ಲೋಕಸಭಾ ಕ್ಷೇತ್ರ ಕಾಂಗ್ರೆಸ್ ಭದ್ರಕೋಟೆ. ಇದನ್ನು ಯಾರೂ ಭೇದಿಸದಂತೆ ಕಾರ್ಯಕರ್ತರು, ಮುಖಂಡರು ರಕ್ಷಾ ಕವಚವಾಗಿ ನಿಂತು ಕಾಂಗ್ರೆಸ್ ಅಭ್ಯರ್ಥಿಯನ್ನು ಹೆಚ್ಚು ಮತಗಳ ಅಂತರದಿಂದ ಗೆಲ್ಲಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮನವಿ ಮಾಡಿದರು.

ಪಟ್ಟಣದ ಚಿಕ್ಕಮ್ಮತಾಯಿ ಯಾತ್ರೀ ಭವನದಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಪರ ಮತಯಾಚಿಸಿ ಮಾತನಾಡಿದ ಅವರು, ಸುನೀಲ್ ಬೋಸ್ ಕಳೆದ 15 ವರ್ಷಗಳಿಂದ ನಿಮ್ಮೊಂದಿಗೆ ಒಡನಾಟ ಹೊಂದಿದ್ದು, ಕ್ಷೇತ್ರದ ಜನರ ಕಷ್ಟ ಸುಖಕ್ಕೆ ಪ್ರಾಮಾಣಿಕವಾಗಿ ಸ್ಪಂದಿಸುವ ಕೆಲಸ ಮಾಡಿದ್ದಾನೆ. ಈ ಬಾರಿ ಅವನಿಗೆ ಹೈಕಮಾಂಡ್ ಟಿಕೆಟ್ ನೀಡಿದ್ದು, ಅವನನ್ನು ಗೆಲ್ಲಿಸಿ ಲೋಕಸಭೆಗೆ ಕಳುಹಿಸಿಕೊಡುವ ಜವಾಬ್ದಾರಿ ನಿಮ್ಮದಾಗಿದೆ. ನಾನು ಕ್ಷೇತ್ರದ ಜನಪ್ರತಿನಿಧಿಯಾಗಿದ್ದೇನೆ. ಸಿದ್ದರಾಮಯ್ಯ ಪ್ರತಿನಿಧಿಯಾಗಿದ್ದಾರೆ. ಇನ್ನೊಬ್ಬ ಪ್ರತಿನಿಧಿ ಸುನೀಲ್ ಆಗಬೇಕು. ಮತ್ತೊಬ್ಬ ಪ್ರತಿನಿಧಿ ಯತೀಂದ್ರ ಆಗಬೇಕು. ಹೀಗಾಗಿ ನೀವೆಲ್ಲರೂ ಒಟ್ಟಾಗಿ ಕೆಲಸ ಮಾಡಿ ಕಾಂಗ್ರೆಸ್ ಅಭ್ಯರ್ಥಿಗೆ ಜಯ ತಂದುಕೊಡಬೇಕು ಎಂದರು.

ಬಿಜೆಪಿ ಧರ್ಮ, ದೇವರ ಹೆಸರಿನಲ್ಲಿ ಮತ ಕೇಳುತ್ತಿದೆ. ಜನರು ಜಾಗೃತರಾಗಿ ಮತ ಚಲಾಯಿಸಬೇಕು. ಅಭಿವೃದ್ಧಿ, ದೀನ ದಲಿತರ ಪರ ಸದಾ ಕಾಲ ಚಿಂತಿಸುವ ಕಾಂಗ್ರೆಸ್ ಪಕ್ಷಕ್ಕೆ ಅಧಿಕಾರ ನೀಡಬೇಕು. ಜನವಿರೋಧಿ ಆಡಳಿತ ನಡೆಸುತ್ತಿರುವ ಬಿಜೆಪಿ ಸರ್ಕಾರ ಮತ್ತೆ ಕೇಂದ್ರದಲ್ಲಿ ಅಧಿಕಾರ ಹಿಡಿಯಬಾರದು. ಜನರ ಬದುಕನ್ನು ನಾಶ ಮಾಡಲು, ಸರ್ವಾಧಿಕಾರ ಆಡಳಿತ ನಡೆಸಲು ಸಂವಿಧಾನ ಬದಲಾವಣೆ ಮಾಡಿ ಪ್ರಜಾಪ್ರಭುತ್ವ ಅಳಿಸುವ ಕೆಲಸ ಮಾಡಲು ಹೊರಟಿಸದ್ದಾರೆ. ಅದಕ್ಕೆ ಅವಕಾಶ ಕೊಡಬಾರದು. ಕಾಂಗ್ರೆಸ್‌ಗೆ ತಿ.ನರಸೀಪುರದಲ್ಲಿ ಹೆಚ್ಚು ಬಹುಮತ ನೀಡಬೇಕು. 40 ವರ್ಷಗಳ ಅವಧಿಯಲ್ಲಿ ಆದ ಅಭಿವೃದ್ಧಿ ಕೆಲಸ ಯಾರ ಕಾಲದಲ್ಲಿಯೂ ಆಗಿಲ್ಲ. ಹೀಗಾಗಿ ನಮ್ಮನ್ನು ಬೆಂಬಲಿಸುತ್ತೀರಿ ಎಂದು ನಂಬಿದ್ದೇನೆ. ಪ್ರತಿಯೊಂದು ಬೂತ್‌ನಲ್ಲಿ ಕಳೆದ ವಿಧಾನಸಭೆ ಚುನಾವಣೆಯಲ್ಲಿ ನೀಡಿದ ಮತಕ್ಕಿಂತ ಹೆಚ್ಚುವರಿಯಾಗಿ 50 ಮತಗಳನ್ನು ಹೆಚ್ಚುವರಿಯಾಗಿ ಬರುವಂತೆ ಕಾರ್ಯಕರ್ತರು ನೋಡಿಕೊಳ್ಳಬೇಕು ಎಂದರು.

ಸಭೆಯಲ್ಲಿ ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಬಿ.ಜೆ.ವಿಜಯ್ ಕುಮಾರ್, ಜಿಪಂ ಮಾಜಿ ಸದಸ್ಯ ಮಂಜುನಾಥ್, ಶಶಿಕಲಾ ನಾಗರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು, ಪುರಸಭಾ ಮಾಜಿ ಅಧ್ಯಕ್ಷರಾದ ಎಸ್.ಮದನ್ ರಾಜು, ಟಿ.ಎಂ.ನಂಜುಂಡಸ್ವಾಮಿ, ಸದಸ್ಯರಾದ ತುಂಬಲ ಪ್ರಕಾಶ್, ಬಾದಾಮಿ ಮಂಜು, ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಉಕ್ಕಲಗೆರೆ ಬಸವಣ್ಣ, ಮನ್ಸೂರ್ ಅಲಿ, ಪಪಂ ಮಾಜಿ ಅಧ್ಯಕ್ಷ ಬಸವಣ್ಣ, ಮಾಜಿ ಉಪಾಧ್ಯಕ್ಷ ರೇಣುಕಾರಾಮು, ಮಹಿಳಾ ಘಟಕದ ಅಧ್ಯಕ್ಷ ಲತಾ ಜಗದೀಶ್, ಪ್ರೊ.ಡಾ. ಜ್ಞಾನಪ್ರಕಾಶ್, ಬಸವರಾಜು, ತಾಪಂ ಅಧ್ಯಕ್ಷ ಎಚ್.ಎನ್.ಉಮೇಶ್, ಕೊತ್ತೆಗಾಲ ಬಸವರಾಜು, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಮಾದ್ರಹಳ್ಳಿ ಶಿವಮೂರ್ತಿ, ಸುಹಾಸ್ ನಾಯಕ್, ಗ್ರಾಪಂ ಮಾಜಿ ಅಧ್ಯಕ್ಷ ಎ.ಜೆ. ವೆಂಕಟೇಶ್, ಟೌನ್ ಅಧ್ಯಕ್ಷ ಅಂದಾನಿ ಗೌಡ, ಮಾದೇಶ್, ಗ್ಯಾಸ್ ಉಮೇಶ್, ಅನುಪ್ ಗೌಡ, ಅಸ್ಲಾಂ, ಸಹಾಯಕ ಬಸವರಾಜು ಮತ್ತಿತರರಿದ್ದರು.